ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 22 ಸೋಮವಾರ 2022

ಸಂಪುಟ: 43 | ಸಂಚಿಕೆ: 127 | ಪುಟಗಳು: 10

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಮಂಡ್ಯ ಉದ್ಯಮಿಯ ಹನಿಟ್ರ್ಯಾಪ್ ಮಾಡಿ 50 ಲಕ್ಷ ವಸೂಲಿ

● ಮಹಿಳೆ ಬಂಧನ, ಮೈಸೂರಿನ ಲಾಡ್ಜ್‌ನಲ್ಲಿ ಯುವತಿಯೊಂದಿಗೆ ಉದ್ಯಮಿಯ ವಿಡಿಯೋ ಕವರೇಜ್ ಮಾಡಿ ಬ್ಲಾಕ್‌ಮೇಲ್ ● ಆರು ತಿಂಗಳ ಹಿಂದೆ ನಡೆದಿದ್ದ ಪ್ರಕರಣ; ಆಗಸ್ಟ್ 19ರಂದು ದೂರು ದಾಖಲು

ಮಂಡ್ಯ, ಆ. 21– ಅಪರಿಚಿತ ಯುವತಿಯೊಂದಿಗೆ ವಿಡಿಯೋ ಚಿತ್ರೀಕರಿಸಿಕೊಂಡು ಬಿಜೆಪಿ ಮುಖಂಡರಾದ ಉದ್ಯಮಿಯೊಬ್ಬರನ್ನು ಹನಿಟ್ರ್ಯಾಪ್ ಮಾಡಿ 50 ಲಕ್ಷ ಕಸಿದ ಆರೋಪದ ಮೇರೆಗೆ ಮಂಡ್ಯ ಪಶ್ಚಿಮ ಠಾಣೆ ಪೊಲೀಸರು ಮಹಿಳೆಯೊಬ್ಬಳನ್ನು ಬಂಧಿಸಿದ್ದು, ಇತರರಿಗಾಗಿ ಹುಡುಕಾಟ ನಡೆಸಿದ್ದಾರೆ.

ಬಿಜೆಪಿ ಧಾರ್ಮಿಕ ಪ್ರಕೋಷ್ಠದ ಗೌರವ ಅಧ್ಯಕ್ಷರೂ ಆದ ಮಂಡ್ಯದ ವಿವಿ ರಸ್ತೆಯಲ್ಲಿರುವ ಶ್ರೀನಿಧಿ ಗೋಲ್ಡ್‌ನ ಮಾಲೀಕ ಜಗನ್ನಾಥ್ ಎಸ್. ಶೆಟ್ಟಿ ಹನಿಟ್ರ್ಯಾಪ್‌ಗೆ ಒಳಗಾದವರಾಗಿದ್ದು, ಈ ಘಟನೆ ನಡೆದು 6 ತಿಂಗಳು ಕಳೆದಿದ್ದರೂ ಆಗಸ್ಟ್ 19ರಂದು ಅವರು ದೂರು ನೀಡಿದ್ದು, ಕೇವಲ ಎರಡೇ ದಿನದಲ್ಲಿ ಪೊಲೀಸರು ಮಹಿಳೆಯನ್ನು ಬಂಧಿಸಿದ್ದಾರೆ.

ವಿವರ: ಜಗನ್ನಾಥ್ ಎಸ್.ಶೆಟ್ಟಿಯವರು ಫೆಬ್ರವರಿ 26ರಂದು ರಾತ್ರಿ ಮೈಸೂರಿನಿಂದ ಮಂಗಳೂರಿಗೆ ತೆರಳಲು ರಾಜಹಂಸ ಬಸ್‌ನಲ್ಲಿ ಟಿಕೆಟ್ ಕಾಯ್ದಿರಿಸಿದ್ದರು. ಮೈಸೂರಿಗೆ ಹೋಗುವ ಸಲುವಾಗಿ ಅಂದು ರಾತ್ರಿ 8 ಗಂಟೆ ಸುಮಾರಿನಲ್ಲಿ ಮಂಡ್ಯದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಸ್‌ಗಾಗಿ ಕಾಯುತ್ತಾ ನಿಂತಿದ್ದರು. ಈ ವೇಳೆ ಕಾರಿನಲ್ಲಿ ಬಂದ ಅಪರಿಚಿತರು, "ನೀವು ಶ್ರೀನಿಧಿ ಗೋಲ್ಡ್‌ನವರಲ್ಲವೇ?" ಎಂದು ಪ್ರಶ್ನಿಸಿದ್ದಾರೆ. ಇವರು ಹೌದು ಎಂದು ಹೇಳಿ ಮೈಸೂರಿಗೆ ಹೋಗಲು ಬಸ್‌ಗೆ ಕಾಯುತ್ತಿರುವುದಾಗಿಯೂ ತಿಳಿಸಿದ್ದಾರೆ. ಆಗ ಅಪರಿಚಿತ ವ್ಯಕ್ತಿಗಳು ತಾವು ಮೈಸೂರಿಗೆ ಹೋಗುತ್ತಿರುವುದಾಗಿ ಅಲ್ಲಿಗೆ ಡ್ರಾಪ್ ಕೊಡುವುದಾಗಿ ತಿಳಿಸಿ ಶೆಟ್ಟಿಯವರನ್ನು ಕಾರಿಗೆ ಹತ್ತಿಸಿಕೊಂಡಿದ್ದಾರೆ.

ಕಾರಿನಲ್ಲಿ ಮಹಿಳೆ ಸೇರಿ ನಾಲ್ವರಿದ್ದು, ಮಹಿಳೆಯು ಸಲ್ಮಾ ಬಾನು ಎಂದು ಮತ್ತೋರ್ವ ಜಯಂತ್ ಎಂದು ಪರಿಚಯಿಸಿಕೊಂಡು ಶೆಟ್ಟಿ ಅವರನ್ನು ಬಹಳ ಪರಿಚಯವಿರುವಂತೆ ಮಾತನಾಡಿಕೊಂಡೇ ಮೈಸೂರು ತಲುಪಿದ್ದಾರೆ. ನಂತರ ಸ್ನೇಹಿತರು ಚಿನ್ನದ ಬಿಸ್ಕೆಟ್ ತಂದಿದ್ದಾರೆ. ಅವರು ಮೈಸೂರಿನ ದರ್ಶನ್ ಪ್ಯಾಲೇಸ್ ಲಾಡ್ಜ್‌ನಲ್ಲಿದ್ದಾರೆ. ಅಲ್ಲಿಗೆ ಬಂದು ಚಿನ್ನದ ಅಸಲಿಯತ್ತನ್ನು ನೋಡಿ ಹೇಳುವಂತೆ ಶೆಟ್ಟಿಯವರನ್ನು ಕೇಳಿಕೊಂಡಿದ್ದಾರೆ.

ಇವರ ಜೊತೆ ಶೆಟ್ಟಿಯವರು ಲಾಡ್ಜ್‌ನ ರೂಂ ಪ್ರವೇಶಿಸುತ್ತಿದ್ದಂತೆಯೇ ಜೊತೆಯಲ್ಲಿ ಬಂದಿದ್ದವರು ಹಠಾತ್ತನೇ ಅಲ್ಲಿಂದ ಜಾಗ ಖಾಲಿ ಮಾಡಿದ್ದು, ರೂಂನಲ್ಲಿ 22ರಿಂದ 25 ವಯಸ್ಸಿನ ಯುವತಿ ಇದ್ದಳು. ಕೆಲ ನಿಮಿಷಗಳ ನಂತರ ಸಲ್ಮಾ ಬಾನು, ಜಯಂತ್ ಜೊತೆ ಇನ್ನೂ ನಾಲ್ವರು ರೂಮ್‌ಗೆ ಪ್ರವೇಶಿಸಿದ್ದಾರೆ. ಅವರಲ್ಲಿ ಓರ್ವ "ಈಕೆ ನನ್ನ ತಂಗಿ ಇವಳನ್ನು ನೀನು ಲಾಡ್ಜ್‌ಗೆ ಕರೆದುಕೊಂಡು ಬಂದಿದ್ದೀಯಾ ಎಂದು ಕೇಳುತ್ತಾ ಅವರ ಮೇಲೆ ಹಲ್ಲೆ ನಡೆಸಿ, ಯುವತಿಯೊಂದಿಗೆ ಅವರನ್ನು ನಿಲ್ಲಿಸಿ ವಿಡಿಯೋ ಕವರೇಜ್ ಮಾಡಿದ್ದಾರೆ. ನಂತರ ನಾಲ್ಕು ಕೋಟಿ ರೂ. ನೀಡುವಂತೆಯೂ ಇಲ್ಲದಿದ್ದರೆ ಕೊಲೆ ಮಾಡುವುದಾಗಿಯೂ ಬೆದರಿಸಿದ್ದಾರೆ. ಅಂದು ರಾತ್ರಿ 2 ಗಂಟೆ ಸುಮಾರಿನಲ್ಲಿ ಮಾತುಕತೆ ಮುಕ್ತಾಯವಾಗಿ ಶೆಟ್ಟಿಯವರು 50 ಲಕ್ಷ ರೂ. ನೀಡಲು ಒಪ್ಪಿದ್ದಾರೆ.

ಹಣ ಬರುವವರೆಗೂ ಬಿಡುವುದಿಲ್ಲ ಎಂದು ಅವರನ್ನು ರೂಮ್‌ನಲ್ಲೇ ಕೂಡಿಹಾಕಿದ್ದರಿಂದ ಶೆಟ್ಟಿಯವರು ತಮ್ಮ ಸ್ನೇಹಿತರಾದ ಎಲ್‌ಐಸಿ ಅಭಿವೃದ್ಧಿ ಅಧಿಕಾರಿ ▶ 8ನೇ ಪುಟಕ್ಕೆ

ನ್ಯಾಯಾಂಗ ವ್ಯವಸ್ಥೆಯ ಮೂಲಸೌಕರ್ಯಕ್ಕಾಗಿ 800 ಕೋಟಿ ರೂ. ಅನುದಾನ



ಶಿಗ್ಗಾವಿ: ರಾಜ್ಯದ ನ್ಯಾಯಾಂಗ ವ್ಯವಸ್ಥೆಯ ಮೂಲಭೂತ ಸೌಕರ್ಯಕ್ಕಾಗಿ 800 ಕೋಟಿ ರೂ. ನೀಡಲು ಈಗಾಗಲೇ ಅನುಮತಿ ನೀಡಲಾಗಿದೆ ಇದರಿಂದ ಕೆಳ ಹಂತದ ನ್ಯಾಯಾಲಯಗಳಿಗೆ ಅತ್ಯುತ್ತಮ ವ್ಯವಸ್ಥೆಗಳು ದೊರೆಯಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಶಿಗ್ಗಾಂವ್ ವಕೀಲರ ಸಂಘದ ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಜನಸಂಖ್ಯೆ ಹೆಚ್ಚಿದಂತೆ ನ್ಯಾಯಾಲಯಗಳು, ಅದರ ಸೌಕರ್ಯಗಳನ್ನು ಹೆಚ್ಚಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ನ್ಯಾಯಾಂಗಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದೆ. ಎಲ್ಲ ವಕೀಲರಿಗೆ ಆರೋಗ್ಯ ಸೌಲಭ್ಯ ಕಾರ್ಯಕ್ರಮವನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು ಎಂದರು.

ಭಾರತದ ನ್ಯಾಯಾಂಗ ವ್ಯವಸ್ಥೆಗೆ ವಿಶೇಷ ಸ್ಥಾನವನ್ನು ನೀಡಲಾಗಿದೆ. ಪ್ರಜಾಪ್ರಭುತ್ವದಲ್ಲಿ ▶ 8ನೇ ಪುಟಕ್ಕೆ

ಲೋಕಸಭಾ ಚುನಾವಣೆ ಮೇಲೆ ಕಣ್ಣು: ಬಿಜೆಪಿ ಪ್ರಮುಖ ಸ್ಥಾನಗಳಲ್ಲಿ ಬದಲಾವಣೆ

ನವದೆಹಲಿ, ಆ.21– 2024ರ ಲೋಕಸಭಾ ಚುನಾವಣೆ ಮೇಲೆ ಕಣ್ಣಿಟ್ಟಿರುವ ಬಿಜೆಪಿ ಅನೇಕ ರಾಜ್ಯ ಘಟಕಗಳ ಪ್ರಮುಖ ಸ್ಥಾನಗಳಲ್ಲಿ ಬದಲಾವಣೆಯನ್ನು ಮುಂದುವರೆಸುವುದರೊಂದಿಗೆ ಸಾಂಸ್ಥಿಕ ಸಮಸ್ಯೆಗಳನ್ನು ಬಗೆಹರಿಸುವ ಸಾಧ್ಯತೆಯಿದೆ.

ಇತ್ತೀಚೆಗೆ ನೂತನ ಬಿಜೆಪಿ ರಾಷ್ಟ್ರೀಯ ಸಂಸದೀಯ ಮಂಡಳಿಯಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ, ಮಧ್ಯ ಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹ್ಹಾಣ್ ಅವರಿಗೆ ಸ್ಥಾನ ನೀಡಿಲ್ಲ. ಆದರೆ, ಬಿಜೆಪಿ ಅದನ್ನು ಸಾಮಾಜಿಕವಾಗಿ ಮತ್ತು ಪ್ರಾದೇಶಿಕವಾಗಿ ಹೆಚ್ಚು ಪ್ರತಿನಿಧಿಸುವಂತೆ ಮಾಡಿದೆ. ಮೊದಲ ಬಾರಿಗೆ ಮೇಲ್ವರ್ಗಕ್ಕೆ ಸೇರದವರು ಮಂಡಳಿಯಲ್ಲಿ ಬಹುಸಂಖ್ಯಾತರಾಗಿದ್ದಾರೆ. ಏಕೆಂದರೆ ಪಕ್ಷವು ಸಾಂಪ್ರದಾಯಿಕವಾಗಿ ದುರ್ಬಲ ಮತ್ತು ಹಿಂದುಳಿದ ಸಮಾಜದ ವರ್ಗಗಳಿಗೆ ತನ್ನ ಪ್ರಾಧಾನ್ಯತೆಯನ್ನು ಮುಂದುವರೆಸಿದೆ. ಅದಕ್ಕೂ ಮೊದಲು ಬಿಜೆಪಿ ವರಿಷ್ಠರು ಹಲವು ರಾಜ್ಯಗಳಲ್ಲಿ ಬದಲಾವಣೆ ಮಾಡಿದ್ದಾರೆ. ಈಗ ಉತ್ತರ ಪ್ರದೇಶ ಘಟಕಕ್ಕೆ ಹೊಸ ಅಧ್ಯಕ್ಷರನ್ನು ನೇಮಿಸುವ ಸಾಧ್ಯತೆಯಿದೆ ಮತ್ತು ಬಿಹಾರದಲ್ಲಿ ಕೆಲವು ಹೊಸ ಮುಖಗಳನ್ನು ಕರೆತರುವ ಸಾಧ್ಯತೆಯಿದೆ. ಕಳೆದ ಕೆಲವು ವಾರಗಳಲ್ಲಿ ಮಹಾರಾಷ್ಟ್ರ, ಉತ್ತರಾಖಂಡ ಮತ್ತು ಛತ್ತೀಸ್‌ಗಢದಲ್ಲಿ ರಾಜ್ಯಾಧ್ಯಕ್ಷರನ್ನು ಬಿಜೆಪಿ ನೇಮಿಸಿದೆ ಮತ್ತು ಉತ್ತರ ಪ್ರದೇಶ, ತೆಲಂಗಾಣ, ಕರ್ನಾಟಕ ಮತ್ತು ಪಶ್ಚಿಮ ಬಂಗಾಳ ಸೇರಿದಂತೆ ಹಲವು ರಾಜ್ಯಗಳಲ್ಲಿ ನಿರ್ಣಾಯಕ ಸ್ಥಾನಗಳನ್ನು ಹೊಂದಿರುವ ▶ 8ನೇ ಪುಟಕ್ಕೆ

ಮುಂದಿನ ತಿಂಗಳು ಎಐಸಿಸಿಗೆ ಗಾಂಧಿಯೇತರ ಅಧ್ಯಕ್ಷರ ನೇಮಕ?

ನವದೆಹಲಿ, ಆ.21– ಕಳೆದ ಮೂರು ದಶಕಗಳ ಹಿಂದೆ ಗಾಂಧಿಯೇತರ ಅಧ್ಯಕ್ಷರಾಗಿದ್ದ ಸೀತಾರಾಮ್ ಕೇಸರಿ ಅವರನ್ನು ಅಧಿಕಾರದಿಂದ ಅನೌಪಚಾರಿಕವಾಗಿ ತೆಗೆದುಹಾಕಿ ಅವರ ಸ್ಥಾನಕ್ಕೆ ಸೋನಿಯಾ ಗಾಂಧಿ ಅವರನ್ನು ನೇಮಿಸಲಾಯಿತು. ಅಂದಿನಿಂದ ಇಂದಿನವರೆಗೆ ಗಾಂಧಿಯೇತರರಿಗೆ ಅವಕಾಶ ಸಿಕ್ಕಿರಲಿಲ್ಲ.

ಇದೀಗ ಕಾಂಗ್ರೆಸ್ ಅಧ್ಯಕ್ಷರಾಗಿ ಮರು ಆಯ್ಕೆಯಾಗಲು ರಾಹುಲ್ ಗಾಂಧಿ ನಿರಾಕರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ನಡೆಸುತ್ತಿರುವ ಸೋನಿಯಾ ಗಾಂಧಿ ಕೂಡ ಅನಾರೋಗ್ಯದ ಕಾರಣ ನೀಡಿ ಆ ಹುದ್ದೆಯಲ್ಲಿ ಮುಂದುವರಿಯದಿರಲು ಇಚ್ಛಿಸಿದ್ದಾರೆ.



● ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ
● ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್
● ಎಐಸಿಸಿ ಪ್ರಧಾನ ಕಾರ್ಯದರ್ಶಿ ಮುಕುಲ್ ವಾಸ್ನಿಕ್
● ಲೋಕಸಭೆಯ ಮಾಜಿ ಸ್ಪೀಕರ್ ಮೀರಾಕುಮಾರ್
● ಮಾಜಿ ಹಣಕಾಸು ಸಚಿವ ಪಿ.ಚಿದಂಬರಂ ಹೆಸರು ಮುನ್ನೆಲೆಗೆ

ರಾಹುಲ್ ಮತ್ತು ಸೋನಿಯಾ ತೆಗೆದುಕೊಂಡ ನಿರ್ಧಾರ ಪಕ್ಷದ ಮುಖಂಡರನ್ನು ಕಂಗಾಲಾಗಿಸಿದೆ. ಪಕ್ಷವನ್ನು ಮುನ್ನಡೆಸಲು ರಾಹುಲ್ ಮನವೊಲಿಸುವ ಪ್ರಯತ್ನಗಳು ಇನ್ನೂ ನಡೆಯುತ್ತಿವೆಯಾದರೂ ಅವರು ಇದಕ್ಕೆ ಬಗ್ಗುತ್ತಿಲ್ಲ ಎಂದು ಆಂತರಿಕ ಮೂಲಗಳು ತಿಳಿಸಿವೆ. 2019ರ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಸೋಲಿನ ಹೊಣೆ ಹೊತ್ತು ರಾಹುಲ್ ರಾಜೀನಾಮೆ ನೀಡಿದಾಗ, ಸಿಡಬ್ಲ್ಯೂಸಿ ಅವರ ರಾಜೀನಾಮೆಯನ್ನು ಸರ್ವಾನುಮತದಿಂದ ತಿರಸ್ಕರಿಸಿತ್ತು ಆದರೆ ಅವರು ಮುಂದುವರಿಯಲು ನಿರಾಕರಿಸಿದ್ದರು. ಪಕ್ಷದ ಅಧ್ಯಕ್ಷರು ಗಾಂಧಿ ಕುಟುಂಬದವರೇ ಆಗಬೇಕು ಎಂಬ ಅಗತ್ಯವಿಲ್ಲ ಎಂದೂ ಅವರು ಹೇಳಿದ್ದರು.

ಪಕ್ಷದ ನಾಯಕರು ಬೇರೆ ಆಯ್ಕೆಗಳ ಬಗ್ಗೆ ಚರ್ಚೆ ಆರಂಭಿಸಿದ್ದಾರೆ. ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್, ಪಕ್ಷದ ಪ್ರಧಾನ ಕಾರ್ಯದರ್ಶಿ ಮುಕುಲ್ ವಾಸ್ನಿಕ್, ಲೋಕಸಭೆಯ ಮಾಜಿ ಸ್ಪೀಕರ್ ಮೀರಾ ಕುಮಾರ್, ▶ 8ನೇ ಪುಟಕ್ಕೆ

ಕೋವಿಡ್ ಸೋಂಕಿತರಿಗೆ ಹೆಚ್ಚುವರಿ ಬಿಲ್

577 ಖಾಸಗಿ ಆಸ್ಪತ್ರೆಗಳಿಗೆ ಆರೋಗ್ಯ ಇಲಾಖೆ ನೋಟಿಸ್



ಬೆಂಗಳೂರು, ಆ.21– ಸರ್ಕಾರದ ನಿಯಮವ ಹೊರತಾಗಿಯೂ ಕೋವಿಡ್ ಸೋಂಕಿತರಿಂದ ಹೆಚ್ಚುವರಿ ಹಣ ಪಡೆದಿರುವ 577 ಖಾಸಗಿ ಆಸ್ಪತ್ರೆಗಳಿಗೆ ರಾಜ್ಯ ಆರೋಗ್ಯ ಇಲಾಖೆ ನೋಟಿಸ್ ಜಾರಿ ಮಾಡಿದೆ ಎಂದು ಆರೋಗ್ಯ ಸಚಿವ ಡಾ.ಸುಧಾಕರ್ ಹೇಳಿದ್ದಾರೆ.

ಸರ್ಕಾರದ ABARK ಅಡಿಯಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಹೆಚ್ಚುವರಿ ಹಣವನ್ನು ವಿಧಿಸಿದ್ದಕ್ಕಾಗಿ 577 ಖಾಸಗಿ ಆಸ್ಪತ್ರೆಗಳಿಗೆ ಆರೋಗ್ಯ ಇಲಾಖೆಯು ನೋಟಿಸ್ ನೀಡಿದೆ. ಜೊತೆಗೆ ಆರೋಗ್ಯ ಇಲಾಖೆಯ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (SAST) ಅಡಿಯಲ್ಲಿ ಹಣವನ್ನು ಕ್ಲೈಮ್ ಮಾಡಿದೆ ಎಂದು ಡಾ ಸುಧಾಕರ್ ಹೇಳಿದ್ದಾರೆ.

ಆಯುಷ್ಮಾನ್ ಭಾರತ್ ಅಡಿಯಲ್ಲಿ ಸರ್ಕಾರವು ಉಲ್ಲೇಖಿಸಿದ ಈ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಲು SAST ನಿಂದ ಮತ್ತು ಆರೋಗ್ಯ ಕರ್ನಾಟಕ (ABARK) ಯೋಜನೆ ಹಣವನ್ನು ಕ್ಲೈಮ್ ಮಾಡುವುದರ ▶ 4ನೇ ಪುಟಕ್ಕೆ

ತಿ.ನರಸೀಪುರದಲ್ಲಿ ಸಚಿವ ಎಸ್.ಟಿ.ಸೋಮಶೇಖರ್‌ಗೆ ಕಪ್ಪು ಬಾವುಟ ಪ್ರದರ್ಶನ

ತಿ.ನರಸೀಪುರ, ಆ.21– ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ತಾಲೂಕಿನ ಮೂಗೂರು ಗ್ರಾಮಕ್ಕೆ ಆಗಮಿಸುತ್ತಿದ್ದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಿದ 7 ಮಂದಿ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ, ಬಿಡುಗಡೆಗೊಳಿಸಿದ್ದಾರೆ.


ವಿಪಕ್ಷ ನಾಯಕ ಸಿದ್ದರಾಮಯ್ಯನವರು ಕೊಡಗಿನಲ್ಲಿ ಅತಿವೃಷ್ಟಿಯಿಂದಾದ ಹಾನಿ ವೀಕ್ಷಿಸಲು ತೆರಳಿದ್ದ ವೇಳೆ ಅವರ ಕಾರಿಗೆ ಬಿಜೆಪಿ ಕಾರ್ಯಕರ್ತರು ಮೊಟ್ಟೆ ಎಸೆದು ಅವಮಾನಿಸಿದ ಹಿನ್ನೆಲೆಯಲ್ಲಿ ಪಟ್ಟಣದ ಚಿಕ್ಕಮ್ಮತಾಯಿ ಛತ್ರದ ಬಳಿ ಪೊಲೀಸರ ಕಣ್ತಪ್ಪಿಸಿ ಉಸ್ತುವಾರಿ ಸಚಿವರಿಗೆ ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು, ಗ್ರಾಪಂ ಮಾಜಿ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಅಮಾಸೆ ನಿಂಗರಾಜು ಹಾಗೂ ಬಾರ್ ಕುಮಾರ್, ಚೌಹಳ್ಳಿ ಮಲ್ಲೇಶ್, ವೆಂಕಿ, ಕಿರಗಸೂರು ಪುಟ್ಟರಾಜು ಸೇರಿದಂತೆ 7 ಮಂದಿ ಕಪ್ಪು ಬಾವುಟ ಪ್ರದರ್ಶಿಸಿದರು. ಈ ವೇಳೆ ಸ್ಥಳಕ್ಕಾಗಮಿಸಿದ ಪೊಲೀಸರನ್ನು ಕಂಡ ▶ 8ನೇ ಪುಟಕ್ಕೆ

ಪುರಸಭಾ ಮಾಜಿ ಅಧ್ಯಕ್ಷ ಸೇರಿ ಹಲವು ಕಾಂಗ್ರೆಸ್ ಕಾರ್ಯಕರ್ತರ ಬಂಧನ, ಬಿಡುಗಡೆ



ಸಿದ್ದರಾಮಯ್ಯರಿಂದ ಮಾಂಸಾಹಾರ ಸೇವಿಸಿ ದೇವಸ್ಥಾನ ಪ್ರವೇಶ

ಶಾಸಕ ಅಪ್ಪಚ್ಚು ರಂಜನ್ ಅಸಮಾಧಾನ



ಮಡಿಕೇರಿ, ಆ.21–ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಕೊಡಗಿಗೆ ಭೇಟಿ ನೀಡಿದ್ದ ವೇಳೆ ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ ಅವರ ಮನೆಯಲ್ಲಿ ಮಾಂಸ ಸೇವಿಸಿ ಕೊಡ್ಲಿಪೇಟೆಯ ಬಸವೇಶ್ವರ ದೇವಸ್ಥಾನಕ್ಕೆ ಪ್ರವೇಶಿಸಿದ್ದಾರೆ ಎಂದು ಮಡಿಕೇರಿ ಬಿಜೆಪಿ ಶಾಸಕ ಅಪ್ಪಚ್ಚು ರಂಜನ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಶನಿವಾರ ರಾತ್ರಿ ಕುಶಾಲನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸಿದ್ದರಾಮಯ್ಯ ನಾಟಿಕೋಳಿ ಸಾರಿನೊಂದಿಗೆ ಭೋಜನ ಸೇವಿಸಿ ದೇವಸ್ಥಾನ ಪ್ರವೇಶಿಸುವ ಮೂಲಕ ಹಿಂದೂ ದೇವರನ್ನು ಅಪವಿತ್ರಗೊಳಿಸಿದ್ದಾರೆ. ಅವರಿಗೆ ದೇವರ ಬಗ್ಗೆ ನಂಬಿಕೆ ಇಲ್ಲ. ಹಿಂದೂ ದೇವರನ್ನು ಅವಮಾನಿಸುವುದೇ ಅವರ ಕೆಲಸವಾಗಿದೆ. ▶ 8ನೇ ಪುಟಕ್ಕೆ

ಇಂತದ್ದೇ ತಿನ್ನಬೇಕು ಎಂದು ದೇವರು ಹೇಳಿದ್ದಾರಾ?



ಚಿಕ್ಕಬಳ್ಳಾಪುರ, ಆ.21–ಮಾಂಸಾಹಾರ ಸೇವಿಸಿ ದೇವಸ್ಥಾನ ಪ್ರವೇಶಿಸಿದ್ದಾರೆ ಎಂಬ ತಮ್ಮ ಮೇಲಿನ ಆರೋಪಕ್ಕೆ ವಿಪಕ್ಷ ನಾಯಕ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ. ಈ ಕುರಿತು ಚಿಕ್ಕಬಳ್ಳಾಪುರದಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ ಅವರು, ಇಂತಹುದ್ದೇ ತಿನ್ನಬೇಕು ಎಂದು ದೇವರು ಹೇಳಿದ್ದಾರಾ? ಎಂದು ಪ್ರಶ್ನಿಸಿದರು. ನಾನು ವೀಣಾ ಅಚ್ಚಯ್ಯ ಅವರ ಮನೆಯಲ್ಲಿ ಊಟ ಮಾಡಲಿಲ್ಲ. ಅವರು ತಂದಿದ್ದ ಊಟವನ್ನು ಸುದರ್ಶನ ಅತಿಥಿ ಗೃಹದಲ್ಲಿ ಮಧ್ಯಾಹ್ನ ಮಾಡಿದ್ದೇನೆ. ಸಂಜೆ ಕೊಡ್ಲಿಪೇಟೆಯ ಬಸವೇಶ್ವರ ▶ 8ನೇ ಪುಟಕ್ಕೆ

ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಬೆಂಗಳೂರು ಪೊಲೀಸರಿಂದ ಮೈಸೂರಿನ ಇಬ್ಬರು ಯುವಕರೂ ಸೇರಿ ಮೂವರ ಬಂಧನ

● ಹಣಕ್ಕಾಗಿ ತಾತನನ್ನೇ ಹತ್ಯೆಗೈದ ಮೈಸೂರಿನ ಕುವೆಂಪುನಗರದ ಯುವಕ ● ಯುವತಿಯ ನಗ್ನ ವಿಡಿಯೋ ಸೆರೆ ಹಿಡಿದು ಬ್ಲಾಕ್‌ಮೇಲ್ ಮಾಡುತ್ತಿದ್ದ ತಿ.ನರಸೀಪುರ ಯುವಕನ ಬಂಧನ

ಮೈಸೂರು, ಆ.21(ಎಂಟಿವೈ)–ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಬೆಂಗಳೂರು ಪೊಲೀಸರು ಮೈಸೂರಿನ ಇಬ್ಬರು ಯುವಕರೂ ಸೇರಿದಂತೆ ಮೂವರನ್ನು ಬಂಧಿಸಿ ವೃದ್ಧರೊಬ್ಬರ ಕೊಲೆ ಹಾಗೂ ನಗ್ನ ವಿಡಿಯೋ ಮಾಡಿ ಯುವತಿಯ ಬ್ಲಾಕ್‌ಮೇಲ್ ಮಾಡುತ್ತಿದ್ದ ಪ್ರಕರಣವನ್ನು ಭೇದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕೊಲೆ ಪ್ರಕರಣದಲ್ಲಿ ತಾತನನ್ನು ಮೊಮ್ಮಗನೇ ಹತ್ಯೆಗೈದಿದ್ದರೆ, ಪರಿಚಯಸ್ಥ ಯುವತಿಯೊಬ್ಬಳನ್ನು ಸ್ಪೈ ಕ್ಯಾಮರಾ ಮೊಬೈಲ್ ಚಾರ್ಜರ್‌ನಿಂದ ನಗ್ನ ವಿಡಿಯೋ ಮಾಡಿ ಬ್ಲಾಕ್‌ಮೇಲ್ ಮಾಡುತ್ತಿದ್ದ ಯುವಕನನ್ನು ಬೆಂಗಳೂರು ಪೊಲೀಸರು ಹೆಡೆಮುರಿ ಕಟ್ಟಿದ್ದಾರೆ.

ತಾತನನ್ನೇ ಹತ್ಯೆಗೈದ ಮೊಮ್ಮಗ: ಆಸ್ತಿ ಹಾಗೂ ಹಣದ ಆಸೆಗೆ ಬಿದ್ದು, ಯುವಕನೊಬ್ಬ ತನ್ನ ತಾತನನ್ನೇ ಹತ್ಯೆಗೈದಿರುವ ಭಯಾನಕ ಘಟನೆ ಬೆಂಗಳೂರಿನ ಯಲಹಂಕ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವರದಿಯಾಗಿತ್ತು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಯಲಹಂಕ ಪೊಲೀಸರು ತನಿಖೆ ನಡೆಸಿ ತಾಂತ್ರಿಕ ಮಾಹಿತಿ ಆಧರಿಸಿ ಮೈಸೂರಿನ ಕುವೆಂಪುನಗರದ ನಿವಾಸಿ ಜಯಂತ್ ಅಲಿಯಾಸ್ ಬಳ್ಳಿ(20) ಎಂಬಾತನನ್ನು ಬಂಧಿಸಿದ್ದಾರೆ. ಅಲ್ಲದೇ ಕೊಲೆಗೆ ಸಹಕರಿಸಿದ ಹಾಸನದ ನಿವಾಸಿ ಯಾಸಿನ್(22) ಎಂಬುವರನ್ನು ಬಂಧಿಸಿದ್ದಾರೆ. ಆರೋಪಿ ಜಯಂತ್, ತನ್ನ ತಾತ ಯಲಹಂಕದ ಸುರಭಿ ಬಡಾವಣೆಯ 2ನೇ ಮುಖ್ಯ ರಸ್ತೆಯ ನಿವಾಸಿ ಸಿ.ಪುಟ್ಟಯ್ಯ(70) ಎಂಬುವರನ್ನು ಆ.17 ರಂದು ತನ್ನ ಸ್ನೇಹಿತ ಯಾಸಿನ್ ಜೊತೆ ಬಂದು ಮನೆಯಲ್ಲಿಯೇ ಹತ್ಯೆ ಮಾಡಿ ಪರಾರಿಯಾಗಿದ್ದ.


ಜಯಂತ್


ಯಾಸಿನ್


ಮಹೇಶ


ಹಿಡೆನ್ ಕ್ಯಾಮರಾ

ಸಿ.ಪುಟ್ಟಯ್ಯ ಅವರು ನಿವೃತ್ತ ಸರ್ಕಾರಿ ನೌಕರರಾಗಿದ್ದು, ತನ್ನ ಪತ್ನಿ ನಿಧನದ ನಂತರ ಸುರಭಿ ಲೇಔಟ್‌ನಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಪುಟ್ಟಯ್ಯ ಅವರಿಗೆ ಮೂವರು ಗಂಡು ಮಕ್ಕಳಿದ್ದು, ಒಬ್ಬರು ಮೈಸೂರು, ಮತ್ತೊಬ್ಬರು ಬೆಂಗಳೂರು, ಮತ್ತೊಬ್ಬರು ಮಂಡ್ಯದಲ್ಲಿ ವಾಸಿಸುತ್ತಿದ್ದಾರೆ. ಪುಟ್ಟಯ್ಯ ಅವರಿಗೆ ನಿವೃತ್ತಿಯಾದ ನಂತರ 20 ಲಕ್ಷ ರೂ. ಹಣ ದೊರಕಿತ್ತು. ಅಲ್ಲದೇ ಕನಕಪುರದಲ್ಲಿ ನಿವೇಶನವೊಂದನ್ನು ಹೊಂದಿದ್ದರು. ಇದರ ಮೇಲೆ ಕಣ್ಣಿಟ್ಟಿದ್ದ ಆರೋಪಿ ಜಯಂತ್ ವೃತ್ತಿ ಆರಂಭಿಸುವುದಕ್ಕೆ ಹಣ ನೀಡುವಂತೆ ಪೀಡಿಸುತ್ತಿದ್ದ. ಆದರೆ ಪುಟ್ಟಯ್ಯ ಅವರು ಹಣ ನೀಡುತ್ತಿರಲಿಲ್ಲ. ಇದರಿಂದ ಕುಪಿತಗೊಂಡು ಸಂಚು ನಡೆಸಿ ಕೊಲೆ ಮಾಡಿ ಹಾಸನಕ್ಕೆ ಪರಾರಿಯಾಗಿದ್ದರು. ಕೊಲೆ ನಡೆದ ಸಮಯದಲ್ಲಿ ಘಟನಾ ಸ್ಥಳದಲ್ಲಿ ದೊರೆತ ತಾಂತ್ರಿಕ ಮಾಹಿತಿಯ ಆಧಾರದ ಮೇಲೆ ತನಿಖೆ ಕೈಗೊಂಡಿದ್ದ ಎಸಿಪಿ ಆರ್. ಮಂಜುನಾಥ್ ಹಾಗೂ ಯಲಹಂಕ ಠಾಣೆಯ ಇನ್ಸ್‌ಪೆಕ್ಟರ್ ಬಾಲಾಜಿ, ಆರೋಪಿಗಳಿಬ್ಬರನ್ನೂ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬ್ಲಾಕ್‌ಮೇಲ್ ಪ್ರಕರಣ: ಬೆಂಗಳೂರಿನಲ್ಲಿ ಪರಿಚಯಸ್ಥ ಯುವತಿಯೊಬ್ಬಳನ್ನು ಸ್ಪೈ ಕ್ಯಾಮರಾ ಹೊಂದಿರುವ ಮೊಬೈಲ್ ಚಾರ್ಜರ್ ಮೂಲಕ ನಗ್ನ ವಿಡಿಯೋ ತೆಗೆದು ಬ್ಲಾಕ್‌ಮೇಲ್ ಮಾಡುತ್ತಿದ್ದ ಮೈಸೂರು ಜಿಲ್ಲೆಯ ತಿ.ನರಸೀಪುರದ ನಿವಾಸಿ ಮಹೇಶ(30) ಎಂಬಾತನನ್ನು ಬೆಂಗಳೂರು ಈಶಾನ್ಯ ವಿಭಾಗದ ಸೈಬರ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿ ಮಹೇಶ ಪರಿಚಯಸ್ಥ ಯುವತಿಯ ಮನೆಗೆ ಆಗಿಂದಾಗ್ಗೆ ಹೋಗುತ್ತಿದ್ದ. ಈ ವೇಳೆ ಸ್ಪೈ ಕ್ಯಾಮರಾ ಹೊಂದಿದ್ದ ಚಾರ್ಜರ್ ಅನ್ನು ಯುವತಿಯ ಖಾಸಗಿ ಕೊಠಡಿಯಲ್ಲಿ ಗುಪ್ತವಾಗಿರಿಸಿದ್ದ. ಆಕೆ ಬಟ್ಟೆ ಬದಲಿಸುವ ವೇಳೆ ಸ್ಪೈ ಕ್ಯಾಮರಾ ಮೂಲಕ ನಗ್ನ ವಿಡಿಯೋ ಚಿತ್ರೀಕರಿಸಿಕೊಂಡು, ಮೆಮೋರಿ ಕಾರ್ಡ್ ಮತ್ತು ಪೆನ್ ಡ್ರೈವ್‌ನಲ್ಲಿ ಸಂಗ್ರಹಿಸಿದ್ದ. ನಕಲಿ ಇನ್‌ಸ್ಟಾಗ್ರಾಂ ಖಾತೆ ಮೂಲಕ ಆ ಯುವತಿಗೆ ರಿಕ್ವೆಸ್ಟ್ ಕಳುಹಿಸಿ ಚಾಟ್ ಮಾಡುವಂತೆ ಪೀಡಿಸುತ್ತಿದ್ದ. ಅಲ್ಲದೇ ಸಲುಗೆಯಿಂದ ಮಾತನಾಡುವಂತೆ ಪೀಡಿಸುತ್ತಿದ್ದ. ಇಲ್ಲದಿದ್ದರೆ ನಿನ್ನ ನಗ್ನ ವಿಡಿಯೋವನ್ನು ಸಾಮಾಜಿಕ ಜಾಲ ತಾಣಗಳಲ್ಲಿ ವೈರಲ್ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದ. ಅಲ್ಲದೇ ಆ ಯುವತಿಯ ಇನ್‌ಸ್ಟಾಗ್ರಾಂನ ಮೆಸೆಂಜರ್‌ನಲ್ಲಿ ಯುವತಿಯ ನಗ್ನ ವಿಡಿಯೋ ಕಳುಹಿಸಿದ್ದ ಈ ವಿಡಿಯೋವನ್ನು ಗಮನಿಸಿದ ಆ ಯುವತಿ, ಗಾಬರಿಗೊಂಡು ಸೈಬರ್ ಠಾಣೆ ಪೊಲೀಸರಿಗೆ ದೂರು ದಾಖಲಿಸಿದ್ದಳು. ಪೊಲೀಸರು ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ನಡೆಸಿದಾಗ ಖಾಸಗಿ ಕೊಠಡಿಯಲ್ಲಿ ಸ್ಪೈ ಕ್ಯಾಮರಾ ಉಳ್ಳ ಚಾರ್ಜರ್ ಪತ್ತೆಯಾಯಿತು. ಈ ಪ್ರಕರಣದ ಪ್ರಮುಖ ರೂವಾರಿ ನರಸೀಪುರದ ಮಹೇಶ್‌ನನ್ನು ಬಂಧಿಸಿದ್ದಾರೆ.

ತಂದೆಯ ಸ್ನೇಹಿತನ ಮಗಳು: ಆರೋಪಿ ಮಹೇಶ ಬಿ.ಇ. ಪದವೀಧರನಾಗಿದ್ದು, ಮೈಸೂರಿನಲ್ಲಿ ಆತನ ತಂದೆ ನಡೆಸುವ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದ. ಸಂತ್ರಸ್ತೆಯ ತಂದೆ ಆರೋಪಿ ತಂದೆಯ ಸ್ನೇಹಿತರಾಗಿದ್ದರು. ಈ ಸಲುಗೆಯಿಂದ ಬೆಂಗಳೂರಿಗೆ ಹೋದಾಗಲೆಲ್ಲಾ ಯುವತಿಯ ಮನೆಗೆ ಹೋಗಿಬರುತ್ತಿದ್ದ. ಈ ಸಂದರ್ಭದಲ್ಲಿ ಒಂದು ದಿನ ರಹಸ್ಯ ಕ್ಯಾಮರಾವುಳ್ಳ ಚಾರ್ಜರ್ ಅನ್ನು ಆಕೆಯ ಕೊಠಡಿಯಲ್ಲಿಟ್ಟು ಹೊರ ಹೋಗಿದ್ದ. ಈ ವೇಳೆ ಆಕೆ ಬಟ್ಟೆ ಬದಲಿಸುವಾಗ ನಗ್ನ ವಿಡಿಯೋ ಚಿತ್ರೀಕರಿಸಿಕೊಂಡಿದ್ದು ಸೆರೆಯಾಗಿದ್ದು, ಬಳಿಕ ಆಕೆಯ ಮನೆಗೆ ಬಂದು ಯಾರಿಗೂ ತಿಳಿಯದಂತೆ ಮೊಬೈಲ್ ಚಾರ್ಜರ್ ಅನ್ನು ತೆಗೆದುಕೊಂಡು ಹೋಗಿದ್ದ. ಹೀಗಾಗಿ ನಗ್ನ ವಿಡಿಯೋ ತೆಗೆದಿದ್ದು ಹೇಗೆ ಎಂಬುದು ಆ ಯುವತಿಗೂ ತಿಳಿದಿರಲಿಲ್ಲ. ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ವಿಜೃಂಭಣೆಯ ಶ್ರೀ ಕೃಷ್ಣ ಉತ್ಸವದಲ್ಲಿ ಗಮನ ಸೆಳೆದ ಪಾವುಲ್ ಭಜನೆ



ಮೈಸೂರು, ಆ.21(ಆರ್‌ಕೆಬಿ)– ಮೈಸೂರಿನ ಭಾವಸಾರ ಕ್ಷತ್ರಿಯ ಮಂಡಳಿ ವತಿಯಿಂದ ಮೈಸೂರಿನ ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ವಿಠ್ಠಲಸ್ವಾಮಿ ದೇವಸ್ಥಾನದಲ್ಲಿ 86ನೇ ಶ್ರೀ ಕೃಷ್ಣ ಜಯಂತಿ ಕಾರ್ಯಕ್ರಮಗಳು ಶನಿವಾರ ಮತ್ತು ಭಾನುವಾರ ವಿಜೃಂಭಣೆಯಿಂದ ನೆರವೇರಿತು. ಜಯಂತಿ ಅಂಗವಾಗಿ ಶನಿವಾರ ಸಂಜೆ ಮಕ್ಕಳಿಂದ ಕೃಷ್ಣ–ರಾಧೆ ವೇಷ ಸ್ಪರ್ಧೆ ನಡೆಯಿತು. 64ಕ್ಕೂ ಅಧಿಕ ಮಕ್ಕಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ರಾತ್ರಿ 12 ಗಂಟೆಯವರೆಗೆ ಭಾವಸಾರ ಕ್ಷತ್ರಿಯ ಪಂಡರಿ ಭಜನಾ ಮಂಡಳಿಯಿಂದ ಪಂಡರಿ ಭಜನೆ ನೆರವೇರಿತು. ಭಾನುವಾರ ಬೆಳಗ್ಗೆ ಪಾಂಡುರಂಗ ವಿಠಲ ಸ್ವಾಮಿ ದೇವಸ್ಥಾನದಿಂದ ಹೊರಟ ಶ್ರೀಕೃಷ್ಣ ದೇವರ ಉತ್ಸವ ಅಶೋಕ ರಸ್ತೆ, ದೊಡ್ಡ ಗಡಿಯಾರ ವೃತ್ತ, ಗಾಂಧಿ ವೃತ್ತ, ಕೆ.ಟಿ.ಸ್ಟ್ರೀಟ್, ಕಬೀರ್ ರಸ್ತೆ ಮೂಲಕ ದೇವಸ್ಥಾನಕ್ಕೆ ತಲುಪಿತು. ಕೊಲ್ಹಾಪುರದಿಂದ ಆಗಮಿಸಿದ್ದ ಪಾವುಲ್ ಭಜನಾ ತಂಡದಿಂದ ಮೆರವಣಿಗೆ ಉದ್ದಕ್ಕೂ ದಿಂಡಿ ಭಜನೆ ಗಮನ ಸೆಳೆಯಿತು. ಭಾವಸಾರ ಕ್ಷತ್ರಿಯ ಮಂಡಳಿ ಅಧ್ಯಕ್ಷ ಆರ್.ವಿ.ಶಿವಾಜಿರಾವ್ ರಂಪೂರೆ, ಕಾರ್ಯದರ್ಶಿ ರಾಕೇಶ್ ನಾಯಕ್, ಉಪಾಧ್ಯಕ್ಷ ಸುಭಾಷ್ ಪತಂಗೆ ನೇತೃತ್ವದಲ್ಲಿ ನಡೆದ ಎರಡು ದಿನಗಳ ಕಾರ್ಯಕ್ರಮದಲ್ಲಿ ಭಾವಸಾರ ಕ್ಷತ್ರಿಯ ಸಮಾಜದ ವಿವಿಧ ಶಾಖೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಕೃಷ್ಣ–ರಾಧೆ ವೇಷ ಸ್ಪರ್ಧೆ ವಿಜೇತ ಮಕ್ಕಳು

1 ರಿಂದ 4 ವರ್ಷದವರ ವಿಭಾಗ: ವೀರುಷ್ಕ ತೇಲ್ಕರ್ (ಪ್ರಥಮ), ಆದ್ಯ ಬಗರೆ (ದ್ವಿತೀಯ), ರಕ್ಷಿತ್ (ತೃತೀಯ). **5 ರಿಂದ 8 ವರ್ಷದವರ ವಿಭಾಗ:** ಶಮಂತ್ ಬಗರೆ (ಪ್ರಥಮ), ಸುಧೀಕ್ಷಾ ಬಗರೆ (ದ್ವಿತೀಯ), ಲಕ್ಷ್ ರಂಪೂರೆ (ತೃತೀಯ).

ಚಾಲನಾ ದಿನವಾಗಿ ರಾಜೀವ್‌ಗಾಂಧಿ ಹುಟ್ಟುಹಬ್ಬ ಆಚರಣೆ



ಮೈಸೂರು, ಆ.21(ಆರ್‌ಕೆಬಿ)– ಮಾಜಿ ಪ್ರಧಾನಿ ರಾಜೀವ್‌ಗಾಂಧಿ ಅವರ ಜನ್ಮ ದಿನಾಚರಣೆ ಅಂಗವಾಗಿ ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಯುವ ಮುಖಂಡ ಎನ್.ಎಂ.ನವೀನ್ ಕುಮಾರ್ ನೇತೃತ್ವದಲ್ಲಿ ಚಾಲಕರ ದಿನಾಚರಣೆ ಆಚರಿಸಲಾಯಿತು. ಮೈಸೂರು ಕಾಂಗ್ರೆಸ್ ಕಚೇರಿ ಮುಂಭಾಗ ನೂರಾರು ಆಟೋ ಮತ್ತು ಕ್ಯಾಬ್‌ಗಳ ಜಾಥಾ ನಡೆಸಲಾಯಿತು. ವಿಧಾನಸಭೆಯ ಮಾಜಿ ಸಭಾಪತಿ, ಶಾಸಕ ರಮೇಶ್‌ಕುಮಾರ್, ವರುಣಾ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಜಾಥಾಗೆ ಚಾಲನೆ ನೀಡಿದರು. ವಿಮಾನ ಚಾಲಕರಾಗಿ ಸೇವೆ ಸಲ್ಲಿಸಿದ್ದ ಮಾಜಿ ಪ್ರಧಾನಿ ರಾಜೀವ್‌ಗಾಂಧಿ ಅವರ ಜನ್ಮದಿನವನ್ನು ರಾಷ್ಟ್ರೀಯ ಚಾಲಕರ ದಿನವನ್ನಾಗಿ ಆಚರಿಸುವಂತೆ ಎಂ.ಎನ್.ನವೀನ್‌ಕುಮಾರ್ ಅವರು ರಾಜ್ಯ ಮತ್ತು ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು. ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ಆರ್.ಭಾಸ್ಕರ್, ಜಿಲ್ಲಾ ಕಾಂಗ್ರೆಸ್ ನಗರ ಉಪಾಧ್ಯಕ್ಷ ರಾಜಾರಾಂ, ಕಾಂಗ್ರೆಸ್ ಮುಖಂಡ ಎಂ.ರಾಜೇಶ್, ದೇವರಾಜ ಅರಸು ಬ್ಲಾಕ್ ಅಧ್ಯಕ್ಷ ಪೈಲ್ವಾನ್ ಸುನೀಲ್, ನಗರ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮಲ್ಲೇಶ್, ಸುನೀಲ್, ಪವನ್, ಸಿದ್ದರಾಮು, ಶ್ರೀಧರ್, ರಾಕೇಶ್‌ಗೌಡ, ಪ್ರದೀಪ್‌ಕುಮಾರ್, ಮೈಸೂರು ಬಸವಣ್ಣ ಇನ್ನಿತರರು ಉಪಸ್ಥಿತರಿದ್ದರು.

ರಾಷ್ಟ್ರಧ್ವಜಗಳ ಸಾಂವಿಧಾನಿಕ ವಿಲೇವಾರಿಗೆ ಜೆಎಸ್‌ಎಸ್‌ಎಸ್ ವಿದ್ಯಾರ್ಥಿಗಳ ಸಾಥ್

ಮೈಸೂರು ಸಂಘ–ಸಂಸ್ಥೆಗಳ ಒಕ್ಕೂಟಕ್ಕೆ 300 ಬಾವುಟಗಳ ಹಸ್ತಾಂತರ

ಮೈಸೂರು, ಆ.21–75ನೇ ಸ್ವಾತಂತ್ರ್ಯ ದಿನಾಚರಣೆಯಂದು ಧ್ವಜಾರೋಹಣ ಮಾಡಿದ ರಾಷ್ಟ್ರಧ್ವಜಗಳನ್ನು ಸಾಂವಿಧಾನಿಕವಾಗಿ ವಿಲೇವಾರಿ ಮಾಡಲು ಧ್ವಜ ಸಂಗ್ರಹಣಾ ಅಭಿಯಾನ ದಡಿಯಲ್ಲಿ ಸಂಗ್ರಹಿಸಿದ 300 ಬಾವುಟಗಳನ್ನು ಮೈಸೂರು ಸಂಘ–ಸಂಸ್ಥೆಗಳ ಒಕ್ಕೂಟಕ್ಕೆ ಜೆಎಸ್‌ಎಸ್‌ಎಸ್ ವಿದ್ಯಾರ್ಥಿಗಳು ಹಸ್ತಾಂತರಿಸಿದ್ದಾರೆ. ಈ ಅಭಿಯಾನಕ್ಕೆ ಜೆಎಸ್‌ಎಸ್‌ಎಸ್ ವಿದ್ಯಾಸಂಸ್ಥೆ ವಿದ್ಯಾರ್ಥಿಗಳು ಸಾಥ್ ನೀಡಿದ್ದು, ಹೆಬ್ಬಾಳ, ವಿಜಯನಗರ, ಮೇಟಗಳ್ಳಿ ಸೇರಿದಂತೆ ಇತರೆ ಭಾಗದ ಪೆಟ್ರೋಲ್ ಬಂಕ್‌ಗಳಿಗೆ ತೆರಳಿ ಸಂಗ್ರಹಿಸಿದ್ದ ರಾಷ್ಟ್ರಧ್ವಜಗಳನ್ನು ನಮ್ಮ ಒಕ್ಕೂಟಕ್ಕೆ ಹಸ್ತಾಂತರಿಸಿದ್ದಾರೆ ಎಂದು ಅಧ್ಯಕ್ಷ ಬಿ.ಎಸ್.ಪ್ರಶಾಂತ್ ತಿಳಿಸಿದ್ದಾರೆ.

‘ಮುದ್ದು ಕೃಷ್ಣ–ಮುದ್ದು ರಾಧೆ ಸ್ಪರ್ಧೆ’ ವಿಜೇತರಿಗೆ ಬಹುಮಾನ ವಿತರಣೆ




ಮೈಸೂರು, ಆ.21(ಆರ್‌ಕೆಬಿ)–ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಕುವೆಂಪುನಗರದ ಕರ್ನಾಟಕ ವಿಪ್ರ ವೇದಿಕೆ ಕಚೇರಿಯಲ್ಲಿ ಆಯೋಜಿಸಿದ್ದ ಮುದ್ದು ಕಂದ ಫೋಟೋ ಸ್ಪರ್ಧೆಯಲ್ಲಿ ವಿಜೇತ ಮಕ್ಕಳಿಗೆ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಬಹುಮಾನ ವಿತರಿಸಿದರು. 300ಕ್ಕೂ ಅಧಿಕ ಮಕ್ಕಳು ವಾಟ್ಸಾಪ್ ಮೂಲಕ ಮುದ್ದುಕೃಷ್ಣ ಮುದ್ದು ರಾಧೆಯ ವೇಷ ಧರಿಸಿದ ಫೋಟೋಗಳನ್ನು ಕಳಿಸಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಈ ಪೈಕಿ ಜೆ.ಪಿ.ನಗರದ ನಾಗರಾಜ್ ಪೂಜಾ ಪುತ್ರಿ ದ್ರಿಯ ನಾಗ್ (ಪ್ರಥಮ), ರೂಪಾನಗರದ ಶ್ರೀನಿವಾಸ್–ರೋಜಾ ದಂಪತಿ ಪುತ್ರಿ ತೇಜಶ್ರೀ (ದ್ವಿತೀಯ), ನೇತಾಜಿನಗರದ ರವಿ ಮತ್ತು ಲಲಿತಾಬಾಯಿ ಪುತ್ರಿ ಆರ್. ಶ್ರೇಯಾನ್ವಿ (ತೃತೀಯ), ಬನ್ನಿಮಂಟಪದ ಸುನೀಲ್‌ಕುಮಾರ್ ಸುಷ್ಮಾ ದಂಪತಿ ಪುತ್ರ ಯಶ್‌ವೀರ್ (ನಾಲ್ಕನೇ) ಹಾಗೂ ಕುವೆಂಪುನಗರದ ಶ್ರೀನಿವಾಸಪ್ರಸಾದ್–ವಿದ್ಯಾಶ್ರೀ ದಂಪತಿ ಪುತ್ರ ಚಿರಾಗ್ ಎನ್.ಚಕ್ರವತಿ (ಐದನೇ) ಬಹುಮಾನ ಪಡೆದರು.

ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಿ ಮಾತನಾಡಿದ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಕೃಷ್ಣಜಯಂತಿ ಎಲ್ಲ ದೇಶಗಳಲ್ಲೂ ಆಚರಣೆಯಾಗುತ್ತಿದ್ದು, ಕೃಷ್ಣ ಪರಮಾತ್ಮ ಬೋಧಿಸಿದ ಗೀತೋಪದೇಶದ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಎಲ್ಲರೂ ಮುಂದಾಗುವಂತೆ ಕರೆ ನೀಡಿದರು.

ಚಿಂತಕ ಕೆ.ರಘುರಾಂ ವಾಜಪೇಯಿ ಮಾತನಾಡಿ, ಕೃಷ್ಣ ಕೊಳಲು ಪ್ರೀತಿ, ಸಹೋದರತ್ವದ ಸಂಕೇತವಾಗಿದೆ. ಪ್ರೀತಿ ವಿಶ್ವಾಸದಿಂದ ಬದುಕಿದರೆ ಎಲ್ಲರ ಮನಸ್ಸನ್ನೂ ಗೆಲ್ಲಬಹುದು ಎಂಬುದು ಶ್ರೀಕೃಷ್ಣನ ಸಂದೇಶವಾಗಿದೆ ಎಂದರು. ಇದೇ ಸಂದರ್ಭದಲ್ಲಿ ಇಳೈ ಆಳ್ವಾರ್ ಸ್ವಾಮೀಜಿ, ಕರ್ನಾಟಕ ವಿಪ್ರ ವೇದಿಕೆ ಅಧ್ಯಕ್ಷ ಅನಿಲ್‌ಕುಮಾರ್, ವಿಪ್ರ ಮಹಿಳಾ ಸಂಘದ ಅಧ್ಯಕ್ಷೆ ಡಾ.ಲಕ್ಷ್ಮೀ, ಬ್ರಾಹ್ಮಣ ಯುವ ವೇದಿಕೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಮುಖಂಡರಾದ ಅಜಯ್ ಶಾಸ್ತ್ರಿ, ಸ್ವಾತಿ, ಸೀತಾಲಕ್ಷ್ಮೀ, ದುರ್ಗಾಪ್ರಸಾದ್, ವಿನಯ್ ಕಣಗಾಲ್ ಇನ್ನಿತರರು ಉಪಸ್ಥಿತರಿದ್ದರು.

ನಿಧನ

ಶ್ರೀಮತಿ ಮಂಜುಳ



ಮೈಸೂರು, ಆ.21–ಮೈಸೂರಿನ ಕಲ್ಯಾಣಗಿರಿ ನಿವಾಸಿ ಶ್ರೀಮತಿ ಎನ್.ಮಂಜುಳ(52) ಅವರು ಶುಕ್ರವಾರ ಮಧ್ಯಾಹ್ನ ಅನಾರೋಗ್ಯ ದಿಂದ ನಿಧನರಾದರು. ಮೃತರು ಪತಿ ಹಾಗೂ ನಿವೃತ್ತ ಬಿ.ಎಸ್.ಎನ್.ಎಲ್. ಉದ್ಯೋಗಿ ಎಂ. ರಂಗಸ್ವಾಮಿ, ಮಕ್ಕಳಾದ ಆರ್. ಸಂಗೀತ, ಆರ್.ಗೌತಮ್, ಅಳಿಯ ಡಿ. ಅರಸು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಶನಿವಾರ ಮಧ್ಯಾಹ್ನ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ಮೈಸೂರಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಸಮುದಾಯ ಭವನ ಉದ್ಘಾಟನೆ

ಹಾವನೂರ್ ಹೆಸರು ಚಿರಸ್ಥಾಯಿಯಾಗಿ ಉಳಿಯುವಂತಾಗಬೇಕು

ಸಂಸದ ವಿ.ಶ್ರೀನಿವಾಸ ಪ್ರಸಾದ್



ಮೈಸೂರು, ಆ.21(ಎಂಟಿವೈ)– ಎಲ್.ಜಿ.ಹಾವನೂರ್ ಅವರು ಸಲ್ಲಿಸಿದ್ದ ವರದಿ ಮೇರೆಗೆ ನಾಯಕ ಸಮುದಾಯವನ್ನು ಎಸ್ಟಿ ಪಟ್ಟಿಗೆ ಸೇರಿಸಲಾಗಿದ್ದು, ಇನ್ನಾದರೂ ಹಾವನೂರ್ ಅವರ ಹೆಸರು ಸದಾ ಚಿರಸ್ಥಾಯಿಯಾಗಿ ಉಳಿಯುವಂತಹ ಕೆಲಸ ಆಗಬೇಕು ಎಂದು ಚಾಮರಾಜನಗರದ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಸಲಹೆ ನೀಡಿದ್ದಾರೆ.

ಮೈಸೂರಿನ ಸರಸ್ವತಿಪುರಂ ಈಜುಕೊಳದ ರಸ್ತೆಯಲ್ಲಿ ಮೈಸೂರು–ಚಾಮರಾಜನಗರ ಜಿಲ್ಲಾ ನಾಯಕರ ಸಂಘದಿಂದ ನಿರ್ಮಾಣ ಮಾಡಿರುವ ಶ್ರೀಮಹರ್ಷಿ ವಾಲ್ಮೀಕಿ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದ ಅವರು, ಡಿ.ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ ನಾಯಕ, ಪರಿವಾರ, ತಳವಾರವನ್ನು ಎಸ್‌ಟಿಗೆ ಸೇರಿಸಲು ಎಲ್.ಜಿ.ಹಾವನೂರ್ ಆಯೋಗವನ್ನು ರಚಿಸಿದರು. ಹಾವನೂರ್ ಅವರು ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಹಲವಾರು ಕಾನೂನು ಪಂಡಿತರೊಂದಿಗೆ ಸಮಾಲೋಚನೆ ನಡೆಸಿ ವರದಿ ಸಲ್ಲಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರು. ಆ ವರದಿಗೆ ಕೇಂದ್ರ ಸರ್ಕಾರವು ಯಾವುದೇ ಆಕ್ಷೇಪಣೆ ಇಲ್ಲದಂತೆ ವರದಿ ಸಲ್ಲಿಸಿದ್ದರಿಂದ ನಾಯಕ ಸಮುದಾಯವನ್ನು ಎಸ್‌ಟಿಗೆ ಸೇರಿಸಲು ಕಾರಣವಾಯಿತು. ಒಂದು ವೇಳೆ ಎಲ್.ಜಿ. ಹಾವನೂರ್ ಇಲ್ಲದಿದ್ದರೆ ಸಮಾಜದ ಪರಿಸ್ಥಿತಿ ಏನಾಗುತ್ತಿತ್ತು ಎಂದು ಪ್ರಶ್ನಿಸಿದರು.

ಎಸ್ಟಿ ಪಟ್ಟಿಗೆ ಸೇರಿದ ಬಳಿಕ ಅಂದು ಕೆಲವೆಡೆ ಹಾವನೂರ್ ಅವರ ಭಾವಚಿತ್ರವನ್ನು ಕತ್ತೆಯ ಮೇಲಿಟ್ಟು ಮೆರವಣಿಗೆ ಮಾಡಿದರೆ, ಧಾರವಾಡದಲ್ಲಿ ಆನೆಯ ಮೇಲೆ ಇಟ್ಟು ಮೆರವಣಿಗೆ ಮಾಡಲಾಗಿತ್ತು. ಅವರನ್ನು ಈ ಸಮಾಜ ಸದಾ ಸ್ಮರಿಸಿಕೊಳ್ಳಬೇಕು. ಅವರ ಹೆಸರಿನಲ್ಲಿ ಸಮುದಾಯ ಭವನಗಳು ನಿರ್ಮಾಣ ಆಗಬೇಕು. ಅವರ ಹೆಸರಿನಲ್ಲಿ ಹಲವಾರು ಚರ್ಚೆಗಳು, ಚಿಂತನ–ಮಂಥನಗಳು ನಡೆಯಬೇಕು ಎಂದು ಸಲಹೆ ನೀಡಿದರು.

ಜನಾಂಗದ ಸತತ ಪ್ರಯತ್ನದಿಂದಾಗಿ ಸಮುದಾಯ ಭವನ ನಿರ್ಮಾಣವಾಗಿದೆ. ಉತ್ತಮವಾದ ಸ್ಥಳ ಆಯ್ಕೆ ಮಾಡಿಕೊಂಡು ನಿರ್ಮಿಸಿರುವುದರಿಂದ ಮುಂದಿನ ದಿನಗಳಲ್ಲಿ ಬಡವರಿಗೆ ಅನುಕೂಲ ಆಗಬೇಕು. ವ್ಯಾಸರಾಜರಿಗಿಂತಲೂ ಮೊದಲು ರಾಮಾಯಣವನ್ನು ವಾಲ್ಮೀಕಿ ಬರೆದರು. ಪುರಾಣದಲ್ಲಿ ಇರುವ ಕಥೆ ಯನ್ನು ಬರೆದು ಆದರ್ಶನವಾಗಿ ಕಾಣುತ್ತದೆ. ರಾಮಾಯಣ ಮತ್ತು ಮಹಾಭಾರತ ದೇಶದ ಮೇರು ಕೃತಿಗಳು. ಇಂತಹ ಕೃತಿ ಬರೆದ ವಾಲ್ಮೀಕಿ ಮಹಾನ್ ಎತ್ತರದ ಸ್ಥಾನದಲ್ಲಿ ಇದ್ದಾರೆ ಎಂದು ಹೇಳಿದರು.

ಯಾವುದಾದರೂ ರಸ್ತೆಗೆ ಸಂಜೀವಯ್ಯ ಹೆಸರಿಡಲು ತೀರ್ಮಾನ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ನಾಯಕ ಸಮಾಜದ ಮುಖಂಡ ಸಂಜೀವಯ್ಯ ಅವರ ಹೆಸರನ್ನು ಯಾವುದಾದರೂ ರಸ್ತೆ ಅಥವಾ ವೃತ್ತಕ್ಕೆ ನಾಮಕರಣ ಮಾಡುವ ಬಗ್ಗೆ ನಗರಪಾಲಿಕೆಯಲ್ಲಿ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಕಳುಹಿಸಿದರೆ ಅನುಮೋದನೆ ಕೊಡಿಸಲಾಗುವುದು. ನಾಯಕ ಸಮಾಜದವರು ನಿರ್ಮಿಸಿರುವ ಭವನಕ್ಕೆ ಸಂಸದರು, ಶಾಸಕರು, ಪರಿಷತ್ ಸದಸ್ಯರು ಅನುದಾನ ನೀಡಿದ್ದಾರೆ. ಸಮಾಜದ ಪ್ರಮುಖರು ದೇಣಿಗೆ ಸಂಗ್ರಹಿಸಿಕೊಟ್ಟಿದ್ದಾರೆ. ಇಂತಹ ಭವನಗಳು ಸಮಾಜದ ಹಿತ ಚಿಂತನೆಗೆ ಅನುಕೂಲವಾಗುವಂತೆ ನೆರವಾಗಲಿ ಎಂದು ಹೇಳಿದರು. ಇದೇ ವೇಳೆ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಸಮುದಾಯ ಭವನಕ್ಕೆ ಬೇಕಾದ ಮೂಲ ಸೌಕರ್ಯಗಳನ್ನು ಒದಗಿಸಲು ನೆರವು ನೀಡಲಾಗುವುದು. ಮೈಸೂರು ಜಿಲ್ಲೆಯಲ್ಲಿ ನಾಯಕ ಸಮಾಜದ ಜನಸಂಖ್ಯೆ ಹೆಚ್ಚಾಗಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಭಾಗವಹಿಸದೆ ಇರುವುದು ಮನಸ್ಸಿಗೆ ನೋವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು–ಚಾಮರಾಜನಗರ ಜಿಲ್ಲಾ ನಾಯಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಚಿಕ್ಕಣ್ಣ ವಹಿಸಿದ್ದರು. ಶಾಸಕರಾದ ಎಸ್.ಎ.ರಾಮದಾಸ್, ಜಿ.ಟಿ.ದೇವೇಗೌಡ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಜೆಎಲ್‌ಆರ್ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ನಗರಪಾಲಿಕೆ ಆಡಳಿತ ಪಕ್ಷದ ನಾಯಕ ಶಿವಕುಮಾರ್, ಸದಸ್ಯರಾದ ಲೋಕೇಶ್ ಪಿಯಾ, ಎಂ.ಎಸ್.ಶೋಭಾ, ವೇದಾವತಿ, ಆರ್.ರವೀಂದ್ರ, ಚಾಮರಾಜನಗರ ಚೂಡಾ ಮಾಜಿ ಅಧ್ಯಕ್ಷ ಆರ್.ಸುಂದರ್, ಹೆಚ್.ಡಿ.ಕೋಟೆ ಪುರಸಭಾಧ್ಯಕ್ಷೆ ಅನಿತಾ ನಿಂಗನಾಯಕ, ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಅನಿಲ್‌ಕುಮಾರ್, ಖಜಾಂಚಿ ಗೋವಿಂದರಾಜು, ಕಾರ್ಯದರ್ಶಿ ಕೆಂಪನಾಯಕ, ನಾಯಕರ ವಿದ್ಯಾಭಿವೃದ್ಧಿ ಸಂಘದ ಕಾರ್ಯದರ್ಶಿ ಎಂ.ಪುಟ್ಟಣ್ಣ, ನಾಯಕ ನೌಕರರ ಸಂಘದ ಅಧ್ಯಕ್ಷ ಜಗದೀಶ್, ಪದಾಧಿಕಾರಿಗಳಾದ ಶಶಿಕುಮಾರ್, ರಂಗಸ್ವಾಮಿ, ಗೋವಿಂದರಾಜು, ಮಹದೇವಯ್ಯ, ಚನ್ನಕೇಶವಮೂರ್ತಿ, ಬ್ಯಾಂಕ್ ಸಿದ್ದರಾಜು, ಎಚ್.ಡಿ.ಕೋಟೆ ತಾಲ್ಲೂಕಿನ ನಾಯಕ ಸಂಘದ ದೊಡ್ಡನಾಯಕ, ಶಂಭುಲಿಂಗನಾಯಕ, ನಾಗನಾಯಕ, ಕೃಷ್ಣ, ಮಿಲ್ ನಾಗರಾಜ್,ಹೆಬ್ಬಾಳ್ ಲೋಕೇಶ್, ಎಚ್.ಡಿ.ಕೋಟೆಸರ್ಕಾರಿ ನಾಯಕರ ಸಂಘದ ಅಧ್ಯಕ್ಷ ಸಿದ್ದನಾಯಕ, ಮೆಕ್ಯಾನಿಕ್ ಸೂರಿ, ಚಾಮರಾಜನಗರ ಜಿಲ್ಲೆಯ ಸುರೇಶ್, ಕಪಿನಿನಾಯಕ, ಬಂಗಾರಸ್ವಾಮಿ ಇನ್ನಿತರರು ಹಾಜರಿದ್ದರು.

ಕಂಪ್ಯೂಟರ್ ತರಬೇತಿ

ಮೈಸೂರು, ಆ. 21– ಎಸಿಇಟಿ ಕಂಪ್ಯೂಟರ್ ತರಬೇತಿ ಕೇಂದ್ರದ ವತಿಯಿಂದ 2 ತಿಂಗಳ ಉಚಿತ ಕಂಪ್ಯೂಟರ್ ಬೇಸಿಕ್, ಡಿಟಿಪಿ, ಟ್ಯಾಲಿ, ಸಿ++, ಸ್ಪೋಕನ್ ಇಂಗ್ಲಿಷ್ ಹಾಗೂ ಟೈಲರಿಂಗ್ ತರಗತಿಗಳನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತರು ಆ. 24 ರೊಳಗೆ ತಮ್ಮ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಮೊ. 7259143121 ಸಂಪರ್ಕಿಸಬಹುದು.

ಧ್ಯಾನಚಂದ್ ಸ್ಮರಣಾರ್ಥ 3 ದಿನ ಹಾಕಿ ಪಂದ್ಯಾವಳಿ

ಮೈಸೂರು, ಆ.21– ಹಾಕಿ ಮಾಂತ್ರಿಕ ಪದ್ಮಭೂಷಣ ಮೇಜರ್ ಧ್ಯಾನ್‌ಚಂದ್ ಸ್ಮರಣಾರ್ಥ ಹಾಗೂ 18ನೇ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ಆ.27ರಿಂದ 29ರವರೆಗೆ ಜಿಲ್ಲಾ ಮಟ್ಟದ ಹಾಕಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ರಾಷ್ಟ್ರೀಯ ಕ್ರೀಡಾ ದಿನಾಚರಣೆ ಸಮಿತಿ(ಮೈಸೂರು) ಕಾರ್ಯದರ್ಶಿ ಅಶೋಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸ್ಪರ್ಧೆಯಲ್ಲಿ ಭಾಗವಹಿಸುವ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿ ಕಾಲೇಜು ವಿದ್ಯಾರ್ಥಿಗಳಿಗಾಗಿ (ಬಾಲಕ, ಬಾಲಕಿಯರ ವಿಭಾಗದಲ್ಲಿ) 18ನೇ ಜಿಲ್ಲಾ ಮಟ್ಟದ ಹಾಕಿ ಪಂದ್ಯಾವಳಿಯನ್ನು ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಆ.25ರೊಳಗೆ ತಮ್ಮ ತಂಡದ ಹೆಸರುಗಳನ್ನು ನೋಂದಾಯಿಸಲು ಕೋರಿದ್ದಾರೆ. ಮೊ: 94483–64880/78921–37556

ಪರಿವಾರ, ತಳವಾರ ಪಂಗಡ ಎಸ್ಟಿಗೆ ಸೇರಿಸಲು ಹೆಚ್.ಡಿ.ದೇವೇಗೌಡರ ಬಳಿ ನಿಯೋಗ ಕೊಂಡೊಯ್ದಿದ್ದೆ



ಮೈಸೂರು, ಆ.21(ಎಂಟಿವೈ)– ನಾಯಕ ಸಮುದಾಯದ ಪರಿವಾರ–ತಳವಾರ ಪಂಗಡವನ್ನು ಎಸ್‌ಟಿ ಪಟ್ಟಿಗೆ ಸೇರಿಸಲು 1988ರಲ್ಲಿ ನಾನು ಜಿಪಂ ಸದಸ್ಯನಾಗಿದ್ದಾಗ ಹೆಚ್.ಡಿ.ದೇವೇಗೌಡರ ಬಳಿಗೆ ನಿಯೋಗ ಕರೆದೊಯ್ದಿದ್ದೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದ್ದಾರೆ.

ಸರಸ್ವತಿಪುರಂನಲ್ಲಿ ನೂತನವಾಗಿ ನಿರ್ಮಿಸಿರುವ ವಾಲ್ಮೀಕಿ ಭವನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪರಿವಾರ, ತಳವಾರ ಪಂಗಡಗಳನ್ನು ಪರಿಶಿಷ್ಟ ಪಂಗಡಕ್ಕೆ ಪರಿಗಣಿಸದೇ ಉಂಟಾಗಿದ್ದ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ನಾನು ಜಿ.ಪಂ ಸದಸ್ಯನಾಗಿದ್ದ ವೇಳೆ ಹೆಚ್.ಡಿ.ದೇವೇಗೌಡರ ಬಳಿ ನಿಯೋಗ ಕರೆದುಕೊಂಡು ಹೋಗಿ ಮನವಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿತ್ತು. ಅಂದು ಪ್ರಧಾನಿಯಾಗಿದ್ದ ಚಂದ್ರಶೇಖರ್ ಅವರ ಮೇಲೆ ಹೆಚ್.ಡಿ.ದೇವೇಗೌಡರು ಒತ್ತಡ ಹೇರಿ, ಈ ಎರಡು ಪಂಗಡಗಳನ್ನು ಎಸ್ಟಿ ಪಟ್ಟಿಗೆ ಸೇರಿಸಲು ಸಹಕಾರಿಯಾಗಿ ಪರಿಣಮಿಸಿತು ಎಂದರು.

ನಾನು ಜಿಪಂ ಅಧ್ಯಕ್ಷನಾಗಿದ್ದಾಗ 1988ರಲ್ಲಿ ಚಿಕ್ಕಣ್ಣ ಅವರನ್ನು ಪ್ಲಾನಿಂಗ್ ಕಮಿಟಿ ಅಧ್ಯಕ್ಷರನ್ನಾಗಿ ಆಯ್ಕೆಯಾಗಲು ನೆರವಾಗಿದ್ದೆ. ಸಮುದಾಯ ಪ್ರಮುಖ ನಾಯಕರಾಗಿದ್ದ ಎಸ್.ಚಿಕ್ಕಮಾದು ಅವರು ಕಾಂಗ್ರೆಸ್‌ನಿಂದ ಚುನಾವಣೆಯಲ್ಲಿ ಸೋತ ಮೇಲೆ ಅವರನ್ನು ಜೆಡಿಎಸ್‌ಗೆ ಕರೆತಂದು ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿಸಿದ್ದೆ. ಅವರ ಮಗ ಅನಿಲ್‌ರನ್ನು ಹನಗೋಡು ಜಿಪಂ ಕ್ಷೇತ್ರದಲ್ಲಿ ನಿಲ್ಲಿಸಿ ಗೆಲ್ಲುವಂತೆ ನಾನು, ನನ್ನ ಮಗ, ಪತ್ನಿ ನೋಡಿಕೊಂಡಿದ್ದೆವು. 2018ರಲ್ಲಿ ಚಿಕ್ಕಣ್ಣ ಅವರಿಗೆ ಟಿಕೆಟ್ ಕೊಡಿಸಲಾಗಿತ್ತಾದರೂ ಗೆಲ್ಲಲು ಸಾಧ್ಯವಾಗಲಿಲ್ಲ. ಕಳೆದ ಮೂರು ದಶಕಗಳಿಂದ ನಾಯಕ ಸಮಾಜದ ಜೊತೆಗೆ ನಿರಂತರವಾಗಿ ಒಡನಾಟ ಇಟ್ಟುಕೊಂಡು ಕೆಲಸ ಮಾಡಿಕೊಂಡು ಬಂದಿದ್ದೇನೆ. ಹುಣಸೂರು ಕ್ಷೇತ್ರದ ಶಾಸಕನಾಗಿದ್ದಾಗ ಸುವರ್ಣ ಗ್ರಾಮ ಯೋಜನೆಯಡಿ ಹಲವಾರು ಗ್ರಾಮಗಳನ್ನು ಅಭಿವೃದ್ಧಿಪಡಿಸಲಾಗಿತ್ತು. ನಾಯಕ ಸಮುದಾಯದವರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ವಿದ್ಯಾವಂತರನ್ನಾಗಿ ಮಾಡಿದರೆ ದೇಶದ ಆಸ್ತಿಯಾಗಿ ಹೊರ ಹೊಮ್ಮಲಿದ್ದಾರೆ ಎಂದರು.

ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ: ಸಮುದಾಯದಲ್ಲಿ ಹೊಸಬರು, ಯುವಕರಿಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಸಂಘದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಮೈಸೂರು–ಚಾಮರಾಜನಗರ ಜಿಲ್ಲಾ ನಾಯಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಚಿಕ್ಕಣ್ಣ ಪ್ರಕಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇಷ್ಟು ವರ್ಷಗಳ ಕಾಲ ಜನಾಂಗದ ಅಭಿವೃದ್ಧಿಗಾಗಿ ಶ್ರಮಿಸಿದ್ದೇನೆ. ಅಧ್ಯಕ್ಷನಾಗಿ ವಿದ್ಯಾರ್ಥಿನಿಲಯ, ನಾಯಕರ ಸಮುದಾಯಭವನ ನಿರ್ಮಾಣ ಮಾಡಬೇಕೆಂಬ ಕನಸು ನನಸಾಗಿದೆ. ನನಗೂ ವಯಸ್ಸಾಗಿರುವ ಕಾರಣ ಸಂಘಟನೆಯಲ್ಲಿ ತೊಡಗಲು ಸಾಧ್ಯವಾಗುತ್ತಿಲ್ಲ. ಹೊಸಬರು ಈ ಹುದ್ದೆಯನ್ನು ಅಲಂಕರಿಸಲು ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದರು.

ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಆಟೋ ಚಾಲಕರಿಗೆ ಸಮವಸ್ತ್ರ ವಿತರಣೆ



ಮೈಸೂರು, ಆ. 21(ಆರ್‌ಕೆಬಿ)– ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಜೆ.ಪಿ.ನಗರದಲ್ಲಿರುವ ಕಾಮಾಕ್ಷಿ ಆಸ್ಪತ್ರೆ ಸಮೂಹ ವತಿಯಿಂದ ಶಾಸಕರಾದ ಎಸ್.ಎ.ರಾಮದಾಸ್‌ರವರ ನೇತೃತ್ವದಲ್ಲಿ 120 ಆಟೋಚಾಲಕರಿಗೆ ಸಮವಸ್ತ್ರ ವಿತರಿಸಲಾಯಿತು.

ನಂತರ ಮಾತನಾಡಿದ ಶಾಸಕರು, ಸಮಾಜದಲ್ಲಿ ಆಟೋ ಚಾಲಕರು ದುಡಿಮೆಯ ಜೊತೆಯಲ್ಲೇ ಸೇವಾ ಮನೋಭಾವದ ಕಳಕಳಿಯುಳ್ಳವರು, ಪ್ರಧಾನಿ ನರೇಂದ್ರಮೋದಿ ಅವರ ಹುಟ್ಟುಹಬ್ಬದ ಅಂಗವಾಗಿ ಕ್ಷೇತ್ರದ ವ್ಯಾಪ್ತಿಯಲ್ಲಿ ಸ್ವಂತ ಆಟೋ ಕೊಳ್ಳುವ ಆಟೋ ಚಾಲಕರಿಗೆ ರಾಷ್ಟ್ರೀಕೃತ ಬ್ಯಾಂಕ್‌ನ ಒಡಂಬಡಿಕೆ ಜೊತೆಯಲ್ಲಿ ಸಬ್ಸಿಡಿಸಹಿತ ಆಟೋ ನೀಡಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕಾಮಾಕ್ಷಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಶೆಣೈ, ಯಶಸ್ವಿನಿ ಸೋಮಶೇಖರ್, ಬಿಜೆಪಿ ಮುಖಂಡರಾದ ಓಂ ಶ್ರೀನಿವಾಸ್, ಸಂತೋಷ್, ಅಕ್ಷಯ್, ಅಜಯ್ ಶಾಸ್ತ್ರಿ, ಶಿವರಾಜ್, ಕೃಷ್ಣ, ರಾಘವೇಂದ್ರ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.08.2022 ಸೋಮವಾರ, ಮಳೆ ನಕ್ಷತ್ರ : ಮಖೆ, 17.08.2022 ರಿಂದ 30.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ
ತಿಥಿ: ದಶಮೀ, ನಕ್ಷತ್ರ : ರೋಹಿಣಿ, ರಾಹುಕಾಲ: ಬೆಳಗ್ಗೆ 7.30 ರಿಂದ 9 ಗಂಟೆವರೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:**ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ಸಚ್ಚಿದಾನಂದ ಸ್ವಾಮಿಗೆ ಶ್ರಾವಣ ಸೋಮವಾರ ಪ್ರಯುಕ್ತ ಏಕಾದಶಿ ರುದ್ರಾಭಿಷೇಕ, ಬೆಳಗ್ಗೆ 6ರಿಂದ ಸಂಜೆ 6ರವರೆಗೆ ಶ್ರೀ ಸ್ವಾಮೀಜಿಯವರಿಂದ ಮೌನ ವ್ರತ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಮಹಿಳೆಯರ ಋತು ಬಂಧದ ಸಮಸ್ಯೆಗಳ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ ಆಲನಹಳ್ಳಿ, ಬೆಳಗ್ಗೆ 9.30ರಿಂದ.

■ **ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗ:** ಪೌರಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭ, ಪ್ರತಿಭಾ ಪುರಸ್ಕಾರ ನೀಡುವವರು: ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಮುಖ್ಯ ಅತಿಥಿಗಳು: ಸಚಿವರುಗಳಾದ ಕೋಟಾ ಶ್ರೀನಿವಾಸ ಪೂಜಾರಿ, ಗೋವಿಂದ ಕಾರಜೋಳ, ಶಾಸಕ ನಾಗೇಂದ್ರ, ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ: ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ಶಿವಣ್ಣ, ಸ್ಥಳ: ಮುಕ್ತ ವಿವಿ ಘಟಿಕೋತ್ಸವ ಭವನ, ಬೆಳಗ್ಗೆ 10 ಗಂಟೆಗೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಪತ್ರಿಕಾ ಛಾಯಾಗ್ರಾಹಕರು:** ವಿಶ್ವ ಛಾಯಾಗ್ರಹಣ ದಿನಾಚರಣೆ ಹಾಗೂ ಛಾಯಾಚಿತ್ರ ಪ್ರದರ್ಶನ, ಉದ್ಘಾಟನೆ: ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿ: ಶಾಸಕ ಎಲ್.ನಾಗೇಂದ್ರ, ಸನ್ಮಾನಿತರು: ಹಂಪಿಯ ಖ್ಯಾತ ಪತ್ರಿಕಾ ಛಾಯಾಗ್ರಾಹಕರಾದ ಶಿವಶಂಕರ್ ಬಣಗಾರ್, ಅಧ್ಯಕ್ಷತೆ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸ್ಥಳ: ಸುಚಿತ್ರ ಆರ್ಟ್ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30 ಗಂಟೆಗೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಮತ್ತು ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು:** ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೇ ಜಯಂತಿ ಮಹೋತ್ಸವ ಮತ್ತು ಸ್ನಾತಕ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳ ಬಹುಮಾನ ವಿತರಣಾ ಕಾರ್ಯಕ್ರಮ, ಸಮ್ಮುಖ: ವಾಟಾಳು ಶ್ರೀ ಸೂರ್ಯ ಸಿಂಹಾಸನ ಮಠದ ಶ್ರೀ ಸಿದ್ಧಲಿಂಗ ಶಿವಚಾರ್ಯ ಸ್ವಾಮಿಗಳು, ನುಡಿನಮನ: ವಿಶ್ರಾಂತ ಪ್ರಾಂಶುಪಾಲ ಪ್ರೊ. ಚಂದ್ರಶೇಖರಯ್ಯ, ಮುಖ್ಯ ಅತಿಥಿ: ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಡಾ. ಎಂ.ಎಸ್. ಗಿರಿಧರರಾವ್, ಅಧ್ಯಕ್ಷತೆ: ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಸ್ಥಳ: ಸುವರ್ಣ ಮಹೋತ್ಸವ ಭವನ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಶರಣ ಸಂಸ್ಕೃತಿ ಕುರಿತು ಪ್ರವಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ರಿಂದ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಪ್ರೊ.ಹೆಚ್.ಟಿ.ದೇವಣ್ಣ, ವಾಚನ: ಜೆಎಸ್‌ಎಸ್ ಪ್ರೌಢಶಾಲೆ ದೈಹಿಕ ಶಿಕ್ಷಕ ಡಿ.ಎಂ. ಸಿದ್ದಲಿಂಗಸ್ವಾಮಿ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಸಂಜೆ 6.30ರಿಂದ.

ರತ್ನಪುರಿಯಲ್ಲಿಂದು

■ **ಮಹಾಜನ ವಿದ್ಯಾಸಂಸ್ಥೆ, ರಾಜ್ಯ ಕಾನೂನು ವಿಶ್ವವಿದ್ಯಾಲಯ (ಹುಬ್ಬಳ್ಳಿ), ಎಸ್‌ಬಿಆರ್‌ಆರ್ ಮಹಾಜನ ಕಾಲೇಜು (ರಾಷ್ಟ್ರೀಯ ಸೇವಾ ಯೋಜನೆಯ ಘಟಕ):** ವಾರ್ಷಿಕ ವಿಶೇಷ ಶಿಬಿರ 2021–22, ಉದ್ಘಾಟನೆ: ಶಾಸಕ ಹೆಚ್.ಪಿ. ಮಂಜುನಾಥ್, ಸ್ಥಳ: ಸರ್ಕಾರಿ ಪ್ರೌಢಶಾಲೆ, ರತ್ನಪುರಿ, ಹುಣಸೂರು ತಾ॥, ಸಂಜೆ 5 ಗಂಟೆಗೆ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.05 ಚಿಂತನ – ಕೆ.ಎಸ್. ಸಂಧ್ಯಾರೆಡ್ಡಿ, 6.20 ಗೀತಾರಾಧನ 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮರಣೆಗಳು: ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು, ಲೇಖನ ಪ್ರಸ್ತುತಿ– ಡಿ.ಎನ್. ಶ್ರೀಪಾದ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಶಾಂತಲಾ ವಟ್ಟಂ, ವ್ಯಾಖ್ಯಾನ– ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.45 ನಿತ್ಯ ವಿಜ್ಞಾನ, 9.45 ಕೊಳಲು ತಯಾರಕರಾದ ರಾಘವ ಬದಿ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಡಾ. ಶರಭೇಂದ್ರ ಸ್ವಾಮಿ, 10.00 ಲಯಸಂಭ್ರಮ: ತಾಳ, ಲಯ, ರಸಾಸ್ವಾದ, ಪ್ರಸ್ತುತಿ:– ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ–ಎಸ್. ಸುಬ್ರಹ್ಮಣ್ಯ. ಭಾಗವಹಿಸುವವರು ಡಾ.ಕೆ. ವರದರಂಗನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

ಮಧ್ಯಾಹ್ನ: 12.30 ಭಕ್ತಿಗೀತೆಗಳು– ವಿನಾಯಕ ತೊರವಿ, 12.45 ನಮ್ಮ ಆರೋಗ್ಯ: ‘ಕಲಿಕಾ ನ್ಯೂನತೆಗಳು’ ನಿರ್ವಹಣೆ ಮತ್ತು ಪರಿಹಾರ ಕುರಿತು ಡಾ. ಜಯಶ್ರೀ ಶಾನ್ಬಾಳ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು, 3.00 ವಿ.ಕೆ. ರಾಮನ್–ವೇಣುವಾದನ.

ಸಂಜೆ: 4.00 ಮಹಿಳಾರಂಗ– ‘ಡಾಕ್ಟರ್ ಸಮಯ’– ನೇರ ಫೋನ್ ಇನ್ ಕಾರ್ಯಕ್ರಮ, ವಿಷಯ– ಗೃಹಿಣಿ ಹಾಗೂ ಆರೋಗ್ಯಕರ ಜೀವನ ಶೈಲಿ ಭಾಗವಹಿಸುವ ವೈದ್ಯರು– ಡಾ.ಕಾರ್ತಿಕ್ ಉಡುಪ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, ಕವಿ– ಸುಧಾ ಹರೀಶ್, ಸಂಗೀತ– ಜಿ.ಪುಷ್ಪಲತಾ, 6.50 ಕೃಷಿರಂಗ: ‘ಭತ್ತದ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ’ ಈ ವಿಚಾರವಾಗಿ ಜೆ.ಜಿ.ರಾಜಣ್ಣ ಅವರೊಡನೆ ಸಂದರ್ಶನ, 9.30 ‘ನೆಲ ಮೂಲ’: ಜನಪದ ಆಚರಣೆ ಮತ್ತು ಸಂಪ್ರದಾಯಗಳನ್ನು ಕುರಿತ ಸರಣಿ ಕಾರ್ಯಕ್ರಮ. ರಚನೆ–ಡಾ. ಪಿ.ಕೆ. ರಾಜಶೇಖರ್ ಪ್ರಸ್ತುತಿ– ಡಾ. ಮೈಸೂರು ಉಮೇಶ್.

ಅಮೆರಿಕಾದ ಚಿಕಾಗೋದಲ್ಲಿ ಶ್ರೀ ದತ್ತಾತ್ರೇಯ, ಶ್ರೀ ಅನಘದೇವಿ ವಿಗ್ರಹ ಪ್ರತಿಷ್ಠಾಪನೆ



ಮೈಸೂರು, ಆ.21(ಎಸ್‌ಬಿಡಿ)- ಅಮೆರಿಕಾದ ಚಿಕಾಗೊ ನಗರದಲ್ಲಿರುವ 'ಟ್ರಿನಿಟಿ ದತ್ತ ಯೋಗ ಆಶ್ರಮ'ದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯಂದು ಶ್ರೀದತ್ತಾತ್ರೇಯ ಮತ್ತು ಶ್ರೀ ಅನಘದೇವಿ ವಿಗ್ರಹ ಪ್ರತಿಷ್ಠಾಪನೆಯನ್ನು ಮೈಸೂರಿನ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ನೆರವೇರಿಸಿದರು.

ಟ್ರಿನಿಟಿ ದತ್ತ ಯೋಗ ಆಶ್ರಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀದತ್ತಾತ್ರೇಯ ದೇಗುಲದಲ್ಲಿ ಶ್ರೀದತ್ತಾತ್ರೇಯ ಹಾಗೂ ಅನಘದೇವಿ ವಿಗ್ರಹಗಳ ಪ್ರತಿಷ್ಠಾಪಿಸಿ, ನಿಶೀತಿ ಪೂಜೆಯನ್ನು ನೆರವೇರಿಸಿದ ಶ್ರೀಗಳು ನೆರೆದಿದ್ದ ಭಕ್ತಸಮೂಹಕ್ಕೆ ಆಶೀರ್ವಚನ ನೀಡಿದರು.

ಇದೇ ಸಂದರ್ಭದಲ್ಲಿ ಅಮೆರಿಕಾ ಸಂಸತ್ತಿನ ಚಿಕಾಗೊ ರಾಜ್ಯದ ಸಂಸತ್ ಸದಸ್ಯ ರಾಜಾ ಕೃಷ್ಣಮೂರ್ತಿ, ತಾವು ಅಮೆರಿಕಾ ಸಂಸತ್ ಕಾಂಗ್ರೆಸ್‌ನಲ್ಲಿ ಮಂಡಿಸಿದ್ದ ಶ್ರೀದತ್ತಾತ್ರೇಯ ದೇವಸ್ಥಾನ ನಿರ್ಮಾಣದ ಅನುಮೋದನೆಯ ದಾಖಲೆ ಪತ್ರವನ್ನು ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಗೆ ಹಸ್ತಾಂತರಿಸಿದರು. ನೂತನ ಶ್ರೀದತ್ತಾತ್ರೇಯ ದೇವಸ್ಥಾನವನ್ನು ಪ್ರಖ್ಯಾತ ದೇಗುಲ ಶಿಲ್ಪಿ ಸುಬ್ರಹ್ಮಣ್ಯ ಸ್ಥಪತಿ ನಿರ್ಮಿಸಿರುವುದು ವಿಶೇಷ.

ಅಮೆರಿಕಾದ ಚಿಕಾಗೊ ನಗರದಲ್ಲಿರುವ ಟ್ರಿನಿಟಿ ದತ್ತ ಯೋಗ ಆಶ್ರಮದಲ್ಲಿ ಕಳೆದ ಮೂರು ದಿನಗಳಿಂದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಹಲವು ಧಾರ್ಮಿಕ ಕಾರ್ಯಕ್ರಮಗಳು ಜರುಗಿದ್ದು, ಸಹಸ್ರಾರು ಅನಿವಾಸಿ ಭಾರತೀಯರು ಮತ್ತು ಅಮೆರಿಕಾ ಮೂಲದ ವಿದೇಶಿ ಭಕ್ತರು ಭಾಗಿಯಾಗಿದ್ದರು. ಮುಖ್ಯವಾಗಿ ಕೃಷ್ಣಜನ್ಮಾಷ್ಟಮಿ ಅಂಗವಾಗಿ ನಡೆದ 'ಭಗವದ್ಗೀತ ಪಾರಾಯಣ'ದಲ್ಲಿ ದಾಖಲೆಯ ಒಂದೂವರೆ ಸಾವಿರ ಮಂದಿ ಗೀತಾಪಾರಾಯಣ ಮಾಡಿದರು.

ಸ್ವಾಮೀಜಿ ನಾಳೆ ಚಿಕಾಗೊದಿಂದ ಲಂಡನ್‌ಗೆ ಪ್ರಯಾಣ ಬೆಳೆಸಿ, ಅಲ್ಲಿರುವ ತಮ್ಮ ಶ್ರೀದತ್ತ ಆಶ್ರಮಕ್ಕೆ ಭೇಟಿ ನೀಡಲಿದ್ದಾರೆ. ಅಲ್ಲಿಯೂ ಹಲವು ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಿದ ನಂತರ ಆ.27ರಂದು ಮೈಸೂರಿಗೆ ಹಿಂದಿರುಗಲಿದ್ದಾರೆ ಎಂದು ಮೈಸೂರಿನ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಪ್ರಕಟಣೆ ತಿಳಿಸಿದೆ.

'ಚಾಮುಂಡಿ ರನ್' ಓಟ ಸ್ಪರ್ಧೆಗೆ ರಾಜವಂಶಸ್ಥ ಯದುವೀರ್ ಚಾಲನೆ



ಮೈಸೂರು, ಆ.21(ಆರ್‌ಕೆಬಿ)- ಸ್ವಾತಂತ್ರ್ಯದ ಅಮೃತ ಮಹೋತ್ಸವ ಮತ್ತು ರಾಷ್ಟ್ರೀಯ ಕ್ರೀಡಾ ದಿನಾಚರಣೆ ಪ್ರಯುಕ್ತ ಮೈಸೂರಿನ ಕುವೆಂಪುನಗರದ ಪ್ಯಾಲೆಸ್ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗಾಗಿ ಭಾನುವಾರ ಆಯೋಜಿಸಲಾಗಿದ್ದ 'ಚಾಮುಂಡಿ ರನ್' ಜಿಲ್ಲಾ ಮಟ್ಟದ ರಸ್ತೆ ಓಟ ಸ್ಪರ್ಧೆಗೆ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಚಾಲನೆ ನೀಡಿದರು. ಶ್ರೀ ರಾಮಕೃಷ್ಣ ಪರಮಹಂಸ ವೃತ್ತದಿಂದ ದಟ್ಟಗಳ್ಳಿಯ ಆದಿತ್ಯ ವೃತ್ತದವರೆಗಿನ 4 ಕಿ.ಮೀ. ಮತ್ತು 2 ಕಿ.ಮೀ. ಓಟ ಏರ್ಪಡಿಸಲಾಗಿತ್ತು. ಇದರಲ್ಲಿ ಒಟ್ಟು 1200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಪ್ಯಾಲೆಸ್ ಸ್ಪೋರ್ಟ್ಸ್ ಕ್ಲಬ್ ಅದ್ಯಕ್ಷರೂ ಆದ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಮೇಯರ್ ಸುನಂದಾ ಪಾಲನೇತ್ರ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಎಂ.ಬಿ.ಮಂಜೇಗೌಡ, ಸುಯೋಗ್ ಆಸ್ಪತ್ರೆ ಚೇರ್ಮನ್ ಡಾ.ಎಸ್.ಪಿ.ಯೋಗಣ್ಣ, ಹಿರಿಯ ಈಜುಪಟು ರಾಮಚಂದ್ರಗೌಡ, ಕ್ಲಬ್‌ನ ಉಪಾಧ್ಯಕ್ಷ ಎಂ.ಎನ್.ರಮೇಶ್, ಆರ್.ವೈ.ಅರುಣ್, ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ನಂಜುಂಡಸ್ವಾಮಿ, ಕ್ಲಬ್‌ನ ಕಾರ್ಯದರ್ಶಿ ಪ್ರಕಾಶ್ ಇನ್ನಿತರರು ಉಪಸ್ಥಿತರಿದ್ದರು.

ವಿಜೇತರಿವರು: 2 ಕಿ.ಮೀ. ಪ್ರಾಥಮಿಕ ಬಾಲಕರ ವಿಭಾಗ: ಕವಿರಾಜ್ (ಪ್ರಥಮ), ಉದಯಕುಮಾರ್ (ದ್ವಿತೀಯ), ಶಾಂತಾ ನಾಗರಾಜ್ (ತೃತೀಯ),.

2 ಕಿ.ಮೀ. ಪ್ರಾಥಮಿಕ ಬಾಲಕಿಯರ ವಿಭಾಗ: ಎಂ.ಅನನ್ಯ (ಪ್ರಥಮ), ಮಮತಾ (ದ್ವಿತೀಯ), ಇಂಚರ (ತೃತೀಯ). **4 ಕಿ.ಮೀ. ಪ್ರೌಢಶಾಲಾ ಬಾಲಕರ ವಿಭಾಗ:** ಆನಂದು ಆರ್.ಕುಮಾರ್ (ಪ್ರಥಮ), ಆರ್.ಕೃಷ್ಣ (ದ್ವಿತೀಯ), ಮನೋಜ್‌ಕುಮಾರ್ (ತೃತೀಯ). **4 ಕಿ.ಮೀ. ಪ್ರೌಢಶಾಲಾ ಬಾಲಕಿಯರ ವಿಭಾಗ:** ಎಸ್.ಅಂಕಿತ (ಪ್ರಥಮ), ಎಸ್.ವೈಷ್ಣವಿ (ದ್ವಿತೀಯ), ಪಲ್ಲವಿ (ತೃತೀಯ).

ಸಾಮಾಜಿಕ ಕ್ರಾಂತಿ ಮಾಡಿದ ಮಹಾನಾಯಕ ದೇವರಾಜ ಅರಸು: ಪ್ರೊ.ಮಹಾದೇವಸ್ವಾಮಿ



ಮೈಸೂರು, ಆ.21- ದೇವರಾಜ ಅರಸುರವರು ಬಲಿಷ್ಠ ವರ್ಗಗಳನ್ನು ಎದುರು ಹಾಕಿಕೊಂಡು ತಳ ಸಮುದಾಯದ ಏಳ್ಗೆಗೆ ಸಾಮಾಜಿಕ ಕ್ರಾಂತಿಯನ್ನು ಮಾಡಿದ ಮಹಾನಾಯಕ ಎಂದು ಜೆಎಸ್‌ಎಸ್. ಮಹಿಳಾ ಕಾಲೇಜಿನ ಪ್ರೊ ಮಹಾದೇವಸ್ವಾಮಿ ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ 107ನೇ ಜನ್ಮ ದಿನಾಚರಣೆಯನ್ನು ರಾಘವೇಂದ್ರ ನಗರದ ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ಏರ್ಪಡಿಸಿದ್ದ ಆಟೋಟ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ಅರಸುರವರ ಮೇಲೆ ಸುಭಾಶ್‌ಚಂದ್ರ ಬೋಸ್ ಮತ್ತು ಗಾಂಧೀಜಿಯವರ ಪ್ರಭಾವ ಹೆಚ್ಚಾಗಿತ್ತು ಎಂದರು.

ಹಿಂದುಳಿದ ವರ್ಗದವರಿಗೆ ತಳಸಮುದಾಯದವರಿಗೆ ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಸಬಲರಾಗಲು ಕಾರ್ಯಕ್ರಮಗಳನ್ನು ರೂಪಿಸಿ ಸಂವಿಧಾನದಡಿಯಲ್ಲಿ ಅಂಬೇಡ್ಕರ್ ಆಶಯದಂತೆ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬಂತೆ ಉಳುವವನೆ ಭೂ ಒಡೆಯ ಎಂದು ಭೂ ಸುಧಾರಣೆ ಕಾಯ್ದೆಯನ್ನು ಜಾರಿಗೆ ತಂದರು. ಕರ್ನಾಟಕದಲ್ಲಿ 2ನೇ ಸಾಲಿನ ನಾಯಕರನ್ನು ಹುಟ್ಟುಹಾಕಿದ್ದು ಅರಸುರವರು. 1972ರಲ್ಲಿ ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ನಾಮಕರಣ ಮಾಡಿದ ಆ ಕಾಲವನ್ನು ಅರಸು ಯುಗ ಎಂದು ಕರೆಯುತ್ತಿದ್ದರು ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಹೆಚ್.ಎಸ್. ಬಿಂದ್ಯಾ ಮಾತನಾಡಿ, ದೇವರಾಜ ಅರಸುರವರು ನಿಮಗೆ ಹಾಸ್ಟೆಲ್ ಕಟ್ಟಿಸಿ ಊಟಕೊಟ್ಟು, ಸ್ಕಾಲರ್‌ಶಿಪ್ ಕೊಟ್ಟು ನಿಮ್ಮ ಏಳ್ಗೆಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟಿರುವ ಅರಸುರವರನ್ನು ನಿಮ್ಮ ತಂದೆ ತಾಯಿಯರನ್ನು ನೆನೆದುಕೊಳ್ಳುವಂತೆ ನೆನಪಿಸಿಕೊಳ್ಳಬೇಕು. ಸರ್ಕಾರದ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಸಾಧನೆ, ಶ್ರಮ, ಛಲ ಇಟ್ಟುಕೊಂಡು ಗುರಿ ಸಾಧಿಸಬೇಕೆಂದು ಕರೆ ನೀಡಿದರು.

ಸಮಾರಂಭದಲ್ಲಿ ನಿಲಯಪಾಲಕ ಪರಶುರಾಂ ಮಾತನಾಡಿದರು. ತಾಲ್ಲೂಕು ಕಲ್ಯಾಣ ಅಧಿಕಾರಿಗಳಾದ ಚಂದ್ರಕಲಾ, ವಿಶ್ವನಾಥ್, ಸುಜೇಂದ್ರಕುಮಾರ್, ಸ್ವರ್ಣಲತಾ, ಮಹೇಶ್, ಶಶಿಕಲಾ, ರಾಜಣ್ಣ ಪ್ರೇಮ್‌ಕುಮಾರ್, ಸತೀಶ್, ಸುಕನ್ಯ ನಿರಂಜನಮೂರ್ತಿ, ನಿಲಯಪಾಲಕರಾದ ಮಂಜುಳ, ರಮ್ಯ, ಜಗದೀಶ್ ಕೋರಿ, ಯಶವಂತ್, ಶಿವಕುಮಾರ್, ಮಂಜುನಾಥ್, ಅನುಪಮ, ವೀರಬಸಪ್ಪ ನಿರೂಪಿಸಿದರು. ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ನೂತನ ಎನ್‌ಇಪಿಯಲ್ಲಿ ಎನ್‌ಎಸ್‌ಎಸ್ ಪಠ್ಯಕ್ರಮವಾಗಿ ಅಳವಡಿಕೆ; ಮೂರ್‍ನಾಲ್ಕು ದಿನಗಳಲ್ಲಿ ಪಠ್ಯಕ್ರಮದ ಕರಡು ಸಿದ್ಧಗೊಳ್ಳಲಿದೆ

● ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಮಾಹಿತಿ ● ರಾಜ್ಯ ಮಟ್ಟದ ಯುವಜನೋತ್ಸವ-2022ಕ್ಕೆ ಚಾಲನೆ



ಮೈಸೂರಿನ ಮಾನಸ ಗಂಗೋತ್ರಿಯ ಮೈಸೂರು ವಿವಿಯ ಲಲಿತಕಲಾ ಕಾಲೇಜಿನ ರಂಗಮಂದಿರದಲ್ಲಿ ಐದು ದಿನಗಳ ರಾಜ್ಯ ಮಟ್ಟದ ಯುವಜನೋತ್ಸವಕ್ಕೆ ಭಾನುವಾರ ಚಾಲನೆ ನೀಡಲಾಯಿತು.



ಯುವಜನೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಕಲಾ ಪ್ರದರ್ಶನ ನೀಡುತ್ತಿರುವ ಎನ್‌ಎಸ್‌ಎಸ್ ಸ್ವಯಂ ಸೇವಕರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಆ.21(ಪಿಎಂ)- ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020ರಲ್ಲಿ ಎನ್‌ಎಸ್‌ಎಸ್ (ರಾಷ್ಟ್ರೀಯ ಸೇವಾ ಯೋಜನೆ) ಅನ್ನು ಪಠ್ಯಕ್ರಮವಾಗಿ ಅಳವಡಿಸಲಾಗಿದೆ. ಈಗಾಗಲೇ ಉನ್ನತ ಶಿಕ್ಷಣ ಇಲಾಖೆಯಿಂದ ರಚನೆಯಾಗಿರುವ ಸಮಿತಿಯು ಪಠ್ಯಕ್ರಮ ಸಿದ್ಧಪಡಿಸುತ್ತಿದ್ದು, ಮೂರ್‍ನಾಲ್ಕು ದಿನಗಳಲ್ಲಿ ಪಠ್ಯಕ್ರಮದ ಕರಡು ಸಿದ್ಧಗೊಳ್ಳಲಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನಾ (ಎನ್‌ಎಸ್‌ಎಸ್) ಕೋಶದ ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ತಿಳಿಸಿದರು.

> **ಐದು ದಿನಗಳ ಉತ್ಸವದಲ್ಲಿ 26 ವಿವಿಗಳಿಂದ 250 ಎನ್‌ಎಸ್‌ಎಸ್ ಸ್ವಯಂ ಸೇವಕರು ಭಾಗಿ...**
>
> ❝ ರಾಜ್ಯ ಮಟ್ಟದ ಯುವಜನೋತ್ಸವ ಆಯೋಜಿಸಲು ಮೈಸೂರು ವಿವಿಗೆ ಸರ್ಕಾರ ಅವಕಾಶ ಕಲ್ಪಿಸಿದೆ. ರಾಜ್ಯದ 26 ವಿಶ್ವವಿದ್ಯಾನಿಲಯಗಳಿಂದ 250 ಮಂದಿ ಎನ್‌ಎಸ್‌ಎಸ್ ಸ್ವಯಂ ಸೇವಕರು ಈ ಯುವಜನೋತ್ಸವದಲ್ಲಿ ಪಾಲ್ಗೊಂಡಿದ್ದಾರೆ. ಐದು ದಿನಗಳ ಕಾಲ ನಡೆಯುವ ಈ ಉತ್ಸವದಲ್ಲಿ ಸ್ಪರ್ಧೆಗಳೂ ಸೇರಿದಂತೆ 7ರಿಂದ 8 ಈವೆಂಟ್ಸ್‌ಗಳು ನಡೆಯಲಿವೆ. 30 ಮಂದಿ ತೀರ್ಪುಗಾರರು ಈ ಉತ್ಸವದಲ್ಲಿ ಭಾಗವಹಿಸಿದ್ದಾರೆ. ಲಲಿತಕಲಾ ಕಾಲೇಜು ಆವರಣದಲ್ಲಿ ಯುವಜನೋತ್ಸವದ ಸ್ಪರ್ಧೆ ಹಾಗೂ ಕಾರ್ಯಕ್ರಮಗಳು ನಡೆಯಲಿವೆ.
>
> **-ಡಾ.ಎಂ.ಬಿ.ಸುರೇಶ,** ಮೈಸೂರು ವಿವಿ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ

ಮೈಸೂರಿನ ಮಾನಸ ಗಂಗೋತ್ರಿಯ ಮೈಸೂರು ವಿವಿಯ ಲಲಿತಕಲಾ ಕಾಲೇಜಿನ ರಂಗಮಂದಿರದಲ್ಲಿ ಮೈಸೂರು ವಿವಿಯ ಎನ್‌ಎಸ್‌ಎಸ್ ಘಟಕ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿರುವ ಐದು ದಿನಗಳ ರಾಜ್ಯ ಮಟ್ಟದ ಯುವಜನೋತ್ಸವ-2022 ಅನ್ನು ಭಾನುವಾರ ಉದ್ಘಾಟಿಸಿ ಮಾತನಾಡಿದ ಅವರು, ಎನ್‌ಇಪಿ-2020ರಲ್ಲಿ ಎನ್‌ಎಸ್‌ಎಸ್ ಅನ್ನು ಒಂದು ಪಠ್ಯಕ್ರಮವಾಗಿ ಅಳವಡಿಸಿರುವುದು ಈ ಯೋಜನೆಗೆ ಒಂದು ದೊಡ್ಡ ಶಕ್ತಿಯಾಗಲಿದೆ ಎಂದು ಹೇಳಿದರು.

1969ರಲ್ಲಿ ನಮ್ಮ ದೇಶದಲ್ಲಿ 40 ಸಾವಿರ ಸ್ವಯಂ ಸೇವಕರಿಂದ ಎನ್‌ಎಸ್‌ಎಸ್ ಆರಂಭಗೊಂಡಿತು. ಆಗ ಕೆಲವೇ ಕೆಲವು ವಿವಿಗಳು ಈ ಯೋಜನೆ ಜಾರಿಗೊಳಿಸಿದವು. ಆ ಪೈಕಿ ಮೈಸೂರು ವಿವಿ ಕೂಡ ಒಂದು ಎಂಬುದು ಹೆಮ್ಮೆಯ ವಿಚಾರ. ವಿದ್ಯಾರ್ಥಿಗಳನ್ನು ಸಮಾಜ ಸೇವೆಯಲ್ಲಿ ತೊಡಗಿಸಬೇಕೆಂಬ ಉದ್ದೇಶದಿಂದ ಗಾಂಧೀಜಿಯವರ ಪರಿಕಲ್ಪನೆಯಲ್ಲಿ ಈ ಯೋಜನೆ ಪ್ರಾರಂಭಗೊಂಡಿತು. ಆರಂಭದಲ್ಲಿ ಇಡೀ ದೇಶದಲ್ಲಿ ಕೇವಲ 40 ಸಾವಿರ ಸ್ವಯಂ ಸೇವಕರಿಂದ ಕೂಡಿದ್ದ ಎನ್‌ಎಸ್‌ಎಸ್, ಇಂದು 50 ಲಕ್ಷಕ್ಕೂ ಹೆಚ್ಚು ಸ್ವಯಂ ಸೇವಕರನ್ನು ಹೊಂದಿದೆ ಎಂದು ತಿಳಿಸಿದರು.

ಶಿಕ್ಷಣದ ಜೊತೆಗೆ ವ್ಯಕ್ತಿತ್ವ ವಿಕಸನ ಹಾಗೂ ಸಮಾಜ ಸೇವೆ ಎಂಬುದು ಎನ್‌ಎಸ್‌ಎಸ್ ಮುಖ್ಯ ಉದ್ದೇಶ ಎನ್‌ಎಸ್‌ಎಸ್ ನಮ್ಮ ಇಡೀ ದೇಶದ ಒಂದು ದೊಡ್ಡ ಶಕ್ತಿಯಾಗಿದ್ದು, ಇದೊಂದು ಉತ್ತಮ ಸಂಘಟನೆಯಾಗಿ ಹೊರಹೊಮ್ಮಿದೆ. ನಿಜವಾದ ಮೌಲ್ಯಗಳನ್ನು ಕಲಿಯಲು ಎನ್‌ಎಸ್‌ಎಸ್ ಎಂಬುದು ವಿದ್ಯಾರ್ಥಿಗಳಿಗೆ ಒಂದು ಉತ್ತಮ ವೇದಿಕೆಯಾಗಿದೆ. ಪ್ರಸ್ತುತ ರಾಜ್ಯದಲ್ಲಿ 5 ಲಕ್ಷ ಎನ್‌ಎಸ್‌ಎಸ್ ಸ್ವಯಂ ಸೇವಕರಿದ್ದು, ಆ ಮೂಲಕ ಇಡೀ ದೇಶದಲ್ಲೇ ಅತ್ಯಂತ ಹೆಚ್ಚು ಸ್ವಯಂ ಸೇವಕರನ್ನು ರಾಜ್ಯ ಹೊಂದಿದೆ. ಇದನ್ನು 10 ಲಕ್ಷಕ್ಕೆ ಹೆಚ್ಚಳ ಮಾಡಬೇಕೆಂಬ ಉದ್ದೇಶವನ್ನು ಮುಖ್ಯಮಂತ್ರಿಗಳು ಹೊಂದಿದ್ದಾರೆ ಎಂದು ಹೇಳಿದರು.

ಪ್ರಸಕ್ತ ಸಾಲಿನಿಂದ ವಾರ್ಷಿಕ 4 ಯುವಜನೋತ್ಸವ: ಪ್ರತಿ ವರ್ಷ 10 ಭಾವೈಕ್ಯತಾ ಶಿಬಿರಗಳನ್ನು ಆಯೋಜಿಸಲು ರಾಜ್ಯ ಸರ್ಕಾರ ಅವಕಾಶ ನೀಡಿದೆ. ಬೇರೆ ಯಾವ ರಾಜ್ಯ ಸರ್ಕಾರಗಳೂ ಇಷ್ಟು ಶಿಬಿರಗಳ ಆಯೋಜನೆಗೆ ಅವಕಾಶ ನೀಡಿಲ್ಲ. ಪ್ರತಿವರ್ಷ ಎರಡು ಯುವಜನೋತ್ಸವಕ್ಕೆ ಸರ್ಕಾರ ಅವಕಾಶ ನೀಡಿತ್ತು. ಈ ವರ್ಷದಿಂದ ನಾಲ್ಕು ಯುವಜನೋತ್ಸವ ಆಯೋಜನೆಗೆ ಸರ್ಕಾರ ಅವಕಾಶ ಕಲ್ಪಿಸಿದೆ. ಜಾಗತೀಕರಣದ ಪ್ರಭಾವದಿಂದ ನಮ್ಮ ಯುವ ಪೀಳಿಗೆ ಪಾಶ್ಚಿಮಾತ್ಯ ಆಚಾರ-ವಿಚಾರ ಮತ್ತು ಸಂಸ್ಕೃತಿಗೆ ಆಕರ್ಷಿತವಾಗುತ್ತಿದೆ. ಇದನ್ನು ತಡೆಗಟ್ಟಿ ನಮ್ಮ ಕಲೆ-ಸಂಸ್ಕೃತಿ ಉಳಿಸಿ ಬೆಳೆಸಲು ಎನ್‌ಎಸ್‌ಎಸ್ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಸರ್ಕಾರ ಮುಂದಾಗಿದೆ ಎಂದು ತಿಳಿಸಿದರು.

ಭಾರತ ಸರ್ಕಾರದ ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶನಾಲಯದ ಪ್ರಾದೇಶಿಕ ನಿರ್ದೇಶಕ ಕೆ.ವಿ.ಖಾದ್ರಿ ನರಸಿಂಹಯ್ಯ ಮಾತನಾಡಿ, ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಿಸಿಕೊಳ್ಳುವ ಈ ಸಂದರ್ಭದಲ್ಲಿ ದೇಶ ಸಾಕಷ್ಟು ಅಭಿವೃದ್ಧಿ ಸಾಧಿಸಿದೆ. ದೇಶದ ಯುವ ಸಮುದಾಯ ಮನಸ್ಸು ಮಾಡಿದರೆ ನಮ್ಮ ರಾಷ್ಟ್ರ ಮತ್ತಷ್ಟು ಅಭಿವೃದ್ಧಿ ಹೊಂದಲು ಸಾಧ್ಯವಾಗಲಿದೆ. ಹೆಚ್ಚಿನ ಯುವ ಜನರನ್ನು ನಮ್ಮ ದೇಶ ಹೊಂದಿದೆ. ಹೀಗಾಗಿ ನಮ್ಮ ದೇಶವನ್ನು ಯಂಗ್ ಇಂಡಿಯಾ ಎಂದು ಕರೆಯಲಾಗುತ್ತಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಮಾತನಾಡಿ, ಇತ್ತೀಚೆಗೆ ವಿವಿ ವತಿಯಿಂದ ಆಯೋಜಿಸಿದ್ದ ಯುವ ಮಹೋತ್ಸವ ನಿರೀಕ್ಷೆಗೂ ಮೀರಿ ಯಶಸ್ಸು ಕಂಡಿದೆ. 35 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಈ ಮಹೋತ್ಸವಕ್ಕೆ ಆಗಮಿಸಿ ದಾಖಲೆ ಬರೆದಿದ್ದಾರೆ. ಈ ಉತ್ಸವ ಆಯೋಜನೆಯಲ್ಲಿ ನಮ್ಮ ಎನ್‌ಎಸ್‌ಎಸ್ ಸ್ವಯಂ ಸೇವಕರು ಮಹತ್ತರ ಪಾತ್ರ ವಹಿಸಿದರು ಎಂದರು.

ರಾಜ್ಯದಲ್ಲಿಯೇ ಪ್ರಪ್ರಥಮವಾಗಿ ನಮ್ಮ ವಿವಿಯ 11 ಕಾಲೇಜುಗಳಲ್ಲಿ ಎನ್‌ಎಸ್‌ಎಸ್ ಆರಂಭಗೊಂಡಾಗ, 1,100 ಸ್ವಯಂ ಸೇವಕರಿದ್ದರು. ಪ್ರಸ್ತುತ ವಿವಿ ವ್ಯಾಪ್ತಿಯ ಕಾಲೇಜುಗಳಲ್ಲಿ 192 ಎನ್‌ಎಸ್‌ಎಸ್ ಘಟಕಗಳಿದ್ದು, ಒಟ್ಟು 19,200 ಸ್ವಯಂ ಸೇವಕರನ್ನು ಒಳಗೊಂಡು ಇಡೀ ರಾಜ್ಯದಲ್ಲಿಯೇ ಅತಿ ಹೆಚ್ಚು ಸ್ವಯಂ ಸೇವಕರನ್ನು ಒಳಗೊಂಡ ವಿವಿ ಎಂಬ ಹೆಮ್ಮೆಗೆ ಭಾಜನವಾಗಿದೆ. ಜೊತೆಗೆ ಎನ್‌ಸಿಸಿಯಲ್ಲಿ 10 ಸಾವಿರ ಶಿಬಿರಾರ್ಥಿಗಳು ಇದ್ದಾರೆ ಎಂದು ತಿಳಿಸಿದರು.

ಶಿಕ್ಷಣ ಪಡೆದ ಮೇಲೆ ಯಾವ ರೀತಿ ಜೀವನ ರೂಪಿಸಿಕೊಳ್ಳಬೇಕು ಎಂಬುದು ಮುಖ್ಯ. ಆದರೆ ಇಂದು ಯುವ ಜನತೆ ಶೈಕ್ಷಣಿಕ ಜೀವನದ ಬಳಿಕ ಭವಿಷ್ಯ ರೂಪಿಸಿಕೊಳ್ಳುವಲ್ಲಿ ಗೊಂದಲಕ್ಕೀಡಾಗುವುದೇ ಹೆಚ್ಚಾಗಿದೆ. ಹಾಗಾಗಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು ಅಗತ್ಯವಾಗಿದೆ. ಕೌಶಲ್ಯ ವೃದ್ಧಿಸಿಕೊಂಡು ಜೀವನ ರೂಪಿಸಿಕೊಳ್ಳಬೇಕು. ವಿದ್ಯಾಭ್ಯಾಸಕ್ಕೆ ತಕ್ಕಂತೆ ಸರ್ಕಾರಿ ಕೆಲಸವೇ ಬೇಕೆಂದರೆ ಆಗದು ಎಂದು ತಿಳಿ ಹೇಳಿದರು.

ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಎ.ಪಿ.ಜ್ಞಾನಪ್ರಕಾಶ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾದ ಡಾ.ಈ.ಸಿ.ನಿಂಗರಾಜ್‌ಗೌಡ, ವೈ.ಕೆ.ಪವಿತ್ರ, ಮೈಸೂರು ವಿವಿ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ, ಮೈಸೂರು ವಿವಿ ಎನ್‌ಎಸ್‌ಎಸ್ ಇಟಿಐ ತರಬೇತಿ ಸಂಸ್ಥೆಯ ಸಂಯೋಜನಾಧಿಕಾರಿ ಪ್ರೊ.ಬಿ.ಚಂದ್ರಶೇಖರ ಮತ್ತಿತರು ಹಾಜರಿದ್ದರು.

ರಂಗಭೂಮಿ ಚಟುವಟಿಕೆ ಸಮಾಜಮುಖಿಯಾಗಿದೆ

ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಶ್ರೀನಿವಾಸ ಜಿ.ಕಪ್ಪಣ್ಣ ಅಭಿಮತ



ಮೈಸೂರು, ಆ.21(ಎಂಕೆ)- ರಂಗಭೂಮಿಯ ಇಡೀ ಚಟುವಟಿಕೆ ಸಮಾಜಮುಖಿಯಾಗಿದ್ದು, ದೇಶ ಕಟ್ಟುವಲ್ಲಿ ಬಹುದೊಡ್ಡ ಪಾತ್ರ ನಿರ್ವಹಿಸಲಿದೆ. 'ನಾನು' ಎಂಬುದರ ಬದಲು 'ನಾವು' ಎಂಬುದನ್ನು ಕಲಿಸುತ್ತದೆ ಎಂದು ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಶ್ರೀನಿವಾಸ ಜಿ.ಕಪ್ಪಣ್ಣ ಅಭಿಪ್ರಾಯ ವ್ಯಕ್ತಪಡಿಸಿದರು.

ಕಲಾಮಂದಿರ ಕಿರುರಂಗಮಂದಿರದಲ್ಲಿ ಶನಿವಾರ ನೆಲೆ ಹಿನ್ನೆಲೆ, ಕರ್ನಾಟಕ ಪರಿಷತ್ತು ಹಾಗೂ ಕರ್ನಾಟಕ ಬೀದಿ ನಾಟಕ ಅಕಾಡೆಮಿ ವತಿಯಿಂದ ಆಯೋಜಿಸಿದ್ದ 'ಸಿಜಿಕೆ ಬೀದಿರಂಗ ದಿನ' ಹಾಗೂ 'ಸಿಜಿಕೆ ರಂಗ ಪ್ರಶಸ್ತಿ ಪ್ರದಾನ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಂಗಭೂಮಿಯಲ್ಲಿ ಯಾವುದೇ ಜಾತಿ, ಮತ, ಭಾಷೆ ಎನ್ನದೇ ಒಗ್ಗಟ್ಟಿನಿಂದ ಕೆಲಸ ಮಾಡುತ್ತೇವೆ. ಯಾರು ಯಾರನ್ನು ಯಾವ ಜಾತಿ ಎಂದು ಕೇಳುವುದಿಲ್ಲ ಆದ್ದರಿಂದಲೇ ರಂಗಭೂಮಿ ಇಂದಿನವರೆಗೂ ಅದ್ಭುತವಾಗಿಯೇ ಇದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಯೋಜನಾ ಇಲಾಖೆ ಪ್ರದೇಶ ಅಭಿವೃದ್ಧಿ ಮಂಡಳಿ ನಿರ್ದೇಶಕ ಡಿ.ಚಂದ್ರಶೇಖರಯ್ಯ, ಅತ್ಯಾಚಾರ, ಕೊಲೆ ಮಾಡಿ ಜೈಲು ಸೇರಿದ ಕೆಲ ದಿನಗಳಲ್ಲಿಯೇ ಸನ್ನಡತೆಯ ಆಧಾರದ ಮೇಲೆ ಬಿಡುಗಡೆಯಾದವರನ್ನು ಆರತಿ ಎತ್ತಿ ಬರಮಾಡಿಕೊಳ್ಳುವ ವ್ಯವಸ್ಥೆಯಲ್ಲಿ ಪ್ರತಿಯೊಂದು ಹೆಣ್ಣುಮಗುವೂ ಫೂಲನ್ ದೇವಿಯಂತೆ ಧೈರ್ಯವಂತ ಮಹಿಳೆಯಾಗಬೇಕು ಎಂದರು.

ಪ್ರಸ್ತುತ ಸಾರ್ವಜನಿಕರು ತಮ್ಮ ತಮ್ಮ ಕೆಲಸಗಳನ್ನು ಅಂತರ್‌ಮುಖಿ ಮಾಡಿಕೊಳ್ಳಬೇಕಾಗಿದ್ದು, ಕಾರಣ ತಮಗೆ ತಿಳಿದಿರುತ್ತದೆ ಎಂದ ಅವರು, ಕನ್ನಡ ದೃಶ್ಯ ಮಾಧ್ಯಮಗಳಲ್ಲಿ ಚಂದನ ವಾಹಿನಿಯನ್ನೊಂದನ್ನು ಬಿಟ್ಟು ಉಳಿದೆಲ್ಲಾ ಚಾನೆಲ್‌ಗಳನ್ನು ಒಂದು ವರ್ಷ ನೋಡುವುದನ್ನು ಬಿಟ್ಟರೆ ನಾವುಗಳು ಒಂದಷ್ಟು ಅಭಿವೃದ್ಧಿಯಾಗಬಹುದು. ಅಲ್ಲದೆ ಜಂಜಾಟಗಳಿಂದ ಹೊರಬರಬಹುದು ಎಂದು ಹೇಳಿದರು.

ಸನ್ಮಾನ: ಇದೇ ವೇಳೆ 2021ನೇ ಸಾಲಿನ ಸಿಜಿಕೆ ರಂಗ ಪ್ರಶಸ್ತಿಯನ್ನು ಎಂ.ಎಂ. ಸುಗುಣ ಹಾಗೂ 2022ನೇ ಸಾಲಿನ ಪ್ರಶಸ್ತಿಯನ್ನು ಶಿವಾಜಿರಾವ್ ಜಾದವ್ ಅವರಿಗೆ ಪ್ರದಾನ ಮಾಡಲಾಯಿತು. ಬಳಿಕ ರಾಜ್‌ಗುರು ರಚನೆ, ಸಂಗೀತ, ವಿನ್ಯಾಸ ಹಾಗೂ ನಿರ್ದೇಶನದಲ್ಲಿ 'ಫೂಲನ್ ದೇವಿ' ನಾಟಕ ಪ್ರದರ್ಶನವಾಯಿತು.

ವಾಣಿಜ್ಯ ತೆರಿಗೆಗಳ ಇಲಾಖೆ ಉಪ ಆಯುಕ್ತ ಡಿ.ಎಂ.ಮಂಜುನಾಥ್ ಸೋಸ್ಲೆ, ಕರ್ನಾಟಕ ರಂಗ ಪರಿಷತ್ತು ರಾಜ್ಯ ಸಂಚಾಲಕ ಸಿ.ಎಂ.ನರಸಿಂಹಮೂರ್ತಿ, ನೆಲೆ ಹಿನ್ನೆಲೆ ಕೆ.ಆರ್.ಗೋಪಾಲಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.



91 ವಸಂತಗಳನ್ನು ಪೂರೈಸಿದ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತರು, ಶಾರದಾವಿಲಾಸ ಸಂಸ್ಥೆಯ ಹಳೆಯ ವಿದ್ಯಾರ್ಥಿ ಮತ್ತು ಸರ್ವ ಸದಸ್ಯರಾಗಿರುವ ಖ್ಯಾತ ಕಾದಂಬರಿಗಾರರಾದ ಡಾ.ಎಸ್.ಎಲ್. ಭೈರಪ್ಪ ಅವರನ್ನು ಮೈಸೂರಿನ ಶಾರದಾವಿಲಾಸ ವಿದ್ಯಾಸಂಸ್ಥೆಗಳ ವತಿಯಿಂದ ಮೈಸೂರಿನ ಅವರ ನಿವಾಸದಲ್ಲಿ ಸನ್ಮಾನಿಸಿ, ಗೌರವಿಸಲಾಯಿತು. ಚಿತ್ರದಲ್ಲಿ ಸಂಸ್ಥೆಯ ಆಡಳಿತ ಮಂಡಳಿ ಹಿರಿಯ ಸದಸ್ಯರಾದ ಆರ್.ನರಸಿಂಹ, ಎಸ್.ಎಲ್.ರಾಮಚಂದ್ರ, ಆರ್.ಎಸ್.ಮೋಹನ್ ಮೂರ್ತಿ, ನಾಗೇಶ್ ಹನಸೋಗೆ ಹಾಗೂ ಸಂಸ್ಥೆಯ ಸರ್ವ ಸದಸ್ಯರಾದ ಡಾ.ಶೇಖರ್ ಅವರನ್ನು ಕಾಣಬಹುದು.

ಪಿಎಚ್.ಡಿ ಪದವಿ



ಮೈಸೂರು, ಆ. 21- ಡಾ.ಆರ್. ರಾಮಕೃಷ್ಣ ಅವರ ಮಾರ್ಗದರ್ಶನದಲ್ಲಿ ಬಿ.ವಿ. ಗೋವಿಂದ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಕನ್ನಡ ದಿನಪತ್ರಿಕೆಗಳ ಭಾಷೆ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಅರಸು ಮಂಡಳಿ ಸಂಘದ ಶತಮಾನೋತ್ಸವ ಸಂಭ್ರಮ ಸಮಾರಂಭ

ಅರಸು ಅಭಿವೃದ್ಧಿ ನಿಗಮ ಸ್ಥಾಪನೆಗೆ ಸಿಎಂ ಪ್ರಯತ್ನ

ಸಚಿವ ಎಸ್.ಟಿ.ಸೋಮಶೇಖರ್ ಭರವಸೆ

ಮೈಸೂರು, ಆ.21(ಆರ್‌ಕೆಬಿ)- ಅರಸು ಅಭಿವೃದ್ಧಿ ನಿಗಮ ಸ್ಥಾಪನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳು ಪ್ರಯತ್ನದಲ್ಲಿ ತೊಡಗಿದ್ದಾರೆ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಭಾನುವಾರ ಅರಸು ಮಂಡಳಿ ಸಂಘದ ಶತಮಾನೋತ್ಸವ ಸಂಭ್ರಮ ಸಮಾರಂಭದಲ್ಲಿ ಚಾಮುಂಡೇಶ್ವರಿ ದೇವಿಗೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ಜನಾಂಗದ ಶ್ರೇಯೋಭಿವೃದ್ಧಿಗಾಗಿ ಅನುದಾನ ನೀಡುವ ಕುರಿತು ಸಹ ಮುಖ್ಯಮಂತ್ರಿಗಳು ಶಾಸಕ ಎಸ್.ಎ.ರಾಮದಾಸ್ ಸೇರಿದಂತೆ ಎಲ್ಲ ಜನಪ್ರತಿನಿಧಿಗಳು, ಮುಖಂಡರೊಡನೆ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ. ಹೀಗಾಗಿ ಸರ್ಕಾರ ಸದಾ ಅರಸು ಮಂಡಳಿಯ ಜೊತೆಗಿದೆ ಎಂದು ಭರವಸೆ ನೀಡಿದರು.

ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ಜನಮೆಚ್ಚುವ ರೀತಿಯಲ್ಲಿ ಕೆಲಸ ಮಾಡಿದವರು. ಹಾವನೂರು ಆಯೋಗ ರಚಿಸಿ, ಹಿಂದುಳಿದ ವರ್ಗಗಳಿಗೆ ಮೀಸಲಾತಿ ಒದಗಿಸಿದರು. ಮೈಸೂರು ರಾಜ್ಯವನ್ನು ಕರ್ನಾಟಕ ರಾಜ್ಯವಾಗಿ ಪರಿವರ್ತಿಸಿದರು. ಇಂತಹ ಅನೇಕ ಹಿಂದುಳಿದವರ ಪರ ಕಾರ್ಯಕ್ರಮಗಳ ಮೂಲಕ ದೇವರಾಜ ಅರಸು ಅವರು ಹಿಂದುಳಿದ ವರ್ಗಗಳ ನೇತಾರ ಎನಿಸಿಕೊಂಡರು ಎಂದು ಸ್ಮರಿಸಿದರು.

ಮೈಸೂರಿಗೆ ಏನಾದರೂ ಆಗಬೇಕಾದರೆ ಮುಖ್ಯಮಂತ್ರಿಗಳು ಶಾಸಕ ಎಸ್.ಎ.ರಾಮದಾಸ್ ಅವರ ಸಲಹೆ ತೆಗೆದುಕೊಳ್ಳುವುದನ್ನು ಕಾಣುತ್ತಿದ್ದೇವೆ. ಅದೇ ರೀತಿ ಅರಸು ಜನಾಂಗದ ಅಭಿವೃದ್ಧಿ ಕುರಿತಂತೆಯೂ ಮುಖ್ಯಮಂತ್ರಿಗಳು ರಾಮದಾಸ್ ಸಲಹೆ ಪಡೆಯಲಿದ್ದಾರೆ ಎಂದು ತಿಳಿಸಿದರು.



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಅರಸು ಮಂಡಳಿ ಸಂಘದ ಶತಮಾನೋತ್ಸವ ಸಂಭ್ರಮ ಸಮಾರಂಭಕ್ಕೆ ರಾಜವಂಶಸ್ಥೆ ಡಾ.ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಿದರು. ಮಳವಳ್ಳಿ ಮಂಟೇಸ್ವಾಮಿ ಮಠದ ಶ್ರೀ ಶ್ರೀಕಂಠ ಸಿದ್ದಲಿಂಗರಾಜೇ ಅರಸ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಎಲ್.ನಾಗೇಂದ್ರ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಅರಸು ಮಂಡಳಿ ಸಂಘದ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗರಾಜೇ ಅರಸ್ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಕಾರ್ಯಕ್ರಮಕ್ಕೆ ದೀಪ ಬೆಳಗಿಸಿ ಚಾಲನೆ ನೀಡಿದ ರಾಜವಂಶಸ್ಥೆ ಡಾ.ಪ್ರಮೋದಾದೇವಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರಿಗೆ ಅರಸು ಮಂಡಳಿಯಿಂದ ಭಿನ್ನವತ್ತಳೆ ನೀಡಿ ಸನ್ಮಾನಿಸಲಾಯಿತು. ಮಳವಳ್ಳಿ ಮಂಟೇಸ್ವಾಮಿ ಮಠದ ಶ್ರೀ ಶ್ರೀಕಂಠ ಸಿದ್ದಲಿಂಗರಾಜೇ ಅರಸು ಸಾನ್ನಿಧ್ಯ ವಹಿಸಿದ್ದರು.

ಇದೇ ಸಂದರ್ಭದಲ್ಲಿ ಶಾಸಕ ಎಸ್.ಎ.ರಾಮದಾಸ್ ಅವರು ಅರಸು ಮಂಡಳಿ ಸಂಘದ ಶತಮಾನೋತ್ಸವ ಸಂಭ್ರಮದ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ಅರಸು ಮಂಡಳಿ ಸಂಘದ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗರಾಜೇ ಅರಸು ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಕೆಲವೇ ಲಕ್ಷ ಜನಸಂಖ್ಯೆಯುಳ್ಳ ಅರಸು ಜನಾಂಗ ಕಡೆಗಣಿಸಲ್ಪಟ್ಟಿದೆ. ಯಾವುದೇ ನಿಗಮ ಮಂಡಳಿಗಳಲ್ಲೂ ಅರಸು ಜನಾಂಗದ ಯಾರೊಬ್ಬರಿಗೂ ಯಾವುದೇ ಸ್ಥಾನಮಾನ ಇಲ್ಲ. ಹೀಗಾಗಿ ನಮ್ಮ ಸಮುದಾಯವನ್ನು ಸರ್ಕಾರ ಗಣನೆಗೆ ತೆಗೆದುಕೊಳ್ಳಬೇಕು. ನಮ್ಮ ಸಮುದಾಯಕ್ಕೆ ನಿಗಮ ಮಂಡಳಿಗಳಲ್ಲಿ ಸ್ಥಾನಮಾನ ಕಲ್ಪಿಸಬೇಕು. ಜೊತೆಗೆ ಅರಸು ಜನಾಂಗದ ಅಭಿವೃದ್ಧಿ ಮಂಡಳಿ ನಿಗಮ ಸ್ಥಾಪಿಸಿ, 500 ಕೋಟಿ ರೂ. ಅನುದಾನ ಮೀಸಲಿಡಬೇಕು ಎಂದ ಸಚಿವರ ಗಮನ ಸೆಳೆದರು.

ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್, ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್, ನಗರಪಾಲಿಕೆ ಸದಸ್ಯೆ ಸಿ.ವೇದಾವತಿ, ಸಂಘದ ಉಪಾಧ್ಯಕ್ಷ ಡಿ.ಜಯದೇವರಾಜೇ ಅರಸ್, ಗೌರವ ಕಾರ್ಯದರ್ಶಿ ಕೆ.ಸುಮಾ ಅರಸ್, ಪದಾಧಿಕಾರಿಗಳಾದ ಮಲ್ಲರಾಜೇ ಅರಸ್, ಎನ್.ಬಿ.ಶರತ್ ಅರಸ್, ಟಿ.ಎಲ್. ಅರವಿಂದರಾಜೇ ಅರಸ್, ಹೆಚ್.ಡಿ.ನವೀನ್ ರಾಜೇ ಅರಸ್, ಡಿ.ಕೃಷ್ಣ ಅರಸ್, ಹೆಚ್.ಆರ್.ಗೋಪಿ ಅರಸ್, ಎಂ.ಎಸ್. ಮಹೇಶ್‌ರಾಜೇ ಅರಸ್, ಎಂ.ವಿ.ಮಲ್ಲರಾಜೇ ಅರಸ್, ಎನ್.ಕೃಷ್ಣ ಅರಸ್, ಗಣೇಶ್‌ರಾಜೇ ಅರಸ್, ಕೆ.ಮನೋಜ್ ಅರಸ್, ಬಿ.ಪಿ.ನಿರಂಜನರಾಜೇ ಅರಸ್, ಅಂಬಾ ಅರಸ್, ಪ್ರತಿಭಾ ಎಂ.ಅರಸ್ ಇನ್ನಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಯಾಕೆ ಲೇಟ್?
ವಿದ್ಯಾರ್ಥಿ : ಕೋಳಿ ಕೂಗೋದು ಲೇಟ್ ಆಯಿತು.
ಟೀಚರ್ : ನಮ್ಮನೆ ಹತ್ರ ಕೋಳಿ 5 ಗಂಟೆಗೆ ಕೂಗುತ್ತೆ.
ವಿದ್ಯಾರ್ಥಿ : ಆ ಕೋಳಿ ನಮ್ಮನೆ ಹತ್ರ ಬರೋಕೆ 8 ಗಂಟೆ ಆಗುತ್ತೆ.

ಮೈಸೂರು ಮಿತ್ರ
ಸೋಮವಾರ, 22 ಆಗಸ್ಟ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನಾವು ಬೇರೆಯವರಿಗೆ ಸಹಾಯ ಮಾಡಿದಾಗ, ಅದಕ್ಕೆ ಪ್ರತಿಫಲವಾಗಿ ನಮಗೆ ಆಶೀರ್ವಾದಗಳು ಪ್ರಾಪ್ತಿಯಾಗುತ್ತವೇ...!! ಆಶೀರ್ವಾದಗಳು ಕಣ್ಣಿಗೆ ಕಾಣುವುದಿಲ್ಲ, ಆದರೆ ಕೆಟ್ಟ ಸಮಯದಲ್ಲಿ ನಮ್ಮನ್ನು ಕಾಪಾಡುತ್ತವೆ. ಹಾಗಾಗಿ ನಾವು ಮಾಡಿದ ಸಹಾಯ ಎಂದಿಗೂ ವ್ಯರ್ಥವಾಗುವುದಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಯ್ಯ ಎಂದರೆ ಸ್ವರ್ಗ, ಎಲವೋ ಎಂದರೆ ನರಕ.

ನಿಮ್ಮ ಪತ್ರಗಳು

ಶಾಂತಿ ಧೂತ ಭಾರತ

ಮಾನ್ಯರೆ,

ಕಳೆದ ಮೂರು ವರ್ಷಗಳಿಂದ ಕೊರೊನಾ ಮಹಾಮಾರಿಗೆ ಸಿಲುಕಿ ಪ್ರಪಂಚದ ಎಲ್ಲ ಜನರೂ ನಲುಗಿ ಹೋಗಿದ್ದೇವೆ. ಹಣಕಾಸಿನ ಪರಿಸ್ಥಿತಿ ದುಸ್ತರವಾಗಿದೆ. ಕೆಲವು ರಾಷ್ಟ್ರಗಳಲ್ಲಿ ಆಹಾರಕ್ಕಾಗಿ ಹಾಹಾಕಾರ ಶುರುವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಪ್ರಪಂಚದ ಬಹುದೊಡ್ಡ ರಾಷ್ಟ್ರಗಳಾದ ಅಮೇರಿಕ, ರಷ್ಯಾ ಮತ್ತು ಚೀನಾ ದೇಶಗಳಲ್ಲಿ ತಮ್ಮ ಸ್ವಪ್ರತಿಷ್ಠೆಯಿಂದ ಮಹಾಯುದ್ಧದ ಕಾರ್ಮೋಡ ಕವಿಯುತ್ತಿದೆ. ಈ ಮೂವರಲ್ಲಿಯೂ ಒಬ್ಬರಿಗೊಬ್ಬರು ಬುದ್ಧಿ ಹೇಳುವ ಅಥವಾ ಸಂಧಾನಕ್ಕೆ ಬರುವ ಸಾಮರ್ಥ್ಯ ಹೊಂದಿರುವ ಲಕ್ಷಣಗಳು ಕಾಣುತ್ತಿಲ್ಲ. ಅಂತಹ ಬುದ್ಧಿವಂತಿಕೆ ಮತ್ತು ಸಾಮರ್ಥ್ಯ ಇದ್ದರೆ ಅದು ಭಾರತಕ್ಕೆ ಮಾತ್ರ ಸಾಧ್ಯ.

ಪ್ರಪಂಚದ ದೊಡ್ಡಣ್ಣ ಭಾರತ ಮಾತೆಯ ಮಗನನ್ನು ಹುಡುಕಿಕೊಂಡು ಬಂದು ಬೆನ್ನು ತಟ್ಟಿ ಮಾತನಾಡಿಸುವ ಸಂದರ್ಭ ತುಂಬಾ ಆಪ್ಯಾಯಮಾನವಾದದ್ದು ಮತ್ತು ಪ್ರೀತಿ ಪೂರ್ವಕವಾದದ್ದು. ಇಂತಹ ಪ್ರೀತಿಗೆ ನಾವೆಲ್ಲರೂ ಧನ್ಯ.

ಇನ್ನು ರಷ್ಯಾ ಮತ್ತು ಭಾರತದ ನಡುವೆ ವ್ಯಾಪಾರ–ವಹಿವಾಟಿನಲ್ಲಿ ಅವಿನಾಭಾವ ಸಂಬಂಧವಿದೆ. ಅದನ್ನು ಬಳಸಿಕೊಂಡು 'ದೇಶ ಮೊದಲು' ಎಂಬ ಧ್ಯೇಯ ವಾಕ್ಯದೊಡನೆ ನಮಗೆ ಬೇಕಾದ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಪಡೆದು ದೇಶದ ಅಭಿವೃದ್ಧಿಗೆ ನಾಂದಿಯಾಗಿದೆ. ನಮ್ಮ ನೆರೆಯ ರಾಷ್ಟ್ರ ಚೀನಾಕ್ಕೆ ಪ್ರೀತಿ ಇಲ್ಲದಿದ್ದರೂ ಭಯವಂತೂ ಇದ್ದೇ ಇದೆ. ಮೊದಲಿನಂತೆ ಕೆಮ್ಮಲೂ ಸಾಧ್ಯವಾಗುತ್ತಿಲ್ಲ. ಕೆಮ್ಮಿದರೆ ಉಡೀಸ್ ಆಗುತ್ತೇವೆ ಎಂಬ ಭಯ ಕಾಡುತ್ತಿದೆ.

ಈ ಎಲ್ಲಾ ಕಾರಣಗಳಿಂದ ಮೂರೂ ರಾಷ್ಟ್ರಗಳಿಗೂ ಬುದ್ಧಿ ಹೇಳುವ ಸಾಮರ್ಥ್ಯ ಭಾರತಕ್ಕೆ ಇದೆ ಎಂಬುದು ನಾನೂ ಸೇರಿದಂತೆ ಕೆಲ ಭಾರತೀಯರ ಭಾವನೆ. ಈ ವಿಷಯವು ಪ್ರಪಂಚದ ಮಟ್ಟದಲ್ಲಿ ಮಾತುಕತೆಗೆ ಬಂದು ಒಂದು ದೃಢವಾದ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ. ಭಾರತ ಮಾತೆಯ ನೇತೃತ್ವದಲ್ಲಿ ಇಡೀ ವಿಶ್ವವೇ ಒಂದು ಕುಟುಂಬ ಎಂದು ಭಾವಿಸಿ ಶಾಂತಿ ಸಂದೇಶವನ್ನು ಸಾರುವುದರ ಮೂಲಕ ಶಾಂತಿ ಮಂತ್ರವನ್ನು ಜಪಿಸೋಣ.

ಓಂ ಶಾಂತಿ ಶಾಂತಿ ಶಾಂತಿಃ

– ಗಾಯಿತ್ರಿ ರಮೇಶ್, ಕುರ್ಗಳ್ಳಿ, ಮೈಸೂರು.

ಬಿಎಸ್‌ಎನ್‌ಎಲ್‌ಗೆ ಕಾಯಕಲ್ಪ ನೀಡಿ

ಮಾನ್ಯರೆ,

ಭಾರೀ ನಷ್ಟಕ್ಕೆ ಸಿಲುಕಿರುವ ಸಾರ್ವಜನಿಕ ವಲಯದ ದೂರಸಂಪರ್ಕ ಸಂಸ್ಥೆಯಾದ ಬಿಎಸ್‌ಎನ್‌ಎಲ್‌ನ ಭವಿಷ್ಯದ ಸ್ಥಿತಿಗತಿಯ ಬಗ್ಗೆ ಸರ್ಕಾರ ಚಿಂತನೆ ನಡೆಸಬೇಕಿದೆ. ಬಿಎಸ್‌ಎನ್‌ಎಲ್ ನಷ್ಟಕ್ಕೆ ಹಲವಾರು ಕಾರಣಗಳಿವೆ. ಸರ್ಕಾರ 5ಜಿ ಹರಾಜಿಗೆ ಕಾರ್ಯಪ್ರವೃತ್ತವಾಗಿದ್ದರೂ, ಬಿಎಸ್‌ಎನ್‌ಎಲ್ ಇನ್ನೂ 4ಜಿಯನ್ನೇ ಹೊಂದಿಲ್ಲ. ಇದರಿಂದ ಬಿಎಸ್‌ಎನ್‌ಎಲ್ ಚಂದಾದಾರರ ಸಂಖ್ಯೆಯ ಬೆಳವಣಿಗೆ ತೀವ್ರ ಮಂದಗತಿಯಲ್ಲಿದೆ. ನಗರ ಹಾಗೂ ತುಂಬಾ ಕುಗ್ರಾಮ ಅನಿಸುವಂತಹ ಗ್ರಾಮೀಣ ಪ್ರದೇಶಗಳಲ್ಲಿ ಬಿಎಸ್‌ಎನ್‌ಎಲ್‌ನ ನೆಟ್‌ವರ್ಕ್ ತುಂಬಾ ಸಮರ್ಥವಾಗಿದ್ದು, ಈಗಲೂ ಕೂಡ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅಧಿಕಾರಿ ಹಾಗೂ ನೌಕರವರ್ಗ ಸೇರಿದಂತೆ ಲಕ್ಷಾಂತರ ಚಂದಾದಾರರು ಇದನ್ನೇ ಆಶ್ರಯಿಸಿದ್ದಾರೆ. ಹೀಗೆ ಹೆಚ್ಚು ಜನಸ್ನೇಹಿಯಾಗಿದ್ದರೂ ಮಾರುಕಟ್ಟೆಯ ತೀವ್ರ ಸ್ಪರ್ಧೆಯಿಂದ ಹಾಗೂ ಅದರ ದಕ್ಷ ನಿರ್ವಹಣೆಯ ಕೊರತೆಯಿಂದ ನಷ್ಟದತ್ತ ಸಾಗಿದೆ. ಕೇಂದ್ರದಿಂದ ತುರ್ತು ನೆರವು ಇಲ್ಲದೇ ಬಿಎಸ್‌ಎನ್‌ಎಲ್ ನಿರ್ವಹಿಸುವುದು ಕಷ್ಟಸಾಧ್ಯವಾಗಿದೆ. ಕೇಂದ್ರ ಸರ್ಕಾರ ಯಾವುದೇ ಕಾರಣಕ್ಕೂ ಬಿಎಸ್‌ಎನ್‌ಎಲ್ ಅನ್ನು ಮುಚ್ಚಬಾರದು. ಬದಲಾಗಿ ಕಾಯಕಲ್ಪ ನೀಡಿ, 4ಜಿ ಸೇವೆಯನ್ನು ದೇಶದಾದ್ಯಂತ ತುರ್ತಾಗಿ ಆರಂಭಿಸಲಿ.

– ಪವನ್ ಕಲ್ಯಾಣ್, ಮಹಾರಾಜ ಕಾಲೇಜು

ಕನ್ನಡದಲ್ಲಿ ಇಂಜಿನಿಯರಿಂಗ್ ಸ್ವಾಗತಾರ್ಹ

ಮಾನ್ಯರೆ,

ಜಗತ್ತಿನ ಯಾವುದೇ ಮೂಲೆಗೆ ಹೋದರು, ಆ ಪ್ರದೇಶ ಎಷ್ಟೇ ಅದ್ಭುತವಾಗಿರಲಿ, ಸ್ವರ್ಗಸುಖ ಅಲ್ಲಿದ್ದರು ನಮ್ಮ ಊರು ನಮಗೆ ಚನ್ನ. ಉನ್ನತ ವಿದ್ಯಾಭ್ಯಾಸ ಕೇವಲ ಆಂಗ್ಲ ಮಾಧ್ಯಮದಲ್ಲಿ ಲಭ್ಯವಿದ್ದು, ವಿಶೇಷವಾಗಿ ತಾಂತ್ರಿಕ ಶಿಕ್ಷಣ ಆಂಗ್ಲ ಭಾಷೆಯಲ್ಲಿ ಮಾತ್ರ ಕಲಿಯಲು ಸಾಧ್ಯವಿರುವ ಕಾರಣ, ಮಾತೃಭಾಷೆಯಲ್ಲಿ ಇಂಜಿನಿಯರಿಂಗ್ ಶಿಕ್ಷಣ ದೊರೆಯುವಂತಾದರೆ ಹಳ್ಳಿಗಾಡಿನ ಮಕ್ಕಳಿಗೆ ಅನುಕೂಲವಾಗುತ್ತದೆ.

ಪ್ರಸ್ತುತ 2022–23ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರದ ಎಜೆಸಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಬಾಲ್ಕಿಯ ಭೀಮಣ್ಣ ಖಂಡ್ರೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕನ್ನಡ ಮಾಧ್ಯಮದಲ್ಲಿ ಎಂಜಿನಿಯರಿಂಗ್ ಶಿಕ್ಷಣವನ್ನು ನೀಡಲು ಎಐಸಿಟಿಇ (ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ)ಯ ಅನುಮತಿ ಪಡೆದಿರುವುದು ಉತ್ತಮ ಬೆಳವಣಿಗೆಯಾಗಿದೆ.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಪ್ರಾದೇಶಿಕ ಭಾಷೆಯಲ್ಲಿ ಬಿಇ ಕಲಿಯಲು ಅವಕಾಶ ನೀಡುವುದು ಸ್ವಾಗತಾರ್ಹವಾಗಿದ್ದು, ಇದರಿಂದ ಪ್ರಾದೇಶಿಕ ಭಾಷೆಗಳು ಬೆಳೆಯಲು ಉತ್ತಮ ಅವಕಾಶ ಲಭ್ಯವಾಗುತ್ತದೆ. ಕನ್ನಡ ಭಾಷೆ ಜಗತ್ತಿನಲ್ಲಿ ಹರಡಲು ಸಾಧ್ಯವಾಗುತ್ತದೆ. ರಾಜ್ಯದ ಉಳಿದ ಕಾಲೇಜುಗಳು ಸಹ ಕನ್ನಡದಲ್ಲಿ ತಾಂತ್ರಿಕ ಶಿಕ್ಷಣ ಬೋಧಿಸುವಂತಾದರೆ ಕನ್ನಡದ ಪ್ರತಿಭೆಗಳು ಮುಖ್ಯವಾಹಿನಿಗೆ ಬರಲು ಸಹಕಾರಿಯಾಗುತ್ತದೆ.

'(ಬೆಣ್ಣೆ) ಭಾಗ್ಯ'

ಮಾನ್ಯರೆ,


'ಬೆಣ್ಣೆ ನಗರಿ' ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವದಲ್ಲಿ ಮುಖ್ಯಮಂತ್ರಿಯಾಗಿ ಸಿದ್ದು ಜಾರಿಗೆ ತಂದ ಅನ್ನಭಾಗ್ಯ ಇತ್ಯಾದಿ ಭಾಗ್ಯಗಳಿಗೆ ಜಯಕಾರ ಮೊಳಗಿರುವುದು ಸಹಜ.

ಹಿಂದೊಮ್ಮೆ ಸಿದ್ದರಾಮಯ್ಯನವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಕಾರ್ಯಕ್ರಮವೊಂದಕ್ಕೆ ಬಂದಿದ್ದಾಗ ನಾನು ಮಾತನಾಡುತ್ತಾ ವಿನಂತಿಸಿದೆ 'ಅನ್ನಭಾಗ್ಯ ಮುಂತಾದವು ಹಾಗಿರಲಿ, ಜನಕ್ಕೆ ಮೊದಲು ವಿವೇಕ ಭಾಗ್ಯವನ್ನು ಕೊಡಿ' ಎಂದು. ಆದರೆ ಅವರು ಕೊಡಲಿಲ್ಲ.

ಅದನ್ನು ನಾವೆ–ಆಶ್ರಮದ ಸ್ವಾಮೀಜಿಗಳು, ಭಕ್ತರು ಹೋರಾಡಿ ಪಡೆದುಕೊಳ್ಳಬೇಕಾಯಿತು. (ವಿವೇಕ ಸ್ಮಾರಕ ನಿರ್ಮಾಣದ ಶಂಕುಸ್ಥಾಪನೆಯ ಹಿನ್ನೆಲೆಯಲ್ಲಿ ಈ ಮಾತು ಹೇಳುತ್ತಿದ್ದೇನೆ).

ಸಿದ್ದರಾಮಯ್ಯನವರು ಮತ್ತೆ ಮುಖ್ಯಮಂತ್ರಿಯಾದರೆ, ಅನ್ನಭಾಗ್ಯದ ಜೊತೆಗೆ 'ಬೆಣ್ಣೆ ಭಾಗ್ಯ'ವನ್ನೂ ಕೊಡಬಹುದು! (ಯಾರಿಗೆ ಯಾರು ಬೆಣ್ಣೆ ಹಚ್ಚುತ್ತಾರೋ ಕಾದು ನೋಡೋಣ!!

–ಸಿಪಿಕೆ, ಮೈಸೂರು, ದಿನಾಂಕ 21–8–2022.



ಇರುವ ಭಾಗ್ಯವ ನೆನೆದು, ಬಾರೆನೆಂಬುದನು ಬಿಡು...

ಡಿವಿಜಿಯವರ ಜೀವನ ಸಾಕ್ಷಾತ್ಕಾರ

ಡಿವಿಜಿ ಹೆಸರನ್ನು ಕೇಳದವರೂ ಕನ್ನಡನಾಡಿನಲ್ಲಿ ಯಾರಿಲ್ಲ? ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ – ಡಿವಿಜಿ ಕಾವ್ಯನಾಮದಿಂದ ಪ್ರಸಿದ್ಧರಾದವರು. ಕನ್ನಡದ ಆಧುನಿಕ ಸರ್ವಜ್ಞ ಬಿರುದಾಂಕಿತರಾಗಿ, ಕನ್ನಡಿಗರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಡಿವಿಜಿ ಅವರ 'ಮಂಕುತಿಮ್ಮನ ಕಗ್ಗ' ಕೃತಿಯ ಹೆಸರನ್ನು ಕೇಳದವರೇ ಇಲ್ಲ.

'ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟು' ಎಂಬ ನಾಣ್ಣುಡಿಯಂತೆ ಡಿವಿಜಿ ಅವರ ಕೃತಿಗಳಲ್ಲಿ ಅತೀ ಶ್ರೇಷ್ಠವಾದ ಕೃತಿ ಎಂದರೆ ಅದು ಮಂಕುತಿಮ್ಮನ ಕಗ್ಗ ಎಂದರೆ ಬಹುಶಃ ಅತಿಶಯವಾಗದು. 1943ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ ಸುಮಾರು 945 ಕಗ್ಗಗಳಿವೆ. ನಾಲ್ಕು ಸಾಲುಗಳಲ್ಲಿ ಒಂದೊಂದು ಕಗ್ಗಗಳಿದ್ದು ಕೊನೆಯಲ್ಲಿ ಮಂಕುತಿಮ್ಮ ಎಂಬ ಅಂಕಿತನಾಮದೊಂದಿಗೆ ಕಗ್ಗ ಕೊನೆಯಾಗುತ್ತದೆ. ಜೀವನದ ಪ್ರಮುಖವಾದ ಎಲ್ಲಾ ಸಂಗತಿಗಳನ್ನು ತಿಳಿಸಿರುವ ಈ ಕೃತಿಯನ್ನು ಕೆಲವರು ಕನ್ನಡದ ಭಗವದ್ಗೀತೆ ಎಂದು ಕರೆದಿರುವುದರಲ್ಲಿ ಯಾವುದೇ ಬಗೆಯ ಉತ್ಪ್ರೇಕ್ಷೆ ಇಲ್ಲ.

ಬರದಿಹುದರೆಣಿಕೆಯಲಿ ಬಂದಿಹುದ ಮರೆಯದಿರು।
ಗುರುತಿಸೊಳಿತಿರುವುದನು ಕೇಡುಗಳ ನಡುವೆ ॥
ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು ।
ಹರುಷಕದೆ ದಾರಿಯೆಲೊ ಮಂಕುತಿಮ್ಮ॥

ಈ ಪದ್ಯದಲ್ಲಿ ಕೈಗೆ ಸಿಗದೆ ಇರುವುದನ್ನು ಪಡೆಯುವ ವ್ಯರ್ಥ ಪ್ರಯತ್ನದಲ್ಲಿ ಸಿಕ್ಕಿರುವುದನ್ನು ಮರೆಯಬೇಡ. ನಿನ್ನ ಹತ್ತಿರ ಏನಿರುವುದೋ ಅದರಲ್ಲೇ ಸಂತೋಷವನ್ನು ಪಡು. ಅದನ್ನು ಬಿಟ್ಟು ಯಾವುದು ನಿನ್ನಲ್ಲಿ ಏನು ಇಲ್ಲವೋ ಅದನ್ನೇ ನೆನೆದು ನೆನೆದು ದುಃಖಿಸದಿರು. ಇರುವುದರಲ್ಲಿ ಸಂತೋಷವನ್ನು ಪಡು. ಇದೇ ನಿಜವಾದ ಸಂತೋಷಕ್ಕೆ ದಾರಿ ಎಂಬುದನ್ನು ತಿಳಿಸಿದ್ದಾರೆ.

ಎಷ್ಟು ಸತ್ಯವಾದ ಮಾತು ಎಂಬುದನ್ನು ಚಿಂತಿಸಿ ನೋಡಿ. 1943ರಲ್ಲಿ ಬರೆದ ಪದ್ಯವಾದರೂ ಪ್ರಸ್ತುತ ಜೀವನಕ್ಕೂ ಅನ್ವಯವಾಗುವಂತಹದ್ದು. ಅಯ್ಯೋ ನನಗೆ ಆ ಹುಡುಗಿ/ ಹುಡುಗ ಸಿಗಬೇಕಿತ್ತು, ನಾನು ಅವಳನ್ನು / ಅವನನ್ನು ಮದುವೆಯಾಗಿದ್ರೆ ಜೀವನ ಸುಂದರವಾಗಿ ಇರುತ್ತಿತ್ತು. ನನಗೆ ಸರ್ಕಾರಿ ಕೆಲಸ ಸಿಕ್ಕಿದ್ರೆ ಆರಾಮಾಗಿ ಇರಬಹುದಿತ್ತು, ನನಗೆ ಇಪ್ಪತ್ತು ಸಾವಿರದ ಕೆಲಸ ಸಿಕ್ಕಿದ್ರೆ ಅಷ್ಟೇ ಸಾಕಿತ್ತು , ನನಗೆ ಒಂದೊಳ್ಳೆ ಮನೆ ಇದ್ರೆ ಸಾಕು, ಆಸ್ತಿ ಇದ್ರೆ ಸಾಕು–ಹೀಗೆ ಮನುಷ್ಯನ ಬಯಕೆಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆಯೇ ವಿನಹಃ ಯಾರಿಗೂ ಕೂಡ ತಮ್ಮ ಜೀವನ ರುಚಿಸುವುದಿಲ್ಲ. ಬೇಕಿದ್ರೆ ಒಬ್ಬ ಶ್ರೀಮಂತನನ್ನು ಕೇಳಿ ಏನಿದ್ರೇನು ನಿದ್ದೆ ಇಲ್ಲ , ತೃಪ್ತಿ ಇಲ್ಲ ಎಂದೇ ಹೇಳುತ್ತಾನೆ. ಪ್ರತಿ ಯೊಬ್ಬರೂ ಕೂಡ ಯಾವುದು ತಮಗೆ ಸಿಗುವುದಿಲ್ಲವೋ ಅದರ ಬಗ್ಗೆಯೇ ಚಿಂತಿಸಿ ಚಿಂತಿಸಿ ಕಾಲ ಕಳೆಯುವರೇ ವಿನಹಃ ತಮಗೆ ಸಿಕ್ಕಿರುವ ಜೀವನವನ್ನು ಸಂತಸದಿಂದ ಅನುಭವಿಸುವುದನ್ನು ಒಂದು ಕ್ಷಣವೂ ಚಿಂತಿಸುವುದಿಲ್ಲ. ಭೂತ / ಭವಿಷ್ಯ ಕಾಲದಲ್ಲೇ ಕಾಲ ಕಳೆಯುವರೇ ವಿನಹ ವರ್ತಮಾನವನ್ನು / ಇರುವ ವಾಸ್ತವವನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ನೋಡಿ ಡಿವಿಜಿ ಅವರು ಈ ವಾಸ್ತವತೆಯನ್ನು ಅಂದೇ ನಾಲ್ಕೇ ಸಾಲುಗಳಲ್ಲಿ ಅಡಗಿಸಿ ಹೇಳಿದ್ದಾರೆ.

ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ।
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು॥
ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು।
ಪದ ಕುಸಿಯೆ ನೆಲವಿಹುದು ಮಂಕುತಿಮ್ಮ॥

ಜೀವನವೇ ಒಂದು ಜಟಕಾಬಂಡಿಯ ಹಾಗೆ. ಆ ಬಂಡಿಗೆ ಕಟ್ಟಿರುವ ಕುದುರೆ ಅಂದರೆ ಅದು ಮನುಷ್ಯ. ಆ ವಿಧಿಯು ಹೇಳಿದಂತೆ ನಡೆಯುವವರು ನಾವು. ಮದುವೆಗೋ ಅಂದರೆ ಸಂತೋಷವೋ, ಮಸಣಕೋ ಅಂದರೆ ದುಃಖಕ್ಕೋ ಎಲ್ಲದಕ್ಕೂ ಕಾರಣ ಆ ವಿಧಿ. ನಾವು ಇಲ್ಲಿ ನೆಪ ಮಾತ್ರ. ಅಂದರೆ ನಮ್ಮ ಕೆಲಸಗಳನ್ನು ಪ್ರಾಮಾಣಿಕವಾಗಿ ನಾವು ಮಾಡುತ್ತಾ ಹೋಗಬೇಕು. ಪ್ರತಿಫಲವೆಲ್ಲಾ ಆ ವಿಧಿಯ ಕೈಯಲ್ಲಿದೆ. ಅಂದರೆ ನಿನ್ನ ಕೆಲಸವನ್ನು ನೀನು ಶ್ರದ್ಧೆಯಿಂದ ಮಾಡು. ನಿನಗೆ ಸಿಗಬೇಕಿರುವುದನ್ನು ಆ ಕಾಣದ ವಿಧಿ ಕೊಡುತ್ತದೆ ಎಂದು ಹೇಳಿದ್ದಾರೆ. ಅಯ್ಯೋ ನನ್ನ ಹಣೇಬರಹ ಸರಿಯಿಲ್ಲ. ನನ್ನ ಕಷ್ಟ ಯಾವ ಶತ್ರುವಿಗೂ ಬೇಡ. ಹೀಗೆ ಜೀವನದ ಬಗ್ಗೆ ಅಸಹಾಯಕತೆಗಳನ್ನು ದೂರುವ ಬದಲು ನಿನ್ನಲ್ಲಿ ನೀನು ನಂಬಿಕೆ ಇಡು ಎಲ್ಲವೂ ಪೂರ್ವ ನಿರ್ಧಾರಿತವಾಗಿರುತ್ತದೆ ಎಂಬುದನ್ನು ಈ ಪದ್ಯ ತಿಳಿಸುತ್ತದೆ.

ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು।
ದೊರೆತುದು ಹಸಾದವೆಂದುಣ್ಣು ಗೊಣಗಿಡದೆ॥
ಧರಿಸು ಲೋಕದ ಭಾರವ ಪರಮಾರ್ಥವನು ಬಿಡದೆ
ಹೊರಡು ಕರೆ ಬರಲ್ ಅಳದೆ ಮಂಕುತಿಮ್ಮ॥

ಬಹುಶಃ ಇಡೀ ವಿಶ್ವದಲ್ಲಿ ಯಾವಾಗಲೂ ಚಿಂತೆಯಲ್ಲಿ ಕಾಲ ಕಳೆಯುವ ಪ್ರಾಣಿ ಎಂದರೆ ಅದು ಮನುಷ್ಯ. ಜೀವನ ನಡೆಸಲು ಒಂದು ಉದ್ಯೋಗ ಬೇಕು. ಆದರೆ ಸಿಕ್ಕ ಉದ್ಯೋಗದಲ್ಲಿ ಸಂತೃಪ್ತಿ ಇಲ್ಲದೇ ಅಯ್ಯೋ ಇದು ಒಂದು ಕೆಲಸನಾ, ಇದನ್ನು ನಾನು ಮಾಡಬೇಕಾ ಅಂತ ಗೊಣಗಿಕೊಂಡು ಕೆಲಸ ಮಾಡುವವರನ್ನು ಎಚ್ಚರಿಸುವಂತಿದೆ ಈ ಕಗ್ಗ. ಇಂದಿನ ಬಹುಪಾಲು ಜನರಲ್ಲಿ ಈ ಮನೋಭಾವ ಇದೆ. ಖಾಸಗಿ ಉದ್ಯೋಗದಲ್ಲಿ ಇದ್ರೆ ಸರ್ಕಾರಿ ಕೆಲಸ ಬೇಕೆಂದು ಸರ್ಕಾರಿ ಕೆಲಸದಲ್ಲಿ ಇದ್ದರೆ ಬೇರೆ ವಿಭಾಗದಲ್ಲಿ ಇರಬೇಕೆಂದು ಪರಿತಪಿಸುವ ಜನರೇ ಹೆಚ್ಚಾಗಿ ಕಂಡುಬರುತ್ತಾರೆ.

ಕಸ ಗುಡಿಸುವ ಕೆಲಸವಾದರೂ ಸರಿ ಅದನ್ನು ಶ್ರದ್ಧೆಯಿಂದ ಮಾಡಬೇಕು. ಯಾವ ಕೆಲಸದಲ್ಲೂ ಅದು ಹೆಚ್ಚು , ಇದು ಕಡಿಮೆ ಎಂಬುದೇನು ಇಲ್ಲ ಕೆಲವೊಮ್ಮೆ ನಮ್ಮ ಸಾಮರ್ಥ್ಯಕ್ಕೆ ತಕ್ಕ ಕೆಲಸ ಸಿಗದೆ ಇರಬಹುದು, ಅಂದ ಮಾತ್ರಕ್ಕೆ ಸಿಕ್ಕಿರುವ ಕೆಲಸವನ್ನು ಕಡೆಗಣಿಸಬಾರದು. ಬೆಟ್ಟ ಹತ್ತಬೇಕು ಅಂದರೂ ಕೂಡ ಮೊದಲಿಗೆ ಸಣ್ಣ ಸಣ್ಣ ಮೆಟ್ಟಿಲುಗಳನ್ನು ಹತ್ತಿಯೇ ಮೇಲೇರಲು ಸಾಧ್ಯ. ಅದನ್ನೇ ಗುಂಡಪ್ಪ ಅವರು ಈ ರೀತಿ ಹೇಳಿದ್ದಾರೆ. ಕೆಲಸ ಯಾವುದಾದರೂ ಸರಿ ಮನಸ್ಸಿಟ್ಟು ಮಾಡು, ಸಿಕ್ಕಿರುವುದನ್ನು ಪ್ರಸಾದ ಎಂದು ಸ್ವೀಕರಿಸು, ಪ್ರಪಂಚದ ವಾಸ್ತವತೆಗಳನ್ನು ಅರ್ಥ ಮಾಡಿಕೊಂಡು ಬದುಕು. ಹುಟ್ಟು ಉಚಿತ, ಸಾವು ಖಚಿತ ಎಂಬ ಸಾರ್ವಕಾಲಿಕ ಸತ್ಯವನ್ನು ನಂಬು. ಕಾಲನ(ಯಮ) ಕರೆ ಬಂದಾಗ ಅಳದೇ ಹೊರಡು ಎನ್ನುವ ಮೂಲಕ ಇರುವುದರಲ್ಲೇ ಸಂತೋಷವನ್ನು ಪಡೆಯುತ್ತಾ ವಾಸ್ತವತೆಯನ್ನು ಅರ್ಥಮಾಡಿಕೊಂಡು ಜೀವನ ನಡೆಸು ಎಂದು ತಿಳಿಸಿದ್ದಾರೆ.

ದಿವಸದಿಂ ದಿವಸಕ್ಕೆ, ನಿಮಿಷದಿಂ ನಿಮಿಷಕ್ಕೆ।
ಭವಿಷ್ಯವ ಚಿಂತಿಸದೆ ಬದುಕ ನೂಕುತಿರು॥
ವಿವರಗಳ ಜೋಡಿಸುವ ಯಜಮಾನ ಬೇರಿಹನು।
ಸವೆಸು ನೀಂ ಜನುಮವನು ಮಂಕುತಿಮ್ಮ॥

ಈ ಕಗ್ಗದಲ್ಲಿ ಡಿವಿಜಿ ಅವರು ಜನರಿಗೆ ಬುದ್ಧಿವಾದವನ್ನು ಹೇಳಿದ್ದಾರೆ. ದಿನದಿಂದ ದಿನಕ್ಕೆ ,ನಿಮಿಷದಿಂದ ನಿಮಿಷಕ್ಕೆ ಭವಿಷ್ಯವನ್ನು ಚಿಂತಿಸದೇ ಬದುಕುವುದನ್ನು ಕಲಿ. ನೀನು ಏನಾಗಬೇಕೆಂದು ವಿವರಗಳನ್ನು ಜೋಡಿಸುವ ಯಜಮಾನನೊಬ್ಬ ಇರುವನು. ನೀನು ನಿನ್ನ ಜೀವನವನ್ನು ನಡೆಸು. ಅಂದರೆ, ನಮಗೆ ಕಷ್ಟಗಳು ತಪ್ಪಿದ್ದಲ್ಲ, ನಮ್ಮ ಜೀವನ ಯಾವಾಗ ಸರಿಯಾಗುತ್ತೋ ಎಂದು ಬದುಕಿನ ಸುಮಧುರ ಕ್ಷಣಗಳನ್ನು ಮರೆತು ಬಾಳುವ ಜನರಿಗೆ ಕಿವಿಮಾತು ಹೇಳಿದಂತಿದೆ ಈ ಕಗ್ಗ. ನಿನ್ನ ಜೀವನವನ್ನು ನೀನು ನಡೆಸು ಮುಂದೇನಾಗುತ್ತದೆ ಎಂದು ಚಿಂತಿಸಿ ಅದರ ಬಗ್ಗೆ ಪರಿತಪಿಸುವ ಅಗತ್ಯ ನಿನಗಿಲ್ಲ. ನಿನ್ನ ಭವಿಷ್ಯ ಚೆನ್ನಾಗಿರಬೇಕು ಎಂದಾದರೆ ಭವಿಷ್ಯದ ಬಗ್ಗೆ ಕನಸು ಕಾಣುವ ಬದಲು ಪ್ರಾಮಾಣಿಕತೆಯಿಂದ ವರ್ತಮಾನ ವನ್ನು ನಡೆಸು. ನಿನಗೇನು ಸಿಗಬೇಕೋ ಅದು ಸಿಕ್ಕೇ ಸಿಗುತ್ತದೆ ಎಂದು ತಿಳಿಸುತ್ತದೆ. ನಿಜ ಅಲ್ವಾ, ಭವಿಷ್ಯದ ಬಗ್ಗೆ ಕನಸು ಕಾಣುತ್ತಾ ವರ್ತಮಾನದ ಕ್ಷಣಗಳನ್ನು ಮರೆತರೆ ಅದು ಎಷ್ಟು ಸರಿ? ನಮ್ಮ ಕಾಯಕಗಳನ್ನು ನಾವು ಮಾಡುತ್ತಾ ಸಾಗಿದರೆ ಉತ್ತಮ ಬದುಕು ನಮಗಾಗಿ ಕಾದಿರುತ್ತದೆ.

ಅಕ್ಕಿಂಯೊಳನ್ನವನು ಮೊದಲಾರು ಕಂಡವನು॥
ಅಕ್ಕರದ ಬರಹಕ್ಕೆ ಮೊದಲಿಗನದಾರು॥
ಲೆಕ್ಕವಿರಿಸಿಲ್ಲ ಜಗ ತನ್ನಾದಿಬಂಧುಗಳ।
ದಕ್ಕುವುದೇ ನಿನಗೆ ಜಸ ಮಂಕುತಿಮ್ಮ॥

ಅಕ್ಕಿ ಬೇಯಿಸಿದರೆ ಅನ್ನ ತಯಾರಾಗುತ್ತದೆ ಎಂಬುದು ಎಲ್ಲರಿಗೂ ತಿಳಿದಿರುವ ಸತ್ಯ, ಆದರೆ ಅದನ್ನು ಮೊದಲು ಕಂಡು ಹಿಡಿದವರು ಯಾರು, ಅಕ್ಷರಗಳನ್ನು ಹೀಗೆಯೇ ಬರೆಯಬೇಕು ಎಂಬುದು ನಿಯಮ. ಸರಿ, ಆಗಿದ್ರೆ ಅಕ್ಷರಗಳನ್ನು ಕಂಡುಹಿಡಿದವರು ಯಾರು. ಅಂದರೆ ಬರಿ ಯಶಸ್ಸು , ಕೀರ್ತಿ, ಪ್ರಸಿದ್ಧಿ ಇವುಗಳನ್ನೇ ಬೆನ್ನಟ್ಟಿ ಹೋಗುವವರಿಗೆ ಯಾವುದೂ ಕೂಡ ಶಾಶ್ವತವಲ್ಲ, ಎಲ್ಲಾವನ್ನೂ ಮರೆಯುವ ಕಾಲ ಬಂದೇ ಬರುತ್ತದೆ. ನನಗೆ ಯಶಸ್ಸು ಸಿಕ್ಕಿದೆ, ನಾನು ಪ್ರಸಿದ್ಧನಾದೆ ಎಂದು ಜಂಭಪಡಬೇಡ ನಿನ್ನಂತಹ ಎಷ್ಟೋ ಜನರು ಈ ತರಹ ಇದ್ದು ಹೋಗಿದ್ದಾರೆ. ಜಗತ್ತು ಯಾರನ್ನೂ ಕೂಡ ಎಲ್ಲಾ ಕಾಲದಲ್ಲೂ ನೆನಪಲ್ಲಿಟ್ಟುಕೊಂಡಿಲ್ಲ ಎನ್ನುವ ಮೂಲಕ ಕೀರ್ತಿ ಎಂಬುದು ಶಾಶ್ವತವಲ್ಲ ಎಂಬ ಸತ್ಯವನ್ನು ಹೇಳಿದ್ದಾರೆ.


ಕೊಳದ ಜಲ ನಿನ್ನ ಮನ; ಲೋಗರದರೊಳಗಿಳಿಯೆ।
ತಳದ ಕಸ ತೇಲುತ್ತ ಬಗ್ಗಡವದಹುದು॥
ಕಲಕಲದ್ದದೆ ಕೊಂಚ ಬಿಟ್ಟಿದ್ದೊಡದು ಮರಳಿ।
ತಿಳಿಯಹುದು ಶಾಂತಿಯಲಿ ಮಂಕುತಿಮ್ಮ॥

ನಿನ್ನ ಮನಸ್ಸು ಕೊಳದಲ್ಲಿರುವ ನೀರಿನಂತೆ. ನೀರು ಎಂದ ಮೇಲೆ ಅದರಲ್ಲಿ ಕಸ, ಕಡ್ಡಿಗಳು ತೇಲುತ್ತಾ ಬರುತ್ತದೆ. ಅದನ್ನು ಸರಿಪಡಿಸುವ ಕೆಲಸವನ್ನು ಮಾಡದೇ ಬಿಟ್ಟರೆ ಸ್ವಲ್ಪ ಸಮಯದ ನಂತರ ಅವೆಲ್ಲಾ ಮರೆಯಾಗಿ ತಿಳಿಯಾದ ನೀರು ಸಿಗುತ್ತದೆ. ಅಂದರೆ ಮನಸ್ಸೆಂಬ ಕೊಳದಲ್ಲಿ ಕೆಲವೊಮ್ಮೆ ಬೇಡದ ವಿಚಾರಗಳು, ತಾಳ್ಮೆಗೆಡುವಂತಹ ಪರಿಸ್ಥಿತಿಗಳು ಎದುರಾದಾಗ ಅಥವಾ ಕಷ್ಟಗಳು, ಸಮಸ್ಯೆಗಳು ಎದುರಾದಾಗ ನಿಧಾನವಾಗಿ ತಾಳ್ಮೆಯಿಂದ ವರ್ತಿಸಿದರೆ ಉತ್ತಮವಾದ ರೀತಿಯಲ್ಲಿ ಬದುಕಲು ಸಾಧ್ಯ ಎಂಬುದನ್ನು ಈ ಕಗ್ಗ ತಿಳಿಸುತ್ತದೆ. ಇಂದಿನ ಜೀವನದಲ್ಲಿ ಈ ಪದ್ಯದ ಮಹತ್ವ ತುಂಬಾ ಪ್ರಮುಖವಾದುದಾಗಿದೆ. ಮಂಕುತಿಮ್ಮನ ಕಗ್ಗ ಕೃತಿ ಮೇಲೆ ತಿಳಿಸಿದ ಹಾಗೇ ಸಮಾಜಕ್ಕೆ, ಜನರಿಗೆ ಹಿತೋಪದೇಶವನ್ನು ತಿಳಿಸುವಂತಹ ಪದ್ಯಗಳನ್ನು ಒಳಗೊಂಡಿದೆ. ಇಂತಹ ಕೃತಿಗಳನ್ನು ಪ್ರಸ್ತುತ ಯುವ ಸಮುದಾಯಕ್ಕೆ ಓದುವಂತೆ ಪ್ರೇರೇಪಣೆ ನೀಡಬೇಕು.

–ರಾಘವೇಂದ್ರ ಸಿ.ಎಸ್.
ಸಹಾಯಕ ಪ್ರಾಧ್ಯಾಪಕರು
ಹಿಂದೂಸ್ಥಾನ್ ಕಾಲೇಜು, ಮೈಸೂರು

ಸರ್ಕಾರಿ ಸೌಲಭ್ಯಕ್ಕೆ ಅರಸು ಸಮುದಾಯ ಒಗ್ಗೂಡುವುದು ಅತ್ಯಗತ್ಯ

ರಾಜವಂಶಸ್ಥ ಯದುವೀರ್ ಕೃಷ್ಣ ದತ್ತ ಚಾಮರಾಜ ಒಡೆಯರ್ ಅಭಿಮತ



ಮೈಸೂರು, ಆ.21(ಎಸ್‌ಪಿಎನ್)– ಸರ್ಕಾರದ ಸವಲತ್ತು ಪಡೆಯಬೇಕಾದರೆ, ರಾಜ್ಯದ ವಿವಿಧೆಡೆ ಚದುರಿ ಹೋಗಿರುವ ಅರಸು ಸಮುದಾಯ ಒಗ್ಗೂಡಬೇಕು ಎಂದು ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರು ಕರ್ನಾಟಕ ಮುಕ್ತ ವಿವಿ ಆವರಣದ ಘಟಿಕೋತ್ಸವ ಭವನದಲ್ಲಿ ಅರಸು ಮಂಡಳಿ ಸಂಘದ ವತಿಯಿಂದ ಆಯೋಜಿಸಿದ್ದ ಸಂಘದ ಶತಮಾನೋತ್ಸವ ಸಂಭ್ರಮದ ಮುಕ್ತಾಯ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ರಾಜರ ಆಳ್ವಿಕೆಯಲ್ಲಿ ಸ್ಥಾಪಿಸಿದ್ದ ವಸತಿ ನಿಲಯ ಹಾಗೂ ಶೈಕ್ಷಣಿಕ ಸಂಸ್ಥೆಗಳನ್ನು ಸರ್ಕಾರ ವಶಪಡಿಸಿಕೊಂಡಿದೆ. ಇದೀಗ ಸಮುದಾಯ ವಿದ್ಯಾರ್ಥಿಗಳಿಗೆ ನೆರವಾಗಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಸರ್ಕಾರದ ವತಿಯಿಂದ ಶೈಕ್ಷಣಿಕ ಮತ್ತು ಆರ್ಥಿಕ ಸೌಲಭ್ಯ ಪಡೆಯಬೇಕಾದರೆ, ಎಲ್ಲರೂ ಒಗ್ಗೂಡಿದರೆ ಮಾತ್ರ ಸಾಧ್ಯ ಎಂದರು. ಈ ವೇಳೆ ಮಳವಳ್ಳಿ ಮಂಟೇಸ್ವಾಮಿ ಮಠದ ಮಠಾಧಿಪತಿ ಶ್ರೀ ಎಂ.ಎಲ್.ವರ್ಚಸ್ವಿ ಶ್ರೀಕಂಠ ಸಿದ್ದಲಿಂಗರಾಜೇ ಅರಸ್, ಪೀಠಾಧಿಪತಿ ಶ್ರೀ ಜ್ಞಾನಾನಂದ ಚನ್ನರಾಜೇ ಅರಸ್, ಭರತ್ ಅರಸ್, ಕುರುಬನ ಕಟ್ಟೆ ಕ್ಷೇತ್ರದ ಶ್ರೀ ಬಿ.ಎಸ್.ವರುಣ್ ಲಿಂಗರಾಜೇ ಅರಸ್, ತಮಿಳುನಾಡು ದ್ರೋಣಕೆರೆ ಮಠದ ಶ್ರೀ ಸುಬ್ರಹ್ಮಣ್ಯ ರಾಜೇಂದ್ರ ಸ್ವಾಮೀಜಿ, ದ್ರೋಣಗಿರಿ ಮಠದ ಶ್ರೀ ಅಶೋಕ ರಾಜೇಂದ್ರ ಸ್ವಾಮೀಜಿ, ಅರಸು ಮಂಡಲಿ ಸಂಘದ ಶತಮಾನೋತ್ಸವ ಸಮಿತಿಯ ಎಂ.ಎ.ಶ್ರೀಕಾಂತರಾಜೇ ಅರಸ್, ಡಿ.ಜಯದೇವರಾಜೇ ಅರಸ್(ಪ್ರಕಾಶ್), ಕೆ.ಸುಮಾ ಅರಸ್, ಸಂಘದ ಅಧ್ಯಕ್ಷ ಹೆಚ್‌ಎಂಟಿ ಲಿಂಗರಾಜೇ ಅರಸ್, ಸಹ ಕಾರ್ಯದರ್ಶಿ ಎನ್.ಬಿ. ಶರತ್ ಅರಸ್, ಖಜಾಂಚಿ ಮಲ್ಲರಾಜೇ ಅರಸ್(ರಮೇಶ್), ಟಿ.ಎಲ್.ಅರವಿಂದರಾಜೇ ಅರಸ್ (ಅಜಿತ್), ನಿರ್ದೇಶಕರಾದ ಹೆಚ್.ಡಿ. ನವೀನ್ ರಾಜೇ ಅರಸ್, ಡಿ.ಕೃಷ್ಣಅರಸ್, ಹೆಚ್.ಆರ್.ಗೋಪಿ ಅರಸ್, ಎಂ.ಎಸ್. ಮಹೇಶ್ ರಾಜೇ ಅರಸ್(ಸುರೇಶ್), ಎನ್.ಕೃಷ್ಣಅರಸ್, ಗಣೇಶ್ ರಾಜೇ ಅರಸ್, ಕೆ.ಮನೋಜ್ ಅರಸ್, ಬಿ.ಪಿ.ನಿರಂಜನ್ ರಾಜೇ ಅರಸ್, ಅಂಬಾಅರಸ್, ಪ್ರತಿಭಾ ಎಂ.ಅರಸ್ ಉಪಸ್ಥಿತರಿದ್ದರು.

ಕೆಪಿಟಿಸಿಎಲ್ ಕಿರಿಯ ಸಹಾಯಕ ಹುದ್ದೆ ಪರೀಕ್ಷೆ ಪೇಪರ್ ಲೀಕ್ ಮಾಡಿದ ತಂದೆ–ಮಗ

ಗದಗ, ಆ.21– ಕಲಬುರಗಿಯಲ್ಲಿ ಪಿಎಸ್‌ಐ ನೇಮಕಾತಿಯಲ್ಲಿ ಭಾರಿ ಅಕ್ರಮ ನಡೆದಿತ್ತು. ಅದೇ ರೀತಿ ಈಗ ರಾಜ್ಯದಲ್ಲಿ ಮತ್ತೊಂದು ಭಾರೀ ಪರೀಕ್ಷಾ ಅಕ್ರಮ ಬಯಲಾಗಿದೆ. ಪಿಎಸ್‌ಐ ಪರೀಕ್ಷೆಯ ಹಗರಣ ಮಾಸುವ ಮುನ್ನವೇ ಮತ್ತೊಂದು ಹಗರಣ ಬೆಳಕಿಗೆ ಬಂದಿದೆ. ಕೆಪಿಟಿಸಿಎಲ್ ಕಿರಿಯ ಸಹಾಯಕ ಹುದ್ದೆಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನೇತೃತ್ವದಲ್ಲಿ ನಡೆದಿದ್ದ ಪರೀಕ್ಷೆ ಪತ್ರಿಕೆ ಲೀಕ್ ಆಗಿದೆ. ಗದಗದ ಮುನ್ಸಿಪಲ್ ಕಾಲೇಜ್‌ನಲ್ಲಿ ಕೆಪಿಟಿಸಿಎಲ್ ಕಿರಿಯ ಸಹಾಯಕ ಹುದ್ದೆಗಾಗಿ ಪರೀಕ್ಷೆ ನಡೆದಿತ್ತು. ಆದರೆ ಗದಗದಲ್ಲಿಯೇ ಈ ಪರೀಕ್ಷಾ ಪತ್ರಿಕೆ ಲೀಕ್ ಆಗಿದೆ. ತಂದೆ–ಮಗ ಸೇರಿಕೊಂಡು ಪ್ರಶ್ನೆ ಪತ್ರಿಕೆ ಲೀಕ್ ಮಾಡಿದ್ದಾರೆ ಎನ್ನಲಾಗುತ್ತಿದೆ. ಮುನಿಸಿಪಲ್ ಕಾಲೇಜಿನ ಉಪ ಪ್ರಾಚಾರ್ಯ ಮಾರುತಿ ಸೋನಾವನೆ ಮತ್ತು ಅವರ ಮಗ ಸಮೀತ ಕುಮಾರ್ ಪ್ರಶ್ನೆ ಪತ್ರಿಕೆ ಲೀಕ್ ಮಾಡಿದ್ದಾರೆ.

ಮಗ ಸಮೀತಕುಮಾರ್ ಪತ್ರಕರ್ತನ ಸೋಗಿನಲ್ಲಿ ಪರೀಕ್ಷಾ ಕೇಂದ್ರಕ್ಕೆ ಎಂಟ್ರಿ ಕೊಟ್ಟು ಮೊಬೈಲ್ ಮೂಲಕ ಪ್ರಶ್ನೆ ಪತ್ರಿಕೆ ಸೆರೆ ಹಿಡಿದಿದ್ದು, ರಾಜ್ಯದ ಬೇರೆ ಬೇರೆ ಕಡೆ ಪ್ರಶ್ನೆ ಪತ್ರಿಕೆ ಕಳಿಸಿದ್ದಾನೆ ಎಂಬ ಶಂಕೆ ವ್ಯಕ್ತವಾಗಿದೆ. ಸದ್ಯ ಬೆಳಗಾವಿ ಸೈಬರ್ ಕ್ರೈಮ್ ಪೊಲೀಸರು ಮೊಬೈಲ್‌ಗಾಗಿ ತೀವ್ರ ಶೋಧ ನಡೆಸುತ್ತಿದ್ದಾರೆ. ತಂದೆ–ಮಗನನ್ನು ಬಂಧಿಸಿ, ತೀವ್ರ ವಿಚಾರಣೆ ನಡೆಸಲಾಗುತ್ತಿದೆ. 2022, ಆಗಸ್ಟ್ 7ರ ಭಾನುವಾರದಂದು ಗದಗ–ಬೆಟಗೇರಿ ಅವಳಿ ನಗರದಲ್ಲಿ 21 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು. ಆ ಪೈಕಿ ಮುನ್ಸಿಪಲ್ ಕಾಲೇಜ್‌ನಲ್ಲಿ ಪ್ರಶ್ನೆ ಪತ್ರಿಕೆ ಲೀಕ್ ಆಗಿದೆ. ಪ್ರಶ್ನೆ ಪತ್ರಿಕೆ ಲಿಂಕ್ ಆಗಿರುವ ಜಾಡು ಹಿಡಿದುಕೊಂಡು ಬಂದ ಬೆಳಗಾವಿ ಪೊಲೀಸರು ಭಾರಿ ಶೋಧ ನಡೆಸುತ್ತಿದ್ದಾರೆ

ರಾಜ್ಯದಲ್ಲಿ ಭಾನುವಾರ 720 ಮಂದಿಗೆ ಕೊರೊನಾ

ಬೆಂಗಳೂರು, ಆ.21– ರಾಜ್ಯದಲ್ಲಿ ಕೊರೊನಾ ಪಾಸಿಟಿವ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಳಿತ ಮುಂದುವರೆದಿದ್ದು, ಕಳೆದ 24 ಗಂಟೆಯಲ್ಲಿ 720 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 40,40,831ಕ್ಕೆ ಏರಿಕೆಯಾಗಿದೆ. ಇನ್ನು ರಾಜ್ಯದಲ್ಲಿ ಮಹಾಮಾರಿ ಕೊರೊನಾದಿಂದ ಇಂದು ಇಬ್ಬರು ಮೃತಪಟ್ಟಿದ್ದು, ಇದರೊಂದಿಗೆ ಸಾವಿನ ಸಂಖ್ಯೆ 40, 168ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಬೆಂಗಳೂರಿನಲ್ಲಿ ಇಂದು 273 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 18,58,017ಕ್ಕೆ ಏರಿಕೆಯಾಗಿದೆ. ಆದರೆ ಇಂದು ರಾಜಧಾನಿಯಲ್ಲಿ ಕೊರೊನಾದಿಂದ ಯಾವುದೇ ಸಾವು ವರದಿಯಾಗಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೇಳಿದೆ.

ಒಂದನೇ ಪುಟದಿಂದ

ಕೋವಿಡ್ ಸೋಂಕಿತರಿಗೆ ಹೆಚ್ಚುವರಿ ಬಿಲ್

ಜೊತೆಗೆ, ಕೋವಿಡ್ ರೋಗಿಗಳಿಂದ 18.87 ಕೋಟಿ ಹೆಚ್ಚುವರಿ ಹಣ ವಸೂಲಿ ಮಾಡಿದ ರಾಜ್ಯದ 577 ಖಾಸಗಿ ಆಸ್ಪತ್ರೆಗಳ ವಿರುದ್ಧ ರಾಜ್ಯ ಆರೋಗ್ಯ ಇಲಾಖೆಯು ದೂರುಗಳನ್ನು ಸ್ವೀಕರಿಸಿದೆ. ಹೀಗಾಗಿ ಈ ಆಸ್ಪತ್ರೆಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದರು. ಈವರೆಗೆ SAST ಆ ಆಸ್ಪತ್ರೆಗಳಿಂದ 1,58,22,359 ರೂಗಳನ್ನು ವಸೂಲಿ ಮಾಡಲಾಗಿದ್ದು, ಅದನ್ನು 403 ರೋಗಿಗಳಿಗೆ ಮರುಪಾವತಿ ಮಾಡಲಾಗಿದೆ. ಉಳಿದ ಮೊತ್ತವನ್ನು ಇತರ ರೋಗಿಗಳಿಗೆ ಮರುಪಾವತಿ ಮಾಡುವ ಪ್ರಕ್ರಿಯೆಯಲ್ಲಿದ್ದೇವೆ. ಹಾಗೆಯೇ ನಾವು ಕೆಲವು ಖಾಸಗಿ ಆಸ್ಪತ್ರೆಗಳಿಗೆ ABARK ಅಡಿಯಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲು ಬಿಡುಗಡೆ ಮಾಡಬೇಕಾದ ಕೆಲವು ಹಣವನ್ನು ಹಿಡಿದಿಟ್ಟುಕೊಂಡಿದ್ದೇವೆ. ಎಂದು ಹೇಳಿದ್ದಾರೆ. ABARK ಅಡಿಯಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ SAST ಅಡಿಯಲ್ಲಿ ರಾಜ್ಯ ಆರೋಗ್ಯ ಇಲಾಖೆ, ಮಾರ್ಚ್ 2020 ರಿಂದ ಮಾರ್ಚ್ 2021 ರವರೆಗೆ ಮೊದಲ ಕೋವಿಡ್ ಅಲೆಯಲ್ಲಿ ಖಾಸಗಿ ಆಸ್ಪತ್ರೆಗಳಿಗೆ 391.26 ಕೋಟಿ ರೂಪಾಯಿಗಳ ಬಿಲ್‌ಗಳನ್ನು ಪಾವತಿಸಿದೆ. ಏಪ್ರಿಲ್ 2021 ರಿಂದ ಡಿಸೆಂಬರ್ 2021 ರವರೆಗಿನ 2ನೇ ಅಲೆ ವೇಳೆ ಖಾಸಗಿ ಆಸ್ಪತ್ರೆಗಳಿಗೆ 376.76 ಕೋಟಿ ರೂಪಾಯಿಗಳ ಬಿಲ್ ಮತ್ತು ಜನವರಿ 2022 ರಿಂದ ಮಾರ್ಚ್ 2022 ರವರೆಗೆ ಮೂರನೇ ಅಲೆ ಅವಧಿಯಲ್ಲಿ ಖಾಸಗಿ ಆಸ್ಪತ್ರೆಗಳಿಗೆ 11.80 ಕೋಟಿ ರೂಪಾಯಿಗಳ ಬಿಲ್‌ಗಳನ್ನು ಪಾವತಿ ಮಾಡಿದ್ದೇವೆ ಎಂದು ಅವರು ಹೇಳಿದರು.

ಆರೋಗ್ಯ ಇಲಾಖೆಯ ಮೂಲಗಳ ಪ್ರಕಾರ ಕೋವಿಡ್ ಚಿಕಿತ್ಸೆಯ ಸಮಯದಲ್ಲಿ ರೋಗಿಗಳಿಗೆ ಹಣ ವಸೂಲಿ ಮಾಡಿದ 65 ಸರ್ಕಾರಿ ಆಸ್ಪತ್ರೆಗಳ ವಿರುದ್ಧ ದೂರುಗಳನ್ನು ಸಹ ಸ್ವೀಕರಿಸಿದ್ದು, ಖಾಸಗಿ ಕೋವಿಡ್ ರೋಗಿಗಳಿಂದ (ಸರ್ಕಾರದಿಂದ ಉಲ್ಲೇಖಿಸಲ್ಪಡದ) ರಾಜ್ಯ ಸರ್ಕಾರವು ನಿಗದಿಪಡಿಸಿದ / ಮಿತಿಗೊಳಿಸಿದ ಕೋವಿಡ್ ಚಿಕಿತ್ಸೆಗಾಗಿ ಪ್ಯಾಕೇಜ್ ವೆಚ್ಚಕ್ಕಿಂತ 'ಹೆಚ್ಚುವರಿ ಹಣವನ್ನು' ವಿಧಿಸುವ ಕುರಿತು 54 ಆಸ್ಪತ್ರೆಗಳ ವಿರುದ್ಧ ಆರೋಗ್ಯ ಇಲಾಖೆಯು 68 ದೂರುಗಳನ್ನು ಸ್ವೀಕರಿಸಿದೆ. ಈ ಪೈಕಿ 53 ದೂರುಗಳು ಬೆಂಗಳೂರಿನಿಂದ ಬಂದಿವೆ. ಮತ್ತು ಅವರಲ್ಲಿ ಹತ್ತು ಮಂದಿ ರಾಜ್ಯದ ಇತರ ಭಾಗದವರು. ಮತ್ತು ಈ ಆಸ್ಪತ್ರೆಗಳು ರೋಗಿಗಳಿಂದ ರೂ. 1,86,79,995 ಮೌಲ್ಯದ ಬಿಲ್‌ಗಳನ್ನು ಸಂಗ್ರಹಿಸಿವೆ. ಕೆಲವು ಖಾಸಗಿ ಆಸ್ಪತ್ರೆಗಳು ಇದುವರೆಗೆ ಐದು ರೋಗಿಗಳಿಗೆ 10,35,859 ರೂ.ಗಳನ್ನು ಮರುಪಾವತಿ ಮಾಡಿದೆ ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ. ಈ ಪ್ರಕರಣಗಳನ್ನು ಕೆಪಿಎಂಇ (ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳು) ಕಾಯ್ದೆ ಅಥವಾ ವಿಪತ್ತು ನಿರ್ವಹಣಾ ಕಾಯ್ದೆಯಡಿಯಲ್ಲಿ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ನೇತೃತ್ವದ ಜಿಲ್ಲಾ ಕುಂದುಕೊರತೆ ಪರಿಹಾರ ಸಮಿತಿಗಳು ಮತ್ತು ಆರೋಗ್ಯ ಇಲಾಖೆಯ ನಿರ್ದೇಶನಗಳೊಂದಿಗೆ ಬೆಂಗಳೂರಿನ ಬಿಬಿಎಂಪಿಯಿಂದ ನಿರ್ವಹಿಸಲಾಗುತ್ತದೆ ಎಂದು ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಸಿದ್ದು ಕಾರಿನ ಮೇಲೆ ಮೊಟ್ಟೆ ಎಸೆತ ಪ್ರಕರಣ

ಸಂಸದ ಪ್ರತಾಪ್ ಸಿಂಹ ನಿವಾಸದ ಮುಂದೆ ಪ್ರತಿಭಟನೆಗೆ ಕಾಂಗ್ರೆಸ್ ಕಾರ್ಯಕರ್ತರ ಯತ್ನ



ಮೈಸೂರು, ಆ.21(ಆರ್‌ಕೆಬಿ)– ಕೊಡಗಿನಲ್ಲಿ ಸಿದ್ದರಾಮಯ್ಯನವರ ಕಾರಿನ ಬೆಲೆ ಮೊಟ್ಟೆ ಎಸೆದ ಘಟನೆಯನ್ನು ಖಂಡಿಸಿ, ಮೈಸೂರು ಯುವ ಕಾಂಗ್ರೆಸ್ ಕಾರ್ಯಕರ್ತರು ಮೈಸೂರಿನಲ್ಲಿರುವ ಸಂಸದ ಪ್ರತಾಪ್ ಸಿಂಹ ಅವರ ನಿವಾಸದ ಬಳಿ ಭಾನುವಾರ ಪ್ರತಿಭಟನೆ ನಡೆಸಲು ಯತ್ನಿಸಿದರು.

ಮೈಸೂರು ವಿಜಯನಗರ ನಾಲ್ಕನೇ ಹಂತದಲ್ಲಿರುವ ಸಂಸದ ಪ್ರತಾಪ್ ಸಿಂಹ ಅವರ ಮನೆ ಬಳಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟಿಸುವ ವಿಷಯ ತಿಳಿದಿದ್ದ ಪೊಲೀಸರು, ಬ್ಯಾರಿಕೇಡ್ ಅಳವಡಿಸಿ ಸಂಸದರ ಮನೆ ಬಳಿ ತೆರಳದಂತೆ ತಡೆದರು.

ಇದರಿಂದ ಆಕ್ರೋಶಗೊಂಡ ಯುವ ಕಾಂಗ್ರೆಸ್ ಕಾರ್ಯಕರ್ತರು, ಪೊಲೀಸರೊಂದಿಗೆ ವಾಗ್ವಾದ ನಡೆಸಿ ಪ್ರತಿಭಟನೆಗೆ ಅವಕಾಶ ನೀಡುವಂತೆ ಆಗ್ರಹಿಸಿದರು. ನಾವು ಬಿಜೆಪಿಯವರಂತೆ ಮೊಟ್ಟೆ ಎಸೆಯಲು ಹೋಗುತ್ತಿಲ್ಲ. ಅದಕ್ಕೆ ಬದಲಾಗಿ ಪೌಷ್ಟಿಕಾಂಶಯುಕ್ತ ಮೊಟ್ಟೆಯನ್ನ ಅವರಿಗೆ ಕೊಡುಗೆಯಾಗಿ ನೀಡಿ, ಅದರ ಉಪಯೋಗದ ಬಗ್ಗೆ ತಿಳುವಳಿಕೆ ನೀಡಲು ಹೋಗುತ್ತಿದ್ದೇವೆ. ನಮ್ಮನ್ನು ತಡೆಗಟ್ಟಬೇಡಿ ಹೋಗಲು ಅವಕಾಶ ಕೊಡಿ ಎಂದು ಪಟ್ಟು ಹಿಡಿದರು. ಆದರೆ ಪೊಲೀಸರು ಅದಕ್ಕೆ ಅವಕಾಶ ನೀಡದ ಕಾರಣ ಅಲ್ಲಿಯೇ ಬಿಜೆಪಿ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರಾದ ನಿಶಾಂತ್, ಚಂದ್ರು, ಅಬ್ರಾರ್, ಪವನ್, ಶೇಖರ್, ಯಶವಂತ್, ಸಂಜಯ್, ವಿನೋದ್ ಮತ್ತಿತರರಿದ್ದರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಕೆ.ಆರ್.ಪೇಟೆಯ ತ್ರಿವೇಣಿ ಸಂಗಮದಲ್ಲಿ

ಅ.14ರಿಂದ ಮಹಾ ಕುಂಭಮೇಳ



"ಇಂದೊಂದು ಐತಿಹಾಸಿಕ ಕಾರ್ಯಕ್ರಮವಾಗಿದ್ದು, ಕಳೆದ ಬಾರಿಗಿಂತ ಅದ್ದೂರಿಯಾಗಿ ಆಯೋಜಿಸಬೇಕು. ಪ್ರತಿದಿನ ಧಾರ್ಮಿಕ ಕಾರ್ಯಕ್ರಮ, ಧರ್ಮ ಸಭೆಗಳನ್ನು ಯಶಸ್ವಿಯಾಗಿ ಆಯೋಜಿಸಬೇಕು. ಭಕ್ತರಿಗೆ ಸೂಕ್ತ ಸ್ನಾನಘಟ್ಟ, ತಂಗಲು ವ್ಯವಸ್ಥೆ, ರಸ್ತೆ ಅಭಿವೃದ್ಧಿ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಲು ಜಿಲ್ಲೆ ಹಾಗೂ ತಾಲೂಕು ಆಡಳಿತ ಕ್ರಮ ಕೈಗೊಳ್ಳಬೇಕು.

–ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುತ್ತೂರು ಮಠ

ಕೆ.ಆರ್.ಪೇಟೆ, ಆ.21– ಕಾವೇರಿ, ಹೇಮಾವತಿ, ಲಕ್ಷ್ಮಣ ತೀರ್ಥ ನದಿಗಳ ಪವಿತ್ರ ಸಂಗಮ ಕ್ಷೇತ್ರವಾಗಿರುವ ಕೆ.ಆರ್.ಪೇಟೆ ತಾಲೂಕಿನ ಅಂಬಿಗರಹಳ್ಳಿ, ಪುರ, ಸಂಗಾಪುರ ಗ್ರಾಮಗಳ ಬಳಿಯ ತ್ರಿವೇಣಿ ಸಂಗಮದಲ್ಲಿ ಅ.14, 15, 16ರಂದು ಮೂರು ದಿನಗಳ ಕಾಲ 2ನೇ ಮಹಾ ಕುಂಭ ಮೇಳ ಆಯೋಜಿಸಲಾಗಿದೆ.

ಕಾರ್ಯಕ್ರಮ ಸಂಬಂಧ ಬೆಂಗಳೂರಿನ ವಿಜಯನಗರದಲ್ಲಿರುವ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ಭಾನುವಾರ ಸುತ್ತೂರು ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀರಂಗಪಟ್ಟಣದ ಚಂದ್ರವನದ ಆಶ್ರಮದ ಮಹಾಂತ ಶಿವಯೋಗಿ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಕಾರ್ಯಕ್ರಮದ ನಡೆಸುವ ಕುರಿತು ಚರ್ಚಿಸಲಾಯಿತು.

ತ್ರಿವೇಣಿ ಸಂಗಮದಲ್ಲಿ ಜಗದ್ಗುರುಗಳು, ಸಾಧು–ಸಂತರ ಸಮ್ಮುಖದಲ್ಲಿ ಮಹಾ ಕುಂಬಾಮೇಳ ಆಯೋಜಿಸಲು ತೀರ್ಮಾನಿಸಲಾಗಿದೆ. ಅ.13ರ ಸಂಜೆಯಿಂದಲೇ ಬಾಲ ಮಲೆ ಮಹದೇಶ್ವರ ದೇವಾಲಯದ ಪ್ರತಿಷ್ಠಾಪನೆ ಕಾರ್ಯ ಹಾಗೂ ಧಾರ್ಮಿಕ ಕಾರ್ಯಕ್ರಮ ಆರಂಭಿಸಲು ತೀರ್ಮಾನಿಸಲಾಯಿತು.

ರೇಷ್ಮೆ, ಯುವಜನ ಸಬಲೀಕರಣ ಹಾಗೂ ಕ್ರೀಡಾ ಸಚಿವ ಡಾ.ಕೆ.ಸಿ.ನಾರಾಯಣಗೌಡ ಮಾತನಾಡಿ ಯಶಸ್ವಿಯಾಗಿ ಕುಂಭಮೇಳ ನಡೆಸಲು ಸರ್ಕಾರದಿಂದ 7 ಕೋಟಿ ರೂ. ಬಿಡುಗಡೆಗೊಳಿಸಲಾಗಿದೆ. ಧಾರ್ಮಿಕ ಕಾರ್ಯಕ್ರಮಕ್ಕೆ ದೇಶದ ನಾನಾ ಕಡೆಯಿಂದ ಲಕ್ಷಾಂತರ ಭಕ್ತರು ಆಗಮಿಸಲಿದ್ದಾರೆ. ರಸ್ತೆ ಸೌಕರ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸಾಧು ಸಂತರಿಗೆ ವಸತಿ ಸೌಕರ್ಯ, ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಬೇಕು. ಬರುವ ಭಕ್ತರಿಗೆ ಸಂಗಮದಲ್ಲಿ ಸ್ನಾನಘಟ್ಟ ನಿರ್ಮಾಣ, ಶೌಚಾಲಯದ ವ್ಯವಸ್ಥೆ, ತಾತ್ಕಾಲಿಕ ಮನೆಗಳ ನಿರ್ಮಾಣ ಸೇರಿದಂತೆ ಭಕ್ತರಿಗೆ ಯಾವುದೇ ರೀತಿಯ ಸಮಸ್ಯೆ ಆಗದಂತೆ ಅಗತ್ಯ ಸಿದ್ಧತೆ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಆದಿಚುಂಚನಗಿರಿ ಮಹಾಸಂಸ್ಥಾನದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಹಾಸನ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಮಲೆ ಮಹದೇಶ್ವರ ಜ್ಯೋತಿ ಸಂಚರಿಸಲಿದೆ. ಕುಂಭ ಮೇಳಕ್ಕೆ ಆಗಮಿಸುವ ಎಲ್ಲಾ ಸಾಧು–ಸಂತರು, ಜನರಿಗೆ ಯಾವುದೇ ರೀತಿ ತೊಂದರೆ ಆಗದಂತೆ ಅಗತ್ಯ ಮೂಲ ಸೌಕರ್ಯ ವ್ಯವಸ್ಥೆ ಒದಗಿಸಿಕೊಡಲು ಸೂಕ್ತ ಕ್ರಮ ಕೈಗೊಳ್ಳಬೇಕು. ಮಠದಿಂದ ಎಲ್ಲಾ ರೀತಿಯ ನೆರವು ನೀಡಲಾಗುವುದು ಎಂದರು.

ಬೇಬಿ ಮಠದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಮಾತನಾಡಿ, ತ್ರಿವೇಣಿ ಸಂಗಮ ಪವಿತ್ರ ಸ್ಥಳವಾಗಿ. ಕಾವೇರಿ, ಹೇಮಾವತಿ, ಲಕ್ಷ್ಮಣ ತೀರ್ಥ ನದಿಗಳು ಜೀವಂತ ಸಂಗಮವಾಗುವ ಪವಿತ್ರ ಕ್ಷೇತ್ರವಾಗಿದೆ. ಹಾಗಾಗಿ, ಕುಂಭಮೇಳವನ್ನು ಶಾಸ್ತ್ರೋಕ್ತವಾಗಿ ಆಚರಿಸಬೇಕು. ಇದರ ಜೊತೆಗೆ ವಸ್ತು ಪ್ರದರ್ಶನ ನಡೆಸಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಸಚಿವ ಕೆ.ಗೋಪಾಲಯ್ಯ, ಜಿಲ್ಲಾಧಿಕಾರಿ ಎಸ್.ಅಶ್ವಥಿ, ಎಸ್‌ಪಿ ಯತೀಶ್, ಎಡಿಸಿ ಡಾ.ಹೆಚ್.ಎಲ್.ನಾಗರಾಜ್, ಎಸಿ ಶಿವಾನಂದಮೂರ್ತಿ, ತಹಸೀಲ್ದಾರ್ ಎಂ.ವಿ.ರೂಪಾ, ಸಚಿವರ ಆಪ್ತ ಕಾರ್ಯದರ್ಶಿ ಪ್ರಭಾಕರ್, ಕುಂಭಮೇಳದ ಸಂಚಾಲಕ ಅಂಚಿ ಸಣ್ಣಸ್ವಾಮಿಗೌಡ ಇತರರಿದ್ದರು.

ಸಂಸ್ಕೃತಿಯ ತವರು ಮಂಡ್ಯದಲ್ಲಿ ಸಾಹಿತ್ಯಾಸಕ್ತರ ಕೊರತೆ: ರಾಮಚಂದ್ರು



ಮಂಡ್ಯ,ಆ.21– ಕಲೆ, ಸಂಸ್ಕೃತಿ, ಸಾಹಿತ್ಯದ ತವರಾದ ಸಕ್ಕರೆ ನಾಡು ಮಂಡ್ಯ ಜಿಲ್ಲೆಯಲ್ಲಿ ಸಾಹಿತ್ಯಾಸಕ್ತರ ಕೊರತೆ ಇದೆ ಎಂದು ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು ವಿಷಾದಿಸಿದರು.

ನಗರದ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಭಾನುವಾರ ಡಾ.ಜೀ.ಶಂಪ. ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಯುವಸೇನೆ, ಶ್ರೀಶಂಭು ಸೇವಾ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 29ನೇ ರಾಜ್ಯ ಮಟ್ಟದ ಕವಿ, ಕಾವ್ಯ ಮೇಳ, ಅಮೃತ ಅಭಿನಂದನೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅಭಿನಂದನೆ ಸಲ್ಲಿಸಿ ಅವರು ಮಾತನಾಡಿದರು.

ಜಿಲ್ಲೆ ಸಾಂಸ್ಕೃತಿಕವಾಗಿ ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಹೆಸರು ಮಾಡಿದೆ. ಇಂತಹ ಜಿಲ್ಲೆಯಲ್ಲಿ ಸಾಹಿತ್ಯಾಸಕ್ತರ ಕೊರತೆ ಬಹು ದೊಡ್ಡದಾಗಿದೆ. ಸಾಹಿತ್ಯ, ನೃತ್ಯ, ಸಂಗೀತೋತ್ಸವ, ಶಾಸ್ತ್ರೀಯ ಸಂಗೀತೋತ್ಸವ, ಗಾಯನದಂತಹ ಕಲೆಗಳನ್ನು ಪ್ರೋತ್ಸಾಹಿಸುವ ಕೆಲಸಕ್ಕೆ ಕಾರ್ಯಕ್ರಮ ಆಯೋಜಕರು ಮುಂದಾಗಬೇಕು. ಈ ಮೂಲಕ ಪ್ರತಿಭೆಗಳಲ್ಲಿರುವ ಕಲೆ ಹೊರಬರಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಮಾತನಾಡಿ, ಸಾಹಿತ್ಯ, ಶೈಕ್ಷಣಿಕ, ಧಾರ್ಮಿಕ, ಹೋರಾಟಕ್ಕೆ ಮತ್ತೊಂದು ಹೆಸರೇ ಮಂಡ್ಯ ಜಿಲ್ಲೆ ಮಂಡ್ಯ ಜಿಲ್ಲೆ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಆರಾಧಿಸುತ್ತಾ ಬಂದಿರುವುದರಿಂದಲೇ ರಾಜ್ಯದ ಸಾರಸ್ವತ ಲೋಕದಲ್ಲಿ ಮಂಡ್ಯ ಜಿಲ್ಲೆಗೆ ವಿಶೇಷ ಹೆಸರಿದೆ ಅನೇಕ ಸಾಹಿತಿಗಳನ್ನು ಮಂಡ್ಯ ಜಿಲ್ಲೆ ರಾಜ್ಯಕ್ಕೆ ಕೊಡುಗೆಯಾಗಿ ಕೊಟ್ಟಿದ್ದು, ಸಾಹಿತ್ಯ ಕ್ಷೇತ್ರದಲ್ಲಿ ನಮ್ಮ ಜಿಲ್ಲೆ ಇನ್ನಷ್ಟು ಹೆಸರು ಮಾಡಲಿ ಎಂದರು.

ಡಾ.ಜೀ.ಶಂ.ಪ. ಜನಪದ ಕ್ಷೇತ್ರದಲ್ಲಿ ರಾಜ್ಯ ಮಟ್ಟದಲ್ಲಿ ಹೆಸರು ಮಾಡಿದವರು. ಅಂತಹವರ ಹೆಸರಲ್ಲಿ ಜೀಶಂಪ ಸಾಹಿತ್ಯ ವೇದಿಕೆ ರಚಿಸಿಕೊಂಡು ವಿವಿಧ ಸಾಧಕರನ್ನು ಗುರುತಿಸಿ. ಸನ್ಮಾನಿಸಿ, ಅವರ ಹೆಸರನ್ನು ಚಿರಸ್ಥಾಯಿಗೊಳಿಸುತ್ತಾ ಸಾಧಕರು, ಪ್ರತಿಭೆಗಳನ್ನು ಹೊರತರುತ್ತಿರುವ ವೇದಿಕೆಯ ವೃಂದಕ್ಕೆ ಒಳಿತಾಗಲಿ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕವಯತ್ರಿ ಡಾ.ರತ್ನಾಗಿ ಬದಿ ಕವಿಕಾವ್ಯಮೇಳದ ಸಮ್ಮೇಳನಾಧ್ಯಕ್ಷತೆ ವಹಿಸಿದ್ದರು. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ 20ಕ್ಕೂ ಹೆಚ್ಚು ಮಂದಿಯನ್ನು ಅಭಿನಂದಿಸಲಾಯಿತು.

ವೇದಿಕೆಯಲ್ಲಿ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಪ್ರೊ.ಹೆಚ್.ಎಸ್.ಮುದ್ದೇಗೌಡ, ಜೀಶಂಪ ಸಾಹಿತ್ಯ ವೇದಿಕೆಯ ಅಧ್ಯಕ್ಷ ಎಸ್.ಕೃಷ್ಣ ಸ್ವರ್ಣಸಂದ್ರ, ಪ್ರಧಾನ ಕಾರ್ಯದರ್ಶಿ ಚಂದಗಾಲು ಲೋಕೇಶ್, ಸಾಹಿತಿ ಬನ್ನಂಗಾಡಿ ಸಿದ್ದಲಿಂಗಯ್ಯ, ಹಾಪ್‌ಕಾಮ್ಸ್ ಜಿಲ್ಲಾ ನಿರ್ದೇಶಕ ಹೊಸಹಳ್ಳಿ ನಾಗೇಶ್, ಪುರಸಭೆ ಸದಸ್ಯ ಪ್ರಿಯಾಂಕ ಅಪ್ಪುಗೌಡ, ಬಿಜೆಪಿ ಮುಖಂಡ ಯಮದೂರು ಸಿದ್ದರಾಜು, ಸಮಾಜ ಸೇವಕ ಸಂತೋಷ್ ಅರಕೆರೆ, ಶಿಕ್ಷಕ ಮಂಗಲ ಶಿವಣ್ಣ, ಪತ್ರಕರ್ತ ನಾಗೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶಾಸಕ ಡಿ.ಸಿ.ತಮ್ಮಣ್ಣ ಅವರ ನಿವಾಸಕ್ಕೆ ಕಂದಾಯ ಸಚಿವ ಆರ್.ಅಶೋಕ್ ಭೇಟಿ



ಭಾರತೀನಗರ, ಆ.21– ಕೆ.ಎಂ.ದೊಡ್ಡಿಯ ಶಾಸಕ ಡಿ.ಸಿ.ತಮ್ಮಣ್ಣ ಅವರ ನಿವಾಸಕ್ಕೆ ಕಂದಾಯ ಸಚಿವ ಆರ್.ಅಶೋಕ್ ಭಾನುವಾರ ಭೇಟಿ ನೀಡಿದರು. ಈ ವೇಳೆ ಶಾಸಕ ಡಿ.ಸಿ.ತಮ್ಮಣ್ಣ ಅವರು, ಕ್ಷೇತ್ರಕ್ಕೆ ಆಗಬೇಕಾಗಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ಮನವಿ ಸಲ್ಲಿಸಿ, ತಾಲೂಕು ಕಂದಾಯ ಕಚೇರಿಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ರೈತರು ತಮ್ಮ ಕೆಲಸಕ್ಕಾಗಿ ಅಲೆಯುವಂತಾಗಿದೆ. ಸಕಾಲಕ್ಕೆ ಕೆಲಸ ಮಾಡದೆ ಹಣಕ್ಕಾಗಿ ಬೇಡಿಕೆ ಇಡುತ್ತಿರುವ ಸಾಕಷ್ಟು ನಿದರ್ಶನಗಳು ಕೇಳಿ ಬರುತ್ತಿವೆ. ಇವುಗಳನ್ನು ತಡೆಗಟ್ಟಲು ಮುಂದಾಗಬೇಕು ಎಂದರು.

3 ಎಕರೆ ಸ್ಥಳದಲ್ಲಿ ತಾಲೂಕು ಆಡಳಿತ ಸೌಧ ನಿರ್ಮಾಣಕ್ಕೆ ಹಣ ಮಂಜೂರು ಮಾಡಿಸಿಕೊಡಬೇಕು. ಇದರಿಂದ ರೈತರಿಗೆ ಅನುಕೂಲವಾಗುತ್ತದೆ. ಜನ ಸಾಮಾನ್ಯರ ಕಷ್ಟಕ್ಕೆ ಸ್ಪಂದಿಸುವ, ಜನ ಸೇವೆಗಾಗಿ ಸದಾ ದುಡಿಯುವ ಕಚೇರಿಗಳನ್ನು ನಿಮ್ಮ ಅವಧಿಯಲ್ಲಿ ಅಭಿವೃದ್ಧಿಪಡಿಸಿದರೆ ಕ್ಷೇತ್ರದ ಜನತೆಗೆ ಒಳಿತು ಉಂಟಾಗುತ್ತದೆ ಎಂದರು. ಒಂದು ತಾಸಿಗೂ ಹೆಚ್ಚು ಕಾಲ ಕ್ಷೇತ್ರದ ಅಭಿವೃದ್ಧಿ ವಿಚಾರದ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಸಿದರು. ಇದಕ್ಕೆ ಸ್ಪಂದಿಸಿದ ಸಚಿವರು ಕೆಲವು ಇಲಾಖೆಗಳು ನನ್ನ ವ್ಯಾಪ್ತಿಗೆ ಬಾರದ ಕಾರಣ ಸಂಬಂಧಿಸಿದ ಸಚಿವರನ್ನು ಸಂಪರ್ಕಿಸಿ ಬಗೆಹರಿಸಿಕೊಳ್ಳಬೇಕು ಎಂದು ಸಲಹೆ ನೀಡಿದ ಅವರು, ಕ್ಷೇತ್ರಕ್ಕೆ ಅಗತ್ಯವಿರುವ ಕೆಲಸಗಳನ್ನು ಮಾಡಲು ಅಗತ್ಯ ಕ್ರಮಕೈಗೊಳ್ಳುತ್ತೇನೆ ಎಂದು ಸಲಹೆ ನೀಡಿದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಶ್ರೀರಂಗಪಟ್ಟಣ, ಆ.21– ತಾಲೂಕಿನ ಅಲ್ಲಾ ಪಟ್ಟಣದಲ್ಲಿ 30 ಲಕ್ಷ ರೂ. ವೆಚ್ಚದಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ರವೀಂದ್ರ ಶ್ರೀಕಂಠಯ್ಯ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಗ್ರಾಮದಲ್ಲಿ 20 ವರ್ಷಗಳ ಹಿಂದೆ ಹಂಚಿಕೆ ಮಾಡಲು ಮುಂದಾಗಿದ್ದ ನಿವೇಶನಗಳನ್ನು ಸಿದ್ದತೆ ಮಾಡಲಾಗಿದ್ದು, ಇನ್ನೆರಡು ಮೂರು ದಿನಗಳಲ್ಲಿ ಸಂಬಂಧಿಸಿದ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸಲಾಗುತ್ತದೆ ಎಂದರು.

ನಮ್ಮ ತಾಯಿ ಪಾರ್ವತಮ್ಮ ಶ್ರೀಕಂಠಯ್ಯ ಅವರು ಈ ಭಾಗದಲ್ಲಿ ಬಡವರನ್ನು ಗುರುತಿಸಿ ನಿವೇಶನ ನೀಡಲು ಈ ಸ್ಥಳವನ್ನು ಆಯ್ಕೆ ಮಾಡಿದರು. ಕೆಲವು ತಾಂತ್ರಿಕ ದೋಷದಿಂದ ಇಲ್ಲಿವರೆಗೆ ನಿವೇಶನ ಹಂಚಿಕೆ ಮಾಡಲು ತಡೆ ಹಿಡಿಯಲಾಗಿತು. ನಂತರ ಬಂದ ಶಾಸಕರು ಈ ಬಗ್ಗೆ ಗಮನ ಹರಿಸಿ ಬಡವರಿಗೆ ನೀಡದೆ ಇರುವುದು ಬೇಸರದ ಸಂಗತಿಯಾಗಿತ್ತು. ಇದೀಗ ಎಲ್ಲವೂ ಸರಿ ಹೋಗಿದ್ದು, ಸುಮಾರು 29 ಮಂದಿ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಿ ಅದಕ್ಕೆ ನಂಬರ್ ಕೂಡ ಹಾಕಿದೆ. ಇದೀಗ ಹಕ್ಕು ಪತ್ರದ್ ಪ್ರತಿಗಳು ಸಿದ್ಧತೆಯಾಗಿದೆ. ಇನ್ನೆಡು ದಿನಗಳಲ್ಲಿ ವಿತರಣೆ ಮಾಡಲಾಗುತ್ತದೆ ಎಂದರು.

ನಂತರ ಪಕ್ಕದ ಗ್ರಾಮ ಮರಳಗಾಲ ಗ್ರಾಮದಲ್ಲಿ ಅಂದಾಜು ಮೊತ್ತ 40 ಲಕ್ಷ ರೂ. ವೆಚ್ಚದ ರಸ್ತೆ ಅಭಿವದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಅಲ್ಲಾಪಟ್ಟಣದ ಚನ್ನೇಗೌಡ, ರಾಮಣ್ಣ, ದೇವೇಗೌಡ, ಗಣೇಶ್, ಚಂದ್ರು, ರಾಜೇಶ್, ಶ್ಯಾಮ್, ಮಂಜುನಾಥ್, ನಂಜಯ್, ಯೋಗೇಂದ್ರ, ಬೋರಪ್ಪ, ಅರೋಕ್, ಮಂಜುನಾಥ್, ಸೇರಿದಂತೆ ಇನ್ನಿತರರು ಹಾಜರಿದ್ದರು.

ಅಪರಿಚಿತ ವ್ಯಕ್ತಿ ಶವ ಪತ್ತೆ

ನಾಗಮಂಗಲ, ಆ.21– ತಾಲೂಕಿನ ಹೊಣಕೆರೆ ಹೋಬಳಿಯ ಇಜ್ಜಲಘಟ್ಟ ಗ್ರಾಮದ ಹೇಮಾವತಿ ನಾಲೆಯೊಂದರಲ್ಲಿ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದೆ.

ಈತ ಸುಮಾರು 65 ರಿಂದ 70 ವರ್ಷ ವಯಸ್ಸಿನ ಚಡ್ಡಿ ಮತ್ತು ಅಂಗಿಯನ್ನು ತೊಟ್ಟಿರುವ ಆತ ನಾಲೆಯಲ್ಲಿ ಕೊಚ್ಚಿ ಬಂದಿರಬಹುದೆಂದು ಶಂಕಿಸಲಾಗಿದ್ದು, ಗ್ರಾಮಸ್ಥರು ನೀಡಿದ ದೂರಿನ ಮೇರೆಗೆ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಶವವನ್ನು ಬೆಳ್ಳೂರು ಕ್ರಾಸ್‌ನ ಬಿಜಿಎಸ್ ಆಸ್ಪತ್ರೆಯ ಶವಾಗಾರದಲ್ಲಿಡಲಾಗಿದೆ.

ಕೆ.ಟಿ.ಗೋಪಾಲ್ ನಿಧನ



ಕೆ.ಆರ್.ಪೇಟೆ, ಆ.21– ತಾಲೂಕಿನ ಕತ್ತರಘಟ್ಟ ಗ್ರಾಮದ ಕೆ.ಟಿ.ಗೋಪಾಲ್(70) ಅನಾರೋಗ್ಯದಿಂದ ನಿಧನರಾದರು.

ಮೃತರು ತಾಲೂಕಿನ ಪಿಎಲ್‌ಡಿ ಬ್ಯಾಂಕಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹುಟ್ಟೂರು ಕತ್ತರಘಟ್ಟದಲ್ಲಿ ನಡೆಯಿತು.

ಭಾಗ್ಯಮ್ಮ



ಮದ್ದೂರು, ಆ.21– ತಾಲೂಕಿನ ಚಾಮನಹಳ್ಳಿ ಗ್ರಾಮದ ನಿವಾಸಿ ಲೇಟ್ ಗೋಪಾಲಸ್ವಾಮಿ ಅವರ ಪತ್ನಿ ಭಾಗ್ಯಮ್ಮ(53) ಭಾನುವಾರ ನಿಧನರಾದರು. ಮೃತರು ಅಲಭುಜನಹಳ್ಳಿ ಗ್ರಾಮದ ಅಂಗನವಾಡಿ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಬ್ಬರು ತಮ್ಮಂದಿರು, ನಾಲ್ವರು ಸಹೋದರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಸಂಜೆ 5ಗಂಟೆಗೆ ಸ್ವಗ್ರಾಮ ಚಾಮನಹಳ್ಳಿ ಗ್ರಾಮದ ರುದ್ರ ಭೂಮಿಯಲ್ಲಿ ನಡೆಯಿತು.

ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ರಾಜ್ಯದ

85 ಸಾವಿರ ಮನೆಗಳಿಗೆ ಅನುದಾನ ತಡೆ ಹಿಡಿದ ಸರ್ಕಾರ

'ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ', ಜನಸಂಪರ್ಕ ಸಭೆಯಲ್ಲಿ ಶಾಸಕ ಸಾ.ರಾ.ಮಹೇಶ್



ಭೇರ್ಯ, ಆ.21– ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ರಾಜ್ಯದ 85 ಸಾವಿರ ಮನೆಗಳಿಗೆ ಸರ್ಕಾರ ಅನುದಾನ ತಡೆ ಹಿಡಿದಿದ್ದು, ಮನೆ ಕಟ್ಟಿರುವ ಫಲಾನುಭವಿಗಳು ತೀವ್ರ ಸಂಕಷ್ಟದಲ್ಲಿದ್ದಾರೆ ಎಂದು ಸರ್ಕಾರದ ವಿರುದ್ಧ ಶಾಸಕ ಸಾ.ರಾ.ಮಹೇಶ್ ವಾಗ್ದಾಳಿ ನಡೆಸಿದರು.

ಇಲ್ಲಿನ ಹೊನ್ನೇನಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ 'ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ' ಹಾಗೂ ಜನಸಂಪರ್ಕ ಸಭೆ ಉದ್ಘಾಟಿಸಿ ಮಾತನಾಡಿದ ಅವರು, 2016, 2017 ಸಾಲಿನಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮನೆ ಕಟ್ಟಿದ ಫಲಾನುಭವಿಗಳಿಗೆ ಇದೂವರೆಗೂ ಹಣ ಬಿಡುಗಡೆ ಮಾಡದ ಹಿನ್ನೆಲೆಯಲ್ಲಿ ಹಳ್ಳಿಗಳಲ್ಲಿ ಫಲಾನುಭವಿಗಳು ಶಾಸಕರನ್ನು ಪ್ರಶ್ನಿಸುತ್ತಿದ್ದಾರೆ ಎಂದು ಆರೋಪಿಸಿದರು.

ಹೊನ್ನೇನಹಳ್ಳಿ ಹಾಗೂ ಕೆಡಗ ಗ್ರಾಮದ ಹೊರ ವಲಯದಲ್ಲಿ ಮನೆ ಕಟ್ಟಿರುವ ಜನರಿಗೆ ವಿದ್ಯುತ್ ಸಂಪರ್ಕ ನೀಡಿ, ಕುಡಿಯುವ ನೀರು ಒದಗಿಸಿ ಎಂದ ಶಾಸಕರು 7 ಕೋಟಿ ವೆಚ್ಚದಲ್ಲಿ ಕೆಲವೊಂದು ಗ್ರಾಮಗಳಿಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ ಮಾಡಲಾಗುತ್ತಿದೆ ಎಂದರು.

ಮಾವನೂರು ಗ್ರಾಮದ ಅರಸು ಭವನಕ್ಕೆ 20 ಲಕ್ಷ ಕೊಟ್ಟಿದ್ದು, ಮುಂದೆ ಹೆಚ್ಚಿನ ಅನುದಾನ ಕೊಡುತ್ತೇನೆ. ಇದೇ ವೇಳೆ ದಿವಂಗತ ಡಿ.ದೇವರಾಜು ಅರಸು ಜನ್ಮ ದಿನದ ಅಂಗವಾಗಿ ಅರಸು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ವಿವಿಧ ಸವಲತ್ತುಗಳನ್ನು ವಿತರಿಸಿದರು.

ಕಾರ್ಮಿಕ ಇಲಾಖೆಯಿಂದ ಇಬ್ಬರು ಕುಶಲಕರ್ಮಿಗಳಿಗೆ ತಲಾ 50 ಸಾವಿರ ಸಹಾಯಧನ, ವಿಶ್ವಕರ್ಮ ಕಾರ್ಮಿಕರಿಗೆ 25 ಸಾವಿರದ ಚೆಕ್ ಹಾಗೂ ಸ್ಥಳೀಯ ಗ್ರಾಪಂ ವತಿಯಿಂದ ವಿವಿಧ ಅನುದಾನದ ಚೆಕ್ ವಿತರಿಸಲಾಯಿತು.

ಕೆಡಗ, ಮಾವನೂರು, ಪಶುಪತಿ, ಗುಮ್ಮನಹಳ್ಳಿ, ಗಾಯನಹಳ್ಳಿ, ಹೆಬ್ಸೂರು, ಸರಗೂರು ಗ್ರಾಮಗಳಿಗೆ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆ ಆಲಿಸಿ, ಕೆಲವೊಂದನ್ನು ಸ್ಥಳದಲ್ಲೆ ಬಗೆಹರಿಸಿದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಸುಂದ್ರಮ್ಮ, ಉಪಾಧ್ಯಕ್ಷ ಕಿಜರ್‌ಪಾಷ, ಮಾಜಿ ಉಪಾಧ್ಯಕ್ಷ ಪಶುಪತಿ ಜಗದೀಶ್, ಹರದನಹಳ್ಳಿ ಗ್ರಾಪಂ ಅಧ್ಯಕ್ಷೆ ನಂದಿನಿ, ಸದಸ್ಯರಾದ ಶಿವು, ರಾಧ, ಲತಾ, ರಾಣಿ, ಕೆ.ಟಿ.ಚಂದ್ರ ಷಣ್ಮುಗಪ್ಪ ಮಹೇಂದ್ರ, ಶಿಲ್ಪ, ಜೆಡಿಎಸ್ ಅಧ್ಯಕ್ಷ ರಾಜಣ್ಣ, ಕಾರ್ಯದರ್ಶಿ ಲಾಲೂ ಸಾಬ್, ತಹಸೀಲ್ದಾರ್ ಕೆ.ಎನ್.ಮೋಹನ್ ಕುಮಾರ್, ತಾಪಂ ಇಓ ಹೆಚ್.ಕೆ.ಸತೀಶ್, ಜಿಪಂ ಎಇಇ ಎಲ್.ವಿನುತ್, ಗ್ರಾಮೀಣ ಕುಡಿಯುವ ನೀರು ಎಇಇ ರಾಜರಾಂ, ಚೆಸ್ಕಾಂ ಎಇಇ ಮಧುಸೂದನ್, ಬಿಇಓ ಗಾಯಿತ್ರಿ, ಕೃಷಿ ನಿರ್ದೇಶಕ ಗುರುಪ್ರಸಾದ್, ನೀರಾವರಿ ಇಲಾಖೆ ಎಇಇ ಎಂ.ಆರ್.ವೆಂಕಟೇಶ್, ಅರಣ್ಯ ಇಲಾಖೆ ಆರ್‌ಎಫ್‌ಓ ರಶ್ಮಿ, ಹರಿಪ್ರಸಾದ್, ಅಬಕಾರಿ ಇನ್ಸ್‌ಪೆಕ್ಟರ್ ಶೈಲಜ, ಸಾಲಿಗ್ರಾಮ ಪೊಲೀಸ್ ಇನ್ಸ್‌ಪೆಕ್ಟರ್ ಆರ್.ಶ್ರೀಕಾಂತ್, ಜಿಪಂ ಎಇ ಸ್ವಾಮಿ, ಪಿಡಬ್ಲ್ಯೂಡಿ ಜೆಇ ಶಿವಪ್ಪ, ಪಿಡಿಓ ಕೇಶವಮೂರ್ತಿ, ಅಧಿಕಾರಿಗಳಾದ ಕುಮಾರ ನಾಯಕ್, ಪೂರ್ಣಿಮಾ, ಅಶೋಕ್, ಬಿಸಿಎಂ ಮಹೇಶ್, ವಿಎ ಆರತಿ, ಕೆಎಸ್‌ಆರ್‌ಸಿಬಸ್ ಘಟಕದ ವ್ಯವಸ್ಥಾಪಕ ಮಹೇಶ್, ಮುಖಂಡರಾದ ಮರೀಗೌಡ, ಅಶೋಕ, ಪ್ರಭಾಕರ್, ಪಶುಪತಿ ದಿನೇಶ್ ಇತರರಿದ್ದರು.

ಮರದೂರು ಏತ ನೀರಾವರಿ ಯೋಜನೆ ಕೈಗೆತ್ತಿಕೊಳ್ಳಲು ಸಚಿವರಿಗೆ ಮನವಿ



ಹುಣಸೂರು, ಆ.21– ತಾಲೂಕಿನ ಮರದೂರು ಏತ ನೀರಾವರಿ ಯೋಜನೆ ಕೈಗೆತ್ತಿಕೊಳ್ಳಬೇಕೆಂದು ಶಾಸಕ ಹೆಚ್.ಪಿ.ಮಂಜುನಾಥ್ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಶನಿವಾರ ರಾತ್ರಿ ಕೊಡಗಿನ ಹಾರಂಗಿ ಪ್ರವಾಸಿ ಮಂದಿರದಲ್ಲಿ ಜಲಸಂಪನ್ಮೂಲ ಸಚಿವರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದ ಶಾಸಕರು, ಮರದೂರು ಏತ ನೀರಾವರಿ ಯೋಜನೆ ಕೈಗೆತ್ತಿಕೊಳ್ಳುವ ಬಗ್ಗೆ ತಾವು ಈಗಾಗಲೇ ವಿಧಾನಸೌಧ ಅಧಿವೇಶನದಲ್ಲಿ ಭರವಸೆ ನೀಡಿದ್ದೀರಿ. ಆದರೆ ಇಲ್ಲಿವರೆಗೆ ಇಲಾಖೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಕೂಡಲೇ ಈ ಯೋಜನೆ ಕೈಗೆತ್ತಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಕಳೆದ 2 ವರ್ಷಗಳಿಂದ ನೀರಾವರಿ ಇಲಾಖೆ ವತಿಯಿಂದ ಎಸ್ಸಿ, ಎಸ್ಟಿ ಹಾಗೂ ಸಾಮಾನ್ಯ ವರ್ಗದ ರೈತರಿಗೆ ಗಂಗಾ ಕಲ್ಯಾಣ ಯೋಜನೆಯಡಿ ಬೋರ್ವೆಲ್ ಕೊರಸಿದ್ದು, ಅವುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಇನ್ನೂ ಅನುದಾನ ನೀಡಿಲ್ಲ. ಆದ್ದರಿಂದ ಕೂಡಲೇ ಗಂಗಾ ಕಲ್ಯಾಣ ಯೋಜನೆಗೆ ಅನುದಾನ ನೀಡುವುದರೊಂದಿಗೆ ಇಲಾಖೆಯ ಇತರೆ ಕಾಮಗಾರಿಗಳನ್ನು ಕೈಗೊಳ್ಳಲು ಕನಿಷ್ಠ 10 ಕೋಟಿ ರೂ. ವಿಶೇಷ ಅನುದಾನ ಮಂಜೂರು ಮಾಡಿಕೊಡಬೇಕೆಂದು ಮನವಿ ಮಾಡಿದರು.

ಶಾಸಕ ಮಂಜುನಾಥ್ ಮನವಿಗೆ ಸ್ಪಂದಿಸಿದ ಸಚಿವ ಗೋವಿಂದ ಕಾರಜೋಳ ಮರದೂರು ಏತ ನೀರಾವರಿ ಯೋಜನೆ ಕೂಡಲೇ ಕೈಗೆತ್ತಿಕೊಳ್ಳಲಾಗುವುದು. ಅಲ್ಲದೆ ಗಂಗಾ ಕಲ್ಯಾಣ ಯೋಜನೆಯಡಿ ಬೋರ್ವೆಲ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅನುದಾನ ನೀಡುವುದಾಗಿ ಭರವಸೆ ನೀಡಿದರು. ಈ ವೇಳೆ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಂಕರೇಗೌಡ, ಮುಖ್ಯ ಅಭಿಯಂತರ ವೆಂಕಟೇಶ್, ಸೂಪರಿಡೆಂಟ್ ಆಫ್ ಇಂಜಿನಿಯರ್ ಚನ್ನಕೇಶವ, ಹುಣಸೂರು ನೀರಾವರಿ ನಿಗಮದ ಎಇಇ ಸುರೇಶ್ ಇತರರಿದ್ದರು.

ಕಾಡಂಚಿನ ರೈತರು ಜಾಗರೂಕತೆಯಿಂದ ವಿದ್ಯುತ್ ಬಳಸಿ

ಸರಗೂರು, ಆ.21– ಕಾಡಂಚಿನ ರೈತರು ಜಾಗರೂಕತೆಯಿಂದ ವಿದ್ಯುತ್ ಬಳಸಬೇಕು ಎಂದು ಹುಣಸೂರು ಉಪವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ ಮಹೇಶ್ ಕುಮಾರ್ ಸಲಹೆ ನೀಡಿದರು.

ತಾಲೂಕಿನ ಎಂ.ಸಿ.ತಳಲು ಗ್ರಾಪಂ ವ್ಯಾಪ್ತಿಯ ಕಾಲೋನಿಯಲ್ಲಿ ನಡೆದ ವಿದ್ಯುತ್ ಅದಾಲತ್‌ನಲ್ಲಿ ಮಾತನಾಡಿದ ಅವರು, ಅಧಿಕಾರಿಗಳು ಕಾಡಂಚಿನ ಪ್ರದೇಶಗಳಲ್ಲಿ ವಿದ್ಯುತ್ ಸಮಸ್ಯೆ ಉಂಟಾಗದಂತೆ ಕ್ರಮ ವಹಿಸಬೇಕು. ಕುಡಿಯುವ ನೀರು, ಬೆಳಕಿಗೆ ಪ್ರಾಮುಖ್ಯತೆ ಕೊಡಬೇಕು. ಜಮೀನುಗಳಿಗೆ ಕಾಡುಪ್ರಾಣಿಗಳ ಹಾವಳಿ ಹೆಚ್ಚಿದ್ದು, ರೈತರು ಸಬ್ಸಿಡಿ ದರದಲ್ಲಿ ತಮ್ಮ ಜಮೀನುಗಳಿಗೆ ಸೋಲಾರ್ ತಂತಿ ಬೇಲಿ ಅಳವಡಿಸಿಕೊಳ್ಳಬೇಕು. ಬದಲಿಗೆ ವಿದ್ಯುತ್ ಸಂಪರ್ಕ ನೀಡುವುದು ಕಾನೂನು ಬಾಹಿರವಾಗಿದ್ದು, ಅಂತಹ ರೈತರ ಮೇಲೆ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಕಾಡ ಬೇಗೂರು ಗ್ರಾಮದ ಮುಖಂಡ ಹೇಮಾಜಿ ನಾಯಕ ಮಾತನಾಡಿ, ಗ್ರಾಮದಲ್ಲಿ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಅಳವಡಿಸಬೇಕು. ವಿದ್ಯುತ್ ಕಂಬಗಳನ್ನು ರಸ್ತೆಯ ಪಕ್ಕದಲ್ಲೇ ಅಳವಡಿಸಿದ್ದು, ಆನೆಗಳು, ಲೋಡ್ ಲಾರಿಗಳು ಬಂದರೆ ತಾಕುತ್ತಿದೆ. ಹೀಗಾಗಿ ಅದನ್ನು ಕೂಡಲೇ ತೆರವುಗೊಳಿಸಬೇಕು ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಇಂಜಿನಿಯರ್ ಮಹೇಶ್ ಕುಮಾರ್, ತಿಂಗಳೊಳಗೆ ಟ್ರಾನ್ಸ್‌ಫಾರ್ಮರ್ ಸರಿಪಡಿಸಲಾಗುವುದು. ಸ್ಥಳಾಂತರಕ್ಕೆ ಕಾಲಾವಕಾಶ ಬೇಕಾಗುತ್ತದೆ. ಆದಷ್ಟು ಬೇಗ ವಿದ್ಯುತ್ ಸಮಸ್ಯೆ ಬಗೆಹರಿಸಲಾಗುವುದು ಎಂದರು. ಸರಗೂರು ಉಪ ವಿಭಾಗದ ಬಿ.ಮಟಕೆರೆ ಶಾಖೆ ಕಿರಿಯ ಇಂಜಿನಿಯರ್ ದೀಪಕ್ ಮಾತನಾಡಿ, ವಿದ್ಯುತ್ ಕಂಬಗಳಿಗೆ ತಾಗುವ ಜಂಗಲ್ ಕಟ್ಟಿಂಗ್ ಕೆಲಸ ಪೂರ್ಣಗೊಳಿಸಬೇಕು. ರೈತರ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಪಂದಿಸಬೇಕು. ಇಲ್ಲವಾದಲ್ಲಿ ಕಟ್ಟುನಿಟ್ಟಿನ ಕ್ರಮವಹಿಸಬೇಕು ಎಂದರು. ಅದಾಲತ್‌ನಲ್ಲಿ ಗ್ರಾಮಸ್ಥರು ಹತ್ತು ಹಲವು ಸಮಸ್ಯೆಗಳನ್ನು ಹೇಳಿಕೊಂಡರು. ಇಲಾಖಾಧಿಕಾರಿಗಳಾದ ಮಂಜು, ಮಾದೇಶ್, ಶೇಖ್ ಅಜೀದ್, ನಾಗಮಲ್ಲೇಶ್ ನಾಯಕ, ಶಿವಕುಮಾರ್ ಸೇರಿದಂತೆ ಗ್ರಾಮಸ್ಥರಿದ್ದರು.

ಫಿಶ್ ಟ್ಯಾಂಕ್ ಉದ್ಘಾಟನೆ

ಹೆಚ್.ಡಿ.ಕೋಟೆ, ಆ.21– ತಾಲೂಕಿನ ಅಣ್ಣೂರು, ಕೋಟೆ, ಎನ್.ಬೆಳ್ತೂರು, ಡಿ.ಬಿ. ಕುಪ್ಪೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಫಿಶ್ ಟ್ಯಾಂಕ್‌ಗಳನ್ನು ಜಿಲ್ಲಾ ರೋಗ ವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಚಿದಂಬರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಈ ಫಿಶ್ ಟ್ಯಾಂಕ್‌ಗಳಿಗೆ ಗಂಬೂಸಿಯ ಮೀನುಗಳನ್ನು ಬಿಡಲಾಗಿದೆ. ಇವು ಲಾರ್ವಗಳನ್ನು ತಿನ್ನುವ ಮೂಲಕ ಸೊಳ್ಳೆ ಉತ್ಪತ್ತಿ ತಡೆಗಟ್ಟುತ್ತವೆ. ಇದರಿಂದ ಡೆಂಗ್ಯೂ ಮತ್ತು ಚಿಕನ್ ಗುನ್ಯಾ ರೋಗವನ್ನೂ ತಡೆಗಟ್ಟಬಹುದು ಎಂದರು.

ತಾಲೂಕು ಆರೋಗ್ಯಾಧಿಕಾರಿ ಡಾ.ರವಿ ಕುಮಾರ್ ಮಾತನಾಡಿ, ಪ್ರತಿದಿನ ಕಡ್ಡಾಯವಾಗಿ ಲಾರ್ವ ಸಮೀಕ್ಷೆ ಮಾಡಬೇಕು ಹಾಗೂ ಸೊಳ್ಳೆಯಿಂದ ಹರಡುವ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಬೇಕು ಎಂದರು.

ಈ ವೇಳೆ ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಸೋಮಣ್ಣ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಮಂಜುನಾಥ್, ನಾಗೇಂದ್ರ ರವಿರಾಜ್, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು, ಸಿಬ್ಬಂದಿ ವರ್ಗ, ಆಶಾ ಕಾರ್ಯಕರ್ತೆಯರು ಹಾಜರಾಗಿದ್ದರು.



ಸಕಾಲದಲ್ಲಿ ಸಾಲ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಿ

ನಂ.ಗೂಡು ಪದವೀಧರರ ಸಹಕಾರ ಸಂಘದ ಅಧ್ಯಕ್ಷ ಜಿ.ಎಸ್.ಶೇಖರಪ್ಪ ಮನವಿ



ನಂಜನಗೂಡು, ಡಿ.21– ಪದವೀಧರರಿಗೆ ಹಣಕಾಸಿನ ನೆರವು ನೀಡಿ ಆರ್ಥಿಕವಾಗಿ ಮೇಲೆತ್ತುವ ಉದ್ದೇಶದಿಂದ ಸಂಘ ಸ್ಥಾಪಿಸಲಾಗಿದ್ದು, ಸದಸ್ಯರು ಸಕಾಲದಲ್ಲಿ ಸಾಲ ಮರುಪಾವತಿಸುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ತಾಲೂಕು ಪದವೀಧರರ ಸಹಕಾರ ಸಂಘದ ಅಧ್ಯಕ್ಷ ಜಿ.ಎಸ್.ಶೇಖರಪ್ಪ ಮನವಿ ಮಾಡಿದರು.


ನಗರದ ಭಾರತ್ ವಿಕಾಸ್ ಶಾಲಾವರಣದಲ್ಲಿ ನಡೆದ ಸಂಘದ 5ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 2017ರಂದು ಪದವೀಧರರ ಅಭಿವೃದ್ಧಿ ದೃಷ್ಟಿಯಿಂದ ಸ್ಥಾಪಿತವಾದ ಸಂಘ ಕೇವಲ 10 ಸಾವಿರದಿಂದ ಪ್ರಾರಂಭಿಸಿ ಈಗ ಸದಸ್ಯರಿಗೆ ಹಂತ ಹಂತವಾಗಿ 25 ಹಾಗೂ ಹಾಲಿ 50 ಸಾವಿರ ಸಾಲ ನೀಡಲಾಗುತ್ತಿದ್ದು, ಪ್ರಸ್ತುತ 75 ಸಾವಿರದವರೆಗೆ ಸಾಲ ಸೌಲಭ್ಯ ನೀಡುತ್ತಿರುವುದಾಗಿ ತಿಳಿಸಿದರು.

ಸಂಘ ಪ್ರತಿವರ್ಷ ಲಾಭದಲ್ಲಿ ಮುನ್ನಡೆಯುತ್ತಿದ್ದು, ಕೊರೊನಾ ನಡುವೆಯೂ 2020–21ನೇ ಸಾಲಿನಲ್ಲಿ ಅತಿ ಹೆಚ್ಚು ಲಾಭ ನಿರೀಕ್ಷಿಸಿದ್ದೇವು. ಅದರಂತೆ 1 ಲಕ್ಷ ರೂ. ನಿವ್ವಳ ಲಾಭ ಬಂದಿದ್ದು ಮುಂದಿನ ದಿನಗಳಲ್ಲಿ ಹೆಚ್ಚಿನ ಲಾಭಾಂಶಕ್ಕಾಗಿ ನಿಗದಿತ ಸಮಯದಲ್ಲಿ ಸಾಲ ಮರುಪಾವತಿ ಮಾಡಲು ಕೋರಿದರು. ಕಾರ್ಯದರ್ಶಿ ಹೆಚ್.ಎಂ.ಕವಿತಾ 2020–21ನೇ ಸಾಲಿನ ವಾರ್ಷಿಕ ಮಹಾಸಭೆ ನಡಾವಳಿ ಸಭೆಗೆ ಮಂಡಿಸಿ, 2022–23ನೇ ಸಾಲಿನ ಆಯವ್ಯಯ ಮಂಡನೆ ಮತ್ತು ಅನುಮೋದನೆ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಪ್ರತಿಭಾವಂತ ಮಕ್ಕಳನ್ನು ಪುರಸ್ಕರಿಸಲಾಯಿತು. ಕಾರ್ಯಕ್ರಮದಲ್ಲಿ ಭಾರತ್ ವಿಕಾಸ್ ಶಾಲೆ ಅಧ್ಯಕ್ಷರು, ಹಿರಿಯ ವಕೀಲ ಬಿ.ಯೋಗೀಶ್, ಶಾಲಾ ಮುಖ್ಯೋಪಾಧ್ಯಾಯಿನಿ ಭಾರತಿ ಮತ್ತು ಶಾಲಾ ವೃಂದ, ಸಂಘದ ಉಪಾಧ್ಯಕ್ಷ ಆರ್.ಶಿವಪ್ರಕಾಶ್, ನಿರ್ದೇಶಕರಾದ ಕೆ.ಟಿ.ಸತ್ಯನಾರಾಯಣಸ್ವಾಮಿ, ಸತೀಶ್.ಹೆಚ್.ಎನ್, ಎಸ್.ಬಿ.ಪರಶಿವಮೂರ್ತಿ, ಎಸ್.ವಿಜಯ್‌ಕುಮಾರ್, ಎಸ್.ಕೆ.ಮಮತಾವಾಣಿ, ಜಿ.ಬಿ.ಶಿಲ್ಪಾ, ದಯಾನಂದ, ಎಸ್.ನಾಗರಾಜು, ನಟರಾಜು, ವಿ.ಶರತ್ ಕುಮಾರ್, ಸಿ.ಕೆ.ರಾಮಚಂದ್ರಪ್ಪ, ಪಿಗ್ಮಿ ಕಲೆಕ್ಟರ್‌ಗಳಾದ ಪ್ರದೀಪ್.ಎಂ., ರವಿ.ಎಂ. ಸದಸ್ಯರು ಹಾಗೂ ಪ್ರಮುಖರು ಭಾಗವಹಿಸಿದ್ದರು.

ಜನಮಾನಸದಲ್ಲಿ ಶಾಶ್ವತ ಸ್ಥಾನ ಗಳಿಸಿದ ನಾಯಕ ಅರಸು

ಕಾಂಗ್ರೆಸ್ ಯುವ ಮುಖಂಡ ಸುನೀಲ್ ಬೋಸ್



ತಿ.ನರಸೀಪುರ, ಆ.21– ದೂರದೃಷ್ಟಿ ರಾಜಕಾರಣಿಯಾಗಿದ್ದ ಅರಸು ಅವರು ರಾಜ್ಯದ ಜನರ ಹಿತ ಕಾಯಲು ಹಲವು ಜನಪ್ರಿಯ ಯೋಜನೆ ಜಾರಿಗೆ ತಂದಿದ್ದರು ಎಂದು ಕಾಂಗ್ರೆಸ್ ಯುವ ಮುಖಂಡ ಸುನೀಲ್ ಬೋಸ್ ತಿಳಿಸಿದರು.

ಹಿಂದುಳಿದ ವರ್ಗಗಳ ಹರಿಕಾರ ಡಿ.ದೇವರಾಜ ಅರಸು ಅವರ 107ನೇ ಜನ್ಮ ದಿನಾಚರಣೆ ಅಂಗವಾಗಿ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅರಸು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಗಣ್ಯ ವ್ಯಕ್ತಿಗಳನ್ನು ಒಂದು ವರ್ಗಕ್ಕೆ ಸೀಮಿತಗೊಳಿಸುತ್ತಿರುವುದು ಸರಿಯಲ್ಲ. ಡಿ.ದೇವರಾಜ ಅರಸು ತಮ್ಮ ಅಧಿಕಾರಾ ವಧಿಯಲ್ಲಿ ರಾಜ್ಯದ ಎಲ್ಲಾ ವರ್ಗದ ಹಿತಕ್ಕಾಗಿ ಹತ್ತು ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಹಾಗಾಗಿ ಅವರ ಸೇವೆ ಪರಿಗಣಿಸಿ ಅವರನ್ನು ಸಾರ್ವತ್ರಿಕ ನಾಯಕ ಎಂದು ಸಮಾಜದ ಎಲ್ಲ ವರ್ಗದ ಜನತೆ ಒಪ್ಪಿಕೊಳ್ಳಲು ಸಲಹೆ ನೀಡಿದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಚೆನ್ನಕೇಶವ, ಪುರಸಭಾಧ್ಯಕ್ಷ ಎಸ್.ಮದನ್ ರಾಜ್, ಸದಸ್ಯ ಬಾದಾಮಿ ಮಂಜು, ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಪಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಹೆಮ್ಮಿಗೆ ಗ್ರಾಪಂ ಮಾಜಿ ಅಧ್ಯಕ್ಷ ಶೇಷಾದ್ರಿ, ಡೈರಿ ಕಾರ್ಯದರ್ಶಿ ಸೋಮಣ್ಣ, ಉಪ್ಪಾರ ಮಹಾಸಭಾ ಕಾರ್ಯದರ್ಶಿ ಸಿದ್ದಶೆಟ್ಟಿ, ಗ್ರಾಪಂ ಮಾಜಿ ಸದಸ್ಯ ಕಲಿಯೂರು ಶಿವಣ್ಣ ಮತ್ತಿತರರಿದ್ದರು.

ಹಾರಂಗಿ ಜಲಾಶಯಕ್ಕೆ ಜಲಸಂಪನ್ಮೂಲ ಸಚಿವರ ಭೇಟಿ

130 ಕೋಟಿ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿಗೆ ಸದ್ಯದಲ್ಲಿಯೇ ಚಾಲನೆ



ಕುಶಾಲನಗರ, ಆ.21– ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹಾರಂಗಿ ಜಲಾಶಯಕ್ಕೆ ಭಾನುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ವಿವಿಧ ಜಿಲ್ಲೆಗಳಲ್ಲಿ ಉಂಟಾಗಿರುವ ಮಳೆಹಾನಿ ಪರಿಶೀಲನೆ ಸಂಬಂಧ ಹಮ್ಮಿಕೊಂಡಿರುವ ಪ್ರವಾಸ ಕಾರ್ಯಕ್ರಮದ ಅಂಗವಾಗಿ ಹಾರಂಗಿ ಜಲಾಶಯಕ್ಕೆ ಭೇಟಿ ನೀಡಿ ಅಣೆಕಟ್ಟೆ ಪರಿಶೀಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 130 ಕೋಟಿ ರೂ. ವೆಚ್ಚದಲ್ಲಿ ಹೂಳೆತ್ತುವ ಮತ್ತು ನದಿ ಪುನಶ್ಚೇತನ ಕಾರ್ಯಕ್ರಮಕ್ಕೆ ಸದ್ಯದಲ್ಲಿಯೇ ಚಾಲನೆ ನೀಡಲಾಗುವುದು. ಜನರ ಜೀವನಾಡಿಯಾಗಿರುವ ನದಿಗಳು ಕಲುಷಿತಗೊಳ್ಳದಂತೆ ಮತ್ತು ನದಿ, ಕೆರೆಗಳ ಒತ್ತುವರಿ ತಡೆಗಟ್ಟಲು ಜನಜಾಗೃತಿ ಮೂಡಿಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ಅವರ ನದಿ ಹಬ್ಬ ಚಿಂತನೆ ಕೋವಿಡ್ ಕಾರಣದಿಂದ ಸ್ಥಗಿತಗೊಂಡಿತ್ತು. ಇದಕ್ಕೆ ಮುಂದಿನ ದಿನಗಳಲ್ಲಿ ಚಾಲನೆ ನೀಡಲಾಗುವುದು ಎಂದರು.

ಮೊಟ್ಟೆ ಎಸೆತ ಪ್ರಕರಣದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ನಮ್ಮ ಪೂರ್ವಜರು ನಮಗೆ ಹೇಳಿಕೊಟ್ಟ ಸುಸಂಸ್ಕೃತ ಮೌಲ್ಯಗಳನ್ನು ನಾವು ತಪ್ಪದೆ ಪಾಲಿಸಬೇಕಿದೆ. ಸಮಾಜದ ಸ್ವಾಸ್ಥ್ಯ ಕೆಡಿಸುವಂತಹ ಯಾವುದೇ ಪ್ರಕರಣಕ್ಕೆ ಆಸ್ಪದ ನೀಡಬಾರದು ಎಂದರು.

ಇದೇ ಸಂದರ್ಭ ಹಾರಂಗಿ ಅಣೆಕಟ್ಟೆ ಸಂಪರ್ಕ ಕಲ್ಪಿಸುವ ರಸ್ತೆಗಳ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಕೂಡುಮಂಗಳೂರು ಗ್ರಾಪಂ ಉಪಾಧ್ಯಕ್ಷ ಭಾಸ್ಕರ್ ನಾಯಕ್ ನೀಡಿದ ಮನವಿಗೆ ಸ್ಪಂದಿಸಿದ ಅವರು, ಕೂಡಲೆ ಕಾಮಗಾರಿ ಕೈಗೊಳ್ಳುವ ಭರವಸೆ ನೀಡಿದರು. ಈ ಸಂದರ್ಭ ಪಿರಿಯಾಪಟ್ಟಣ ಶಾಸಕ ಮಹದೇವ್ ಮತ್ತಿತರರು ಇದ್ದರು.

ಸ್ವಚ್ಛ ಭಾರತಕ್ಕೆ ನಾಂದಿ ಹಾಡಿದ ಗಾಂಧಿ ಪ್ರತಿಮೆ ಬಳಿಯೇ ಕಸದ ವಾಹನಗಳ ನಿಲುಗಡೆ

ಮಹಾತ್ಮ ಗಾಂಧಿಗೆ ಅಗೌರವ ತೋರಿದ ನಗರಸಭೆ

● ಕಸದ ರಾಶಿ, ಅಶುಚಿತ್ವ, ಕೆಸರುಮಯ ವಾತಾವರಣ



ಮಡಿಕೇರಿ,ಆ.21– ಮಡಿಕೇರಿ ನಗರದ ಗಾಂಧಿ ಮಂಟಪದ ಆವರಣದಲ್ಲಿ ತ್ಯಾಜ್ಯ ವಿಲೇವಾರಿಯ ವಾಹನಗಳನ್ನು ನಿಲುಗಡೆಗೊಳಿಸುವ ಮೂಲಕ ನಗರಸಭೆ ಮಹಾತ್ಮ ಗಾಂಧಿಗೆ ಅಗೌರವ ತೋರಿದೆ ಎಂದು ಕೊಡಗು ಜಿಲ್ಲಾ ಸರ್ವೋದಯ ಸಮಿತಿ ಅಸಮಾಧಾನ ವ್ಯಕ್ತಪಡಿಸಿದೆ.

ಗಾಂಧಿ ಮಂಟಪಕ್ಕೆ ಭೇಟಿ ನೀಡಿದ್ದ ಸರ್ವೋದಯ ಸಮಿತಿಯ ಅಧ್ಯಕ್ಷ ಅಂಬೆಕಲ್ಲು ಕುಶಾಲಪ್ಪ ಅಲ್ಲಿನ ಅಶುಚಿತ್ವದ ವಾತಾವರಣಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಶೌಚಾಲಯಗಳ ತ್ಯಾಜ್ಯ ವಿಲೇವಾರಿ ಮಾಡುವ ವಾಹನ ಸಹಿತ ಕಸ ಸಾಗಿಸುವ ಎಲ್ಲಾ ವಾಹನಗಳನ್ನು ಗಾಂಧಿ ಮಂಟಪದ ಆವರಣದಲ್ಲಿ ನಿಲ್ಲಿಸಲಾಗಿದೆ. ಈ ಪ್ರದೇಶ ಕೆಸರುಮಯವಾಗಿದ್ದು, ಗಾಂಧಿ ಪ್ರತಿಮೆಯ ಬಳಿಯೇ ಸ್ವಚ್ಛತೆಗೆ ಆದ್ಯತೆ ನೀಡದೆ ನಿರ್ಲಕ್ಷಿಸಲಾಗಿದೆ. ಗಾಂಧಿ ಮಂಟಪವನ್ನು ವೀಕ್ಷಿಸಲು ಬರುವ ಪ್ರವಾಸಿಗರು ಕಸದ ವಾಹನಗಳನ್ನು ನೋಡುವ ಪರಿಸ್ಥಿತಿ ಇದೆ.

ಸ್ವಚ್ಛ ಭಾರತಕ್ಕೆ ನಾಂದಿ ಹಾಡಿದ ಮಹಾತ್ಮ ಗಾಂಧಿ ಅವರ ಪ್ರತಿಮೆಯ ಬಳಿಯೇ ತ್ಯಾಜ್ಯ ವಿಲೇವಾರಿ ಮಾಡುವ ವಾಹನಗಳನ್ನು ನಿಲುಗಡೆ ಮಾಡುವ ಮೂಲಕ ನಗರಸಭೆ ಗಾಂಧಿ ಸಂದೇಶವನ್ನು ಕುಹಕ ಮಾಡಿದೆ ಎಂದು ಕುಶಾಲಪ್ಪ ಆರೋಪಿಸಿದರು.

ಗಾಂಧಿ ಮಂಟಪದ ಅಭಿವೃದ್ಧಿಗಾಗಿ ಸರ್ಕಾರ ಈ ಜಾಗವನ್ನು ಮೀಸಲಿಟ್ಟು ಹಣವನ್ನು ಕೂಡ ಬಿಡುಗಡೆ ಮಾಡಿದೆ. ಯೋಜನೆಯ ಅನುಷ್ಠಾನಕ್ಕಾಗಿ ಸರ್ವೋದಯ ಸಮಿತಿ ಅವಿರತ ಶ್ರಮ ವಹಿಸಿದೆ. ಆದರೆ ಈಗ ಈ ಪ್ರದೇಶವನ್ನು ತ್ಯಾಜ್ಯ ವಿಲೇವಾರಿ ಮಾಡುವ ವಾಹನಗಳ ನಿಲುಗಡೆಗೆ ಬಳಸಿಕೊಳ್ಳಲಾಗಿದೆ. ತಕ್ಷಣ ನಗರಸಭೆ ವಾಹನಗಳನ್ನು ತೆರವುಗೊಳಿಸಿದೆ ಸ್ವಚ್ಛತೆಯನ್ನು ಕಾಪಾಡದಿದ್ದಲ್ಲಿ ವಾಹನಗಳ ಸಹಿತ ಗಾಂಧಿ ಮಂಟಪದ ಆವರಣಕ್ಕೆ ಬೀಗ ಜಡಿಯುವುದಾಗಿ ಅವರು ಎಚ್ಚರಿಕೆ ನೀಡಿದ್ದಾರೆ.

ವಿಭಜನೆಗೊಂಡ ಭರತಖಂಡ ಒಂದುಗೂಡಿಸಲು ನಿರಂತರ ಪ್ರಯತ್ನ

ಅಖಂಡ ಭಾರತ ಸಂಕಲ್ಪ ದಿನ ಕಾರ್ಯಕ್ರಮದಲ್ಲಿ ಚೈತ್ರ ಕುಂದಾಪುರ ಹೇಳಿಕೆ



ವಿರಾಜಪೇಟೆ, ಆ.21– ಭರತಖಂಡದ ಮೇಲೆ ಸಾವಿರಾರು ಬಾರಿ ದಾಳಿ ನಡೆದಿದೆ. ಸ್ವಾತಂತ್ರ್ಯದ ಹೆಸರಿನಲ್ಲಿ ವಿಶಾಲವಾಗಿದ್ದ ಭರತಖಂಡವು ನಿರಂತರ ದಾಳಿಯಿಂದ ಛಿದ್ರಗೊಂಡು ಉಪ ಖಂಡಗಳಾಗಿ ವಿಭಜನೆಗೊಂಡಿತು. ವಿಭಜನೆಗೊಂಡ ಭರತ ವರ್ಷವನ್ನು ಒಂದುಗೂಡಿಸುವ ಪ್ರಯತ್ನ ನಿರಂತರವಾಗಿ ನಡೆಯಬೇಕು ಎಂದು ಯುವ ವಾಗ್ಮಿ ಚೈತ್ರ ಕುಂದಾಪುರ ತಿಳಿಸಿದ್ದಾರೆ.

ವಿಶ್ವ ಹಿಂದೂ ಪರಿಷತ್, ಬಜರಂಗದಳ ವಿರಾಜಪೇಟೆ ಪ್ರಖಂಡದ ವತಿಯಿಂದ ನಗರದ ಮಹಿಳಾ ಸಮಾಜ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಖಂಡ ಭಾರತ ಸಂಕಲ್ಪ ದಿನ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಚೈತ್ರ ಅವರು ಅಖಂಡ ಹಿಂದೂ ರಾಷ್ಟ್ರವಾಗಿದ್ದ ಭರತಖಂಡವು ಪರಕೀಯರ ನಿರಂತರ ದಾಳಿಗೆ ಒಳಗಾಗಿ ಛಿದ್ರಗೊಂಡು ವಿಭಜನೆಗೊಂಡಿತು ಎಂದರು.

ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ್, ನೇಪಾಳ್, ಅಫ್ಘಾನಿಸ್ತಾನ್, ಟಿಬೇಟ್, ಸಿಂದ್ ಪ್ರಾಂತ, ಶ್ರೀಲಂಕಾ, ಚೀನಾದಂತಹ ದೇಶವು ಭಾರತ ಮಾತೆಯ ಒಡಲಿನಲ್ಲಿತ್ತು ಇಂದಿಗೂ ವಿಭಜನೆಗೊಂಡ ರಾಷ್ಟ್ರಗಳಲ್ಲಿ ಹಿಂದೂ ದೇವಾನುದೇವತೆಗಳ ಮಠ ಮಂದಿರಗಳ ಕುರುಹುಗಳು ಕಾಣಸಿಗುತ್ತವೆ. ದೇಶದ ಮಹೋನ್ನತವಾದ ಗ್ರಂಥಗಳಾದ ರಾಮಾಯಣ ಮತ್ತು ಮಹಾಭಾರತದ ಕಥೆಗಳಲ್ಲಿ ಈ ದೇಶಗಳ ಪೂರ್ವ ನಾಮಗಳು ಉಲ್ಲೇಖವಾಗಿದೆ. ಪ್ರಸ್ತುತ ಸಮಾಜಕ್ಕೆ ಗ್ರಂಥಗಳ ಬಗ್ಗೆ ಧಾರ್ಮಿಕ ಶ್ರದ್ಧೆ,ಭಕ್ತಿ ಮನದಲ್ಲಿ ಮೂಡುವಂತೆ ಜಾಗೃತಗೊಳಿಸಬೇಕಾಗಿದೆ ಎಂದು ಅವರು ಹೇಳಿದರು.

ಬಜರಂಗದಳ ತಾಲೂಕು ಸಂಯೋಜಕ್ ಐನಂಡ ಕುಶಾಲಪ್ಪ ಪ್ರಾಸ್ತಾವಿಕ ವಾಗಿ ಮಾತನಾಡಿದರು. ಕೊಡಗು ಜಿಲ್ಲಾ ಮಾಜಿ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ಚೆಂದ್ರಿಮಾಡ ನಂಜಪ್ಪ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಬಜರಂಗದಳ ಜಿಲ್ಲಾ ಸಹ ಸಂಯೋಜಕ್ ವಿವೇಕ್ ರೈ ಉಪಸ್ಥಿತರಿದ್ದರು.

ವಿಹಿಪ ತಾಲೂಕು ಅಧ್ಯಕ್ಷ ಬಿ.ಎಂ.ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿಭಜನೆಗೊಂಡ ಅಖಂಡ ಭಾರತವನ್ನು ಒಂದಾಗಿಸುವ ಪ್ರಯತ್ನ ನಮ್ಮದಾಗಬೇಕು. ಈ ನಿಟ್ಟಿನಲ್ಲಿ ಹಿಂದೂ ಸಮಾಜವು ಕಾರ್ಯಕ್ರಮವನ್ನು ಹಮ್ಮಿಕೊಂಡು ಬಂದಿದೆ. ಮತೀಯ ಶಕ್ತಿಗಳನ್ನು ಧಮನ ಮಾಡಲು ಹಿಂದೂ ಸಮಾಜ ಜಾಗೃತವಾಗಬೇಕು. ಸದೃಢ, ಸುಭದ್ರ ಬಲಿಷ್ಠ ಭಾರತ ನಿರ್ಮಾಣ ಮಾಡುವಲ್ಲಿ ಸಮಾಜವು ಕಟಿಬದ್ಧರಾಗಬೇಕು ಎಂಬುದು ದಿನದ ಮಹತ್ವವಾಗಿದೆ ಎಂದು ಹೇಳಿದರು.

ಬಜರಂಗದಳ ನಗರ ಸಂಯೋಜಕ್ ಕಿಶನ್, ಸಜನ್ ಗಣಪತಿ, ವರುಣ್, ದುರ್ಗಾವಾಹಿನಿ ಜಿಲ್ಲಾ ಸಂಯೋಜಕಿ ಅಂಬಿಕಾ ಉತ್ತಪ್ಪ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಕಾರ್ಯದರ್ಶಿ ಮದಿಯೊಕ್ಕಡ ರಮೇಶ್, ತಾಲೂಕು ಕಾರ್ಯದರ್ಶಿ ಯತೀಶ್, ನಗರ ಅಧ್ಯಕ್ಷ ಲೋಕೇಶ್ ಆಚಾರ್ಯ, ಕಾರ್ಯದರ್ಶಿ ಗಣೇಶ್, ಸಹ ಕಾರ್ಯದರ್ಶಿ ಭಾಸ್ಕರ್, ಸೇರಿದಂತೆ ಭಜರಂಗದಳ ಮತ್ತು ವಿಶ್ವ ಹಿಂದೂ ಪರಿಷತ್‌ನ ಕಾರ್ಯಕರ್ತರು ಉಪಸ್ಥಿತರಿದ್ದರು. ಹಿಂದೂ ಪರ ಸಂಘಟನೆಗಳ ಸದಸ್ಯರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು.

ನಾಳೆ ದೇಶಭಕ್ತಿ ಗೀತೆ ಸ್ಪರ್ಧೆ

ಮಡಿಕೇರಿ, ಆ.21– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲೂಕು ಬಾಲಭವನ ಸಮಿತಿ, ಶಿಶು ಅಭಿವೃದ್ಧಿ ಯೋಜನೆ ವತಿಯಿಂದ ಆ.23 ರಂದು ಬೆಳಗ್ಗೆ 11 ಗಂಟೆಗೆ ನಾಪೋಕ್ಲು ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ 5–8, 9–12, 13–16 ವರ್ಷದವರೆಗೆ ಮೂರು ಗುಂಪುಗಳಲ್ಲಿ ದೇಶಭಕ್ತಿ ಗೀತೆ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ: ನೀಚ ರಾಜಕಾರಣ



ವಿರಾಜಪೇಟೆ, ಆ.21– ವಿರೋಧ ಪಕ್ಷದ ನಾಯಕ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಡಗು ಜಿಲ್ಲೆಗೆ ಮಳೆ ಹಾನಿ ಪ್ರದೇಶಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮೊಟ್ಟೆ ಎಸೆದ ಪ್ರಕರಣ ಅತ್ಯಂತ ನೀಚ ರಾಜಕಾರಣ ಎಂದು ವಿರಾಜಪೇಟೆ ತಾಲೂಕು ಜೆಡಿಎಸ್ ಅಧ್ಯಕ್ಷ ಪಿ.ಎ. ಮಂಜುನಾಥ್ ವಾಗ್ದಾಳಿ ನಡೆಸಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟನೆ ಎಲ್ಲರ ಹಕ್ಕು ಆದರೆ ಈ ರೀತಿ ಮೊಟ್ಟೆ ಎಸೆಯುವುದು ಅತ್ಯಂತ ಅವಮಾನಕರ, ಕೊಡಗಿನಲ್ಲಿ ನಿರುದ್ಯೋಗ ಸಮಸ್ಯೆ, ವಿದ್ಯಾರ್ಥಿಗಳಿಗೆ ಸರಿಯಾದ ವಿದ್ಯಾನಿಲಯಗಳಿಲ್ಲ, ರಸ್ತೆಗಳೆಲ್ಲಾ ಗುಂಡಿಗಳಿಂದ ಕೂಡಿವೆ. ರೈತರ ಸಮಸ್ಯೆಗಳು, ಆನೆ–ಮಾನವ ಸಂಘರ್ಷ, ಇದ್ಯಾವುದಕ್ಕೂ ಸರ್ಕಾರ ಶಾಶ್ವತ ಪರಿಹಾರ ರೂಪಿಸಿಲ್ಲ. ಎರಡು ರಾಷ್ಟ್ರೀಯ ಪಕ್ಷಗಳು ಕೆಸರು ಎರೆಚಾಟದಿಂದ ಮುಂದಿನ ಚುನಾವಣೆಯಲ್ಲಿ ಮತದಾರರು ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಎರಡು ಪಕ್ಷಗಳ ಕಿತ್ತಾಟದಿಂದ ಪೊಲೀಸ್ ಇಲಾಖೆಯನ್ನು ಹೊಣೆಮಾಡಬಾರದು. ಕೊಡಗಿನಲ್ಲಿ ಪ್ರಕೃತಿ ವಿಕೋಪ ಆದಾಗ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಸಂದರ್ಭ ರೈತರ ಸಾಲ ಮನ್ನ ಮಾಡಿದ್ದರು. ಯಾವುದೇ ಪಕ್ಷದ ಜನಪ್ರತಿನಿಧಿಗಳು ಬರಲಿ ಕೊಡಗಿನ ಅಭಿವೃದ್ಧಿಗೆ ಚಿಂತಿಸಬೇಕಾಗಿದೆ ಎಂದರು.

'ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆದ ಸಂಪತ್ ನನ್ನ ಬೆಂಬಲಿಗನಲ್ಲ'



ಮಡಿಕೇರಿ,ಆ.21– ವಿಪಕ್ಷನಾಯಕ ಸಿದ್ದರಾಮಯ್ಯ ಕಾರಿನ ಮೇಲೆ ಗುಡ್ಡೆಹೊಸೂರಿನಲ್ಲಿ ಮೊಟ್ಟೆ ಎಸೆದ ಸಂಪತ್ ನನ್ನ ಬೆಂಬಲಿಗನಲ್ಲ, ಆತ ಕಾಂಗ್ರೆಸ್ ಕಾರ್ಯಕರ್ತನೂ ಅಲ್ಲ ಎಂದು ಮಾಜಿ ಸಚಿವ ಬಿ.ಎ.ಜೀವಿಜಯ ಸ್ಪಷ್ಟಪಡಿಸಿದ್ದಾರೆ.

ಮೊಟ್ಟೆ ಎಸೆದ ಆರೋಪಿ ನಿನ್ನೆ ದಿನ ಕುಶಾಲನಗರದಲ್ಲಿ ತಾನು ಜೀವಿಜಯ ಅವರ ಬೆಂಬಲಿಗ ಎಂದು ಸುದ್ದಿಗಾರರಿಗೆ ಹೇಳಿಕೆ ನೀಡಿದ್ದಲ್ಲದೇ, ಕಾಂಗ್ರೆಸ್ ಕಾರ್ಯಕರ್ತ ಎಂದು ಹೇಳಿಕೊಂಡಿದ್ದ.

ಈ ಕುರಿತು ಕೊಡ್ಲಿಪೇಟೆಯಲ್ಲಿ ಸುದ್ದಿಗಾರರೊಂದಿಗೆ ಪ್ರತಿಕ್ರಿಯಿಸಿದ ಬಿ.ಎ. ಜೀವಿಜಯ, ಸಂಪತ್ ಕಾಂಗ್ರೆಸ್ ಪಕ್ಷದ ಕಾರ್ಯಕರ್ತನಲ್ಲ, ನಾನು ಈ ಹಿಂದೆ ಜೆಡಿಎಸ್‌ನಲ್ಲಿದ್ದಾಗಲೂ ಅವನನ್ನು ನೋಡಿಯೇ ಇಲ್ಲ ಎಂದು ಹೇಳಿದ್ದಾರೆ. ಅವನು ಶಾಸಕ ಅಪ್ಪಚ್ಚು ರಂಜನ್ ಜೊತೆ ಇರುವ ಹಲವಾರು ಫೋಟೋ ಇದೆ, ಆದರೆ ನನ್ನ ಜೊತೆ ಇರುವ ಒಂದು ಫೋಟೋ ಇದೆಯಾ ಎಂದು ಪ್ರಶ್ನಿಸಿದ್ದಾರೆ.

ಅವನಿಗೆ ಗುತ್ತಿಗೆ ಕೆಲಸವನ್ನು ನೀಡುತ್ತಿರುವುದು ಯಾರು ಎಂದು ಪ್ರಶ್ನಿಸಿರುವ ಜೀವಿಜಯ ಅವರು, ಅವನ ತಂದೆಯನ್ನು ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸೋಮವಾರಪೇಟೆ ಪಟ್ಟಣ ಪಂಚಾಯತ್‌ನ ನಾಮ ನಿರ್ದೇಶನ ಸದಸ್ಯನಾಗಿ ಮಾಡಲಾಗಿತ್ತು. ಶಾಸಕ ಅಪ್ಪಚ್ಚುರಂಜನ್ ತನ್ನ ತಪ್ಪನ್ನು ಮರೆಮಾಚಲು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಬಲಿಷ್ಠವಾಗುತ್ತಿದೆ. ಇದರಿಂದ ಹತಾಶರಾಗಿರುವ ಬಿಜೆಪಿಯವರು ಜಾತಿಗಳ ಮಧ್ಯೆ ಒಡೆದು ಆಳುವ ನೀತಿ ಮಾಡುತ್ತಿದ್ದಾರೆ ಎಂದು ಜೀವಿಜಯ ಆರೋಪಿಸಿದ್ದಾರೆ.

ತಲಕಾವೇರಿ–ಇಗ್ಗುತಪ್ಪ ದೇವಸ್ಥಾನದಲ್ಲಿ ಸಾಮೂಹಿಕ ಪೂಜೆ

ಶ್ರೀಮಂಗಲ, ಆ.21– 'ತಿಂಗಕೊರ್ ಮೊಟ್ಟ್ ತಲಕಾವೇರಿ' ಸಂಕಲ್ಪದಂತೆ 20 ನೇ ತಿಂಗಳ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಭಾಗದಿಂದ ಸಾಂಪ್ರದಾಯಿಕ ಉಡುಪಿನಲ್ಲಿ ಆಗಮಿಸಿದ್ದ ಕೊಡವರು ತಲಕಾವೇರಿಯಲ್ಲಿ ಕಾವೇರಿ ಮಾತೆ, ಅಗಸ್ತ್ಯ ದೇವಸ್ಥಾನ, ಭಾಗಮಂಡಲದಲ್ಲಿ ಭಗಂಡೇಶ್ವರ ಮತ್ತು ಕಕ್ಕಬ್ಬೆಯಲ್ಲಿ ಪಾಡಿ ಇಗ್ಗುತಪ್ಪ ದೇವಸ್ಥಾನದಲ್ಲಿ ಸಾಮೂಹಿಕವಾಗಿ ಭಾನುವಾರ ಪೂಜೆ ಸಲ್ಲಿಸಿದರು.



ಸರ್ಕಾರಿ ಸೌಲಭ್ಯ, ಕೆಲಸ ಕಾರ್ಯಗಳಿಗೆ ವಿಳಂಬ ಸಲ್ಲದು

ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ



ಚಾಮರಾಜನಗರ, ಆ.21–ಸರ್ಕಾರಿ ಸೌಲಭ್ಯ ಕೆಲಸ ಕಾರ್ಯಗಳಿಗೆ ವಿಳಂಬ ಸಲ್ಲದು ಎಂದು ಕರ್ನಾಟಕ ಉಪಲೋಕಾಯುಕ್ತ ನ್ಯಾಯಮೂರ್ತಿ ಕೆಎನ್.ಫಣೀಂದ್ರ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜೆ.ಎಚ್.ಪಟೇಲ್ ಸಭಾಂಗಣದಲ್ಲಿಂದು ಸಾರ್ವಜನಿಕರ ಅಹವಾಲು ಕುಂದು ಕೊರತೆಗಳ ವಿಚಾರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಸರ್ಕಾರದಿಂದ ಸಾರ್ವಜನಿಕರಿಗೆ ಸಿಗಬೇಕಾದ ಸವಲತ್ತುಗಳು ಸೌಲಭ್ಯಗಳನ್ನು ಒದಗಿಸುವುದು ಅಧಿಕಾರಿಗಳ ಕರ್ತವ್ಯವಾಗಿದೆ. ಇದಕ್ಕಾಗಿಯೇ ಜನರಿಂದ ಅರ್ಜಿ ಅಹವಾಲುಗಳನ್ನು ಸ್ವೀಕರಿಸಿ ಅವರಿಗೆ ಆಗಬೇಕಿರುವ ಕೆಲಸವನ್ನು ಮಾಡಿಕೊಡುವಂತೆ ನೋಡಿಕೊಳ್ಳಲಾಗುತ್ತದೆ. ಯಾವುದೇ ಸವಲತ್ತುಗಳು, ಆಗಬೇಕಿರುವ ಕೆಲಸಗಳು ಸರ್ಕಾರಿ ಅಧಿಕಾರಿಗಳಿಂದ ವಿಳಂಬವಾದರೆ ಏಕೆ ವಿಳಂಬವಾಗಿದೆ? ಎಲ್ಲಿ ಲೋಪವಾಗಿದೆ ಎಂಬ ಬಗ್ಗೆ ವಿಚಾರಣೆ ನಡೆಸಿ, ಕ್ರಮಕ್ಕೆ ಶಿಫಾರಸು ಮಾಡುವುದು ಸಹ ಲೋಕಾಯುಕ್ತದ ಪ್ರಮುಖ ಕೆಲಸಗಳಲ್ಲಿ ಒಂದು ಎಂದರು.

ಯಾವುದೇ ಯೋಜನೆಗಳು ಜನರ ಒಳಿತಿಗಾಗಿ ಅನುಷ್ಠಾನವಾಗಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಯಾವುದೇ ಲೋಪ ಎಸಗಿದಾಗ, ದಕ್ಷತೆಯಿಂದ ಕೆಲಸವಾಗದಿದ್ದಾಗ, ವಿಳಂಬ ಧೋರಣೆ ಅನುಸರಿಸಿದಾಗ ಆಗಿರುವ ದುರ್ನಡತೆ, ಲೋಪಗಳನ್ನು ಪರಿಗಣಿಸಿ ಮುಂದಿನ ಶಿಸ್ತು ಕ್ರಮಕ್ಕೆ ಲೋಕಾಯುಕ್ತ ಮುಂದಾಗಲಿದೆ ಎಂದು ಎಚ್ಚರಿಸಿದರು.

ಜನರಿಂದ ಅರ್ಜಿ ಸ್ವೀಕಾರ: ನಗರದ ಜೆಹೆಚ್. ಪಟೇಲ್ ಸಭಾಂಗಣದಲ್ಲಿಂದು ಬೆಳಗ್ಗೆ 10 ಗಂಟೆಗೆ ಕಾರ್ಯಕ್ರಮ ಆರಂಭಗೊಂಡಿತು. ಉದ್ಘಾಟನಾ ಕಾರ್ಯಕ್ರಮದ ಬಳಿಕ ಸಾರ್ವಜನಿಕರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿ ಅರ್ಜಿಗಳನ್ನು ಸಲ್ಲಿಸಿದರು. ಕುಂದು ಕೊರತೆಗಳನ್ನು ಉಪಲೋಕಾಯುಕ್ತರ ಬಳಿ ನಿವೇದಿಸಿಕೊಂಡರು. ಮಧ್ಯಾಹ್ನ 2.15 ಗಂಟೆಯವರೆಗೂ ಸತತವಾಗಿ ಜನರಿಂದ ಅರ್ಜಿಗಳನ್ನು ಸ್ವೀಕರಿಸಲಾಯಿತು. ಮಧ್ಯಾಹ್ನ 3 ಗಂಟೆಗೆ ಮತ್ತೆ ಅರ್ಜಿ ಸ್ವೀಕಾರ ಪ್ರಕ್ರಿಯೆ ಮುಂದುವರೆಯಿತು. ಜಿಲ್ಲೆಯ ವಿವಿಧ ಭಾಗಗಳಿಂದ ಬಂದಿದ್ದ ಜನರು ಸಮಸ್ಯೆಗಳ ಕುರಿತು ಅರ್ಜಿಗಳನ್ನು ಸಲ್ಲಿಸಿದರು. ಎಲ್ಲರಿಂದ ಅರ್ಜಿ ಸ್ವೀಕರಿಸಿದ ಬಳಿಕ ಉಪಲೋಕಾಯುಕ್ತರು ಸಮರ್ಪಕ ದಾಖಲೆಗಳ ಅರ್ಜಿ ಪ್ರತಿಯನ್ನು ಸಂಬಂಧಿಸಿದ ಅಧಿಕಾರಿಗಳಿಗೂ ತಲುಪಿಸಿದ್ದೇವೆ. 15 ದಿನದೊಳಗಾಗಿ ವರದಿ ನೀಡುವಂತೆ ಸೂಚಿಸಲಾಗಿದೆ. ಅಧಿಕಾರಿಗಳಿಂದ ತಪ್ಪಾಗಿದ್ದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದರು.

ಕರ್ನಾಟಕ ಲೋಕಾಯುಕ್ತ ಉಪ ನಿಬಂಧಕರಾದ ಚೆನ್ನಕೇಶವರೆಡ್ಡಿ, ಇಬ್ರಾಹಿಂ ಮುಜಾವರ್, ಲೋಕಾಯುಕ್ತದ ಸರ್ಕಾರಿ ಅಭಿಯೋಜಕ ನಾರಾಯಣ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ, ಡಿಸಿ ಚಾರುಲತಾ ಸೋಮಲ್, ಜಿಪಂ ಸಿಇಒ ಕೆ.ಎಂ.ಗಾಯತ್ರಿ, ಎಸ್ಪಿ ಟಿ.ಪಿ.ಶಿವಕುಮಾರ್, ಕರ್ನಾಟಕ ಲೋಕಾಯುಕ್ತ ಮೈಸೂರು ಪೊಲೀಸ್ ವಿಭಾಗದ ಅಧೀಕ್ಷಕ ಎಸ್.ಸುರೇಶ್ ಬಾಬು, ಚಾಮರಾಜನಗರ ಲೋಕಾಯುಕ್ತ ಡಿವೈಎಸ್‌ಪಿ ಸಣ್ಣ ತಮ್ಮಪ್ಪ ಒಡೆಯರ್, ಎಡಿಸಿ ಎಸ್. ಕಾತ್ಯಾಯಿನಿದೇವಿ ಕಾರ್ಯಕ್ರಮದಲ್ಲಿದ್ದರು.

96 ದೂರು ಸ್ವೀಕಾರ

ಚಾಮರಾಜನಗರ: ಕರ್ನಾಟಕದ ಉಪಲೋಕಾಯುಕ್ತ ನ್ಯಾಯಮೂರ್ತಿ ಅವರು ಕುಂದು ಕೊರತೆ ಅಹವಾಲು ಆಲಿಕೆ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ 96 ದೂರು ಸ್ವೀಕರಿಸಿದರು.

ಸ್ವೀಕರಿಸಲಾದ ಅರ್ಜಿಗಳ ಪೈಕಿ ಸ್ಥಳದಲ್ಲೇ 38 ದೂರು ಪ್ರಕರಣಗಳನ್ನು ವಿಲೇವಾರಿ ಮಾಡಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಗದಿತ ಕಾಲಾವಕಾಶ ನೀಡಿ ಆ ಸಮಯದೊಳಗೆ ಸಾರ್ವಜನಿಕರ ಕೆಲಸಗಳನ್ನು ಮಾಡಿಕೊಡಬೇಕೆಂದು ಉಪಲೋಕಾಯುಕ್ತರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ನಮೂನೆ 1 ಮತ್ತು 2ರ ರೀತ್ಯಾ 46 ದೂರುಗಳನ್ನು ದಾಖಲಿಸಿಕೊಳ್ಳಲಾಗಿದೆ. ಚಾಮರಾಜನಗರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ 9 ಅರ್ಜಿಗಳನ್ನು ಮುಂದಿನ ಕ್ರಮಕ್ಕಾಗಿ ವರ್ಗಾಹಿಸಲಾಗಿದೆ. ಸ್ವೀಕರಿಸಲಾದ ಇತರೆ 3 ದೂರುಗಳಿಗೆ ಸಂಬಂಧಿಸಿದಂತೆ ಅಧಿಕಾರಿಗೆ ಕ್ರಮಕ್ಕಾಗಿ ಸೂಕ್ತ ಮಾರ್ಗದರ್ಶನ ನೀಡಲಾಗಿದೆ.

ಸಿದ್ದರಾಮಯ್ಯ ಕಾರಿಗೆ ಮೊಟ್ಟೆ ಎಸೆತ ಪ್ರಕರಣಕ್ಕೆ ಖಂಡನೆ



ಹನೂರು, ಆ.21–ರಾಜ್ಯದ ಮುಖ್ಯಮಂತ್ರಿ ಅಷ್ಟೇ ಸ್ಥಾನಮಾನವನ್ನು ಹೊಂದಿರುವ ವಿಪಕ್ಷ ನಾಯಕ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಾಹನಕ್ಕೆ ಕೊಡಗಿನಲ್ಲಿ ಕಿಡಿಗೇಡಿಗಳು ಮೊಟ್ಟೆ ಎಸೆದಿರುವುದು ಖಂಡನೀಯ ಎಂದು ಶಾಸಕ ಆರ್.ನರೇಂದ್ರ ಕಿಡಿಕಾರಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಜನ್ಮದಿನಾಚರಣೆ ಅಮೃತ ಮಹೋತ್ಸವಕ್ಕೆ ಲಕ್ಷಾಂತರ ಮಂದಿ ಭಾಗವಹಿಸಿದ್ದು ಹಾಗೂ ಮೊನ್ನೆ ಬೆಂಗಳೂರಿನಲ್ಲಿ ಕರೆ ನೀಡಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಭೆಗೆ 3 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿರುವುದನ್ನು ಕಂಡ ಬಿಜೆಪಿಯವರು ಪಕ್ಷ ಹಾಗೂ ಸಿದ್ದರಾಮಯ್ಯ ಅವರ ಜನಪ್ರಿಯತೆಯನ್ನು ಕುಗ್ಗಿಸುವ ಸಲುವಾಗಿ ಇಂತಹ ಕೆಲಸ ಮಾಡಿದ್ದಾರೆ ಎಂದು ದೂರಿದರಲ್ಲದೆ, ಕೃತ್ಯ ಎಸಗಿರುವವ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮೊಟ್ಟೆ ಎಸೆತ ಕೃತ್ಯವನ್ನು ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಹಾಗೂ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಖಂಡಿಸಿದ್ದಾರೆ. ಆದರೆ ಅಲ್ಲಿನ ಶಾಸಕರು ಬೇಜವಾಬ್ದಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಆ.25ರಂದು ಕಾಂಗ್ರೆಸ್‌ನಿಂದ ಪ್ರತಿಭಟನೆ ಕೈಗೊಳ್ಳಲಾಗಿದೆ. ಅದೇ ದಿನ 75ನೇ ಸ್ವಾತಂತ್ರ್ಯೋತ್ಸವ ನಡಿಗೆಯನ್ನು ದೊಡ್ಡಿಂದುವಾಡಿ ಗ್ರಾಮದಿಂದ ಹನೂರು ಪಟ್ಟಣದವರೆಗೆ ಕೈಗೊಳ್ಳಲಾಗಿದೆ. ಈ ಎರಡು ಕಾರ್ಯಕ್ರಮಗಳಿಗೆ ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಉಪಾಧ್ಯಕ್ಷ ಬಸವರಾಜು, ಹನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದೇವರಾಜು, ಮಧುವನಹಳ್ಳಿ ಶಿವಕುಮಾರ್, ಮಹದೇವಪ್ರಸಾದ್, ಜಿಲ್ಲಾ ಎಸ್‌ಸಿ ಘಟಕದ ನಾಗರಾಜು, ತಾಪಂ ಮಾಜಿ ಸದಸ್ಯ ಜವಾದ್ ಅಹಮದ್, ಪಪಂ ಉಪಾಧ್ಯಕ್ಷ ಗಿರೀಶ್, ಸದಸ್ಯರಾದ ಹರೀಶ್ ಕುಮಾರ್, ಸೋಮಶೇಖರ್, ಸಂಪತ್ ಕುಮಾರ್, ಮುಖಂಡರಾದ ಪಾಳ್ಯ ಕೃಷ್ಣ, ಪೆದ್ದನಪಾಳ್ಯ ಮಣಿ ಸೇರಿದಂತೆ ವಿವಿಧ ಗ್ರಾಮಗಳ ಮುಖಂಡರಿದ್ದರು.

ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಗುಂಡ್ಲುಪೇಟೆ, ಆ.21–ಕ್ಷೇತ್ರದಲ್ಲಿ ಮೂಲ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ಹೇಳಿದರು.

ತಾಲೂಕಿನ ಬೆಳವಾಡಿ ಗ್ರಾಮದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ ಹಾಗೂ 20 ಲಕ್ಷ ರೂ. ವೆಚ್ಚದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಕ್ಷೇತ್ರದಲ್ಲಿ ಅಗತ್ಯಕ್ಕೆ ತಕ್ಕಂತೆ ರಸ್ತೆಗಳನ್ನು ಪ್ರಥಮ ಹಂತದಲ್ಲಿ ಗುರುತಿಸಿ ನಿರ್ಮಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಹಂತ ಹಂತವಾಗಿ ಕೆರೆಗೆ ನೀರು ತುಂಬಿಸುವುದು, ರಸ್ತೆ ಅಭಿವೃದ್ಧಿ ಸೇರಿದಂತೆ ಮೂಲ ಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡ ಲಾಗುವುದು ಎಂದರು. ಈ ಸಂದರ್ಭದಲ್ಲಿ ಹುಂಡೀಪುರ ಗ್ರಾಪಂ ಅಧ್ಯಕ್ಷೆ ಲಕ್ಷ್ಮಿ ಮಂಜುನಾಥ್, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ನಾಗೇಂದ್ರ, ಬಿಜೆಪಿ ಮಂಡಲಾಧ್ಯಕ್ಷ ಡಿ.ಪಿ.ಜಗದೀಶ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಪ್ರಣಯ್, ಮುಖಂಡರಾದ ನಾಗರಾಜು, ಗಣೇಶ್ ಹಾಗೂ ಇತರರಿದ್ದರು.


ಜನ ಸಂಪರ್ಕ ಸಭೆ: ಆ.22ರ ಸೋಮವಾರ ಶಾಸಕ ಸಿ.ಎಸ್.ನಿರಂಜನಕುಮಾರ್ ಅಧ್ಯಕ್ಷತೆಯಲ್ಲಿ ಜನ ಸಂಪರ್ಕ ಸಭೆಯನ್ನು ಮಧ್ಯಾಹ್ನ 2.30ರಿಂದ ಪ್ರವಾಸಿ ಮಂದಿರದಲ್ಲಿ ಆಯೋಜಿಸಲಾಗಿದ್ದು, ಜನತೆ ಸದುಪಯೋಗ ಪಡಿಸಿಕೊಳ್ಳುವಂತೆ ಶಾಸಕರ ಕಚೇರಿ ಪ್ರಕಟಣೆ ಕೋರಿದೆ.

ನಾಳೆ ಸಮಾಲೋಚನಾ ಸಭೆ

ಬೇಗೂರು, ಆ.21–ಗುಂಡ್ಲುಪೇಟೆ ತಾಲೂಕಿನ ಸೋಮಹಳ್ಳಿ ಗ್ರಾಮದ ಶ್ರೀ ವೀರ ಸಿಂಹಾಸನ ಶಿಲಾಮಠಕ್ಕೆ ಉತ್ತರಾಧಿಕಾರಿ ನೇಮಿಸುವ ಕುರಿತು ಆ.23ರಂದು ಬೆಳಗ್ಗೆ 10 ಗಂಟೆಗೆ ಸೋಮಹಳ್ಳಿಯ ಶ್ರೀ ವೀರ ಸಿಂಹಾಸನ ಶಿಲಾಮಠದಲ್ಲಿ ಸಮಾಲೋಚನಾ ಸಭೆ ಹಮ್ಮಿಕೊಳ್ಳಲಾಗಿದೆ.

ಶ್ರೀ ಮಠವು ವಿದ್ಯಾದಾನ, ಅನ್ನದಾನ ದಾಸೋಹ ಇತ್ಯಾದಿ ಕೈಂಕರ್ಯ ಹಾಗೂ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದ್ದು, ಶ್ರೀ ಮಠದ ಭಕ್ತ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಲು ಶ್ರೀ ಮಠಕ್ಕೆ ಉತ್ತರಾಧಿಕಾರಿ ನಿಯೋಜನೆಗೆ ಶ್ರೀ ಮಠದ ಭಕ್ತ ಸಮುದಾಯ ಆಗಮಿಸಿ ಸಲಹೆ ಸೂಚನೆ ನೀಡಬೇಕಾಗಿ ಶಿಲಾಮಠ ಅಧ್ಯಕ್ಷರಾದ ಶ್ರೀ ಸಿದ್ದಮಲ್ಲಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶನಿದೇವರ ಕಥಾ ಕಲಾಕ್ಷೇಪ



ಚಾಮರಾಜನಗರ, ಆ.21–ನಗರದ ನೃಪತುಂಗ ವೃತ್ತದಲ್ಲಿರುವ ಶನೇಶ್ವರ ದೇವಸ್ಥಾನದ ಮುಂಭಾಗ 4ನೇ ಶ್ರಾವಣ ಶನಿವಾರದ ಪ್ರಯುಕ್ತ ಭಕ್ತ ವೃಂದದಿಂದ ಶನಿದೇವರ ಕಥಾ ಕಲಾಕ್ಷೇಪ, ಅನ್ನ ಸಂತರ್ಪಣೆ ಜರುಗಿತು.

ಶನಿದೇವರಿಗೆ ಬೆಳಗ್ಗೆ ವಿಶೇಷ ಪೂಜೆ, ಮಹಾಮಂಗಳಾರತಿ ನೆರವೇರಿಸಲಾಯಿತು. ನಂತರ 11 ಗಂಟೆಗೆ ಹರಿಕಥೆ ವಿದ್ವಾನ್ ರಾಮದಾಸ್ ಅರಳವಾಡಿ ತಂಡದವರಿಂದ ಶ್ರೀ ಶನೇಶ್ವರಿ ಹರಿಕಥೆ ನಡೆಯಿತು. ಭಕ್ತರು ತನ್ಮಯರಾಗಿ ಶನಿದೇವರ ಕಥಾ ಕಲಾಕ್ಷೇಪ ಆಲಿಸಿದರು. ನಂತರ ನಡೆದ ಅನ್ನ ಸಂತರ್ಪಣೆ ಮಧ್ಯಾಹ್ನದಿಂದ ಸಂಜೆ 4 ಗಂಟೆಯವರೆಗೂ ನಡೆಯಿತು. ಸುಮಾರು 7 ಸಾವಿರ ಜನರಿಗೆ ಭಕ್ತ ವೃಂದದವರು ಪ್ರಸಾದ ಸ್ವೀಕರಿಸಿದರು.

ಇಂದು ಕೊಳ್ಳೇಗಾಲ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ

ಚಾಮರಾಜನಗರ, ಆ.21–ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಕೊಳ್ಳೇಗಾಲ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ ಆ.22ರಂದು ಬೆಳಗ್ಗೆ 10 ಗಂಟೆಗೆ ಕೊಳ್ಳೇಗಾಲದ ಮಹದೇಶ್ವರ ಕಾಲೇಜಿನ ಹತ್ತಿರವಿರುವ ತಾಲೂಕು ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಶಾಸಕರಾದ ಎನ್.ಮಹೇಶ್ ಅವರು ಕ್ರೀಡಾಕೂಟವನ್ನು ಉದ್ಘಾಟಿಸಿ, ಅಧ್ಯಕ್ಷತೆ ವಹಿಸುವರು. ನಗರಸಭೆ ಪ್ರಭಾರ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಾದ ಆರ್. ಸುಶೀಲ, ಸದಸ್ಯರಾದ ಆರ್.ಸುಮಾ ಸುಬ್ಬಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರ ಪಾಟೀಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಅರಸು ಜನ್ಮ ದಿನಾಚರಣೆ: ಸಚಿವರು, ಶಾಸಕರ ನಡೆಗೆ ಸಂಘಟನೆಗಳ ಒಕ್ಕೂಟ ಖಂಡನೆ

ಚಾಮರಾಜನಗರ, ಆ.21– ಜಿಲ್ಲಾಡಳಿತ, ಜಿಪಂ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಶನಿವಾರ ನಗರದ ಡಾ.ರಾಜ್ ಕುಮಾರ್ ರಂಗಮಂದಿರದಲ್ಲಿ ಆಯೋಜಿಸಿದ್ದ ಹಿಂದುಳಿದ ವರ್ಗಗಳ ನೇತಾರ ಮಾಜಿ ಮುಖ್ಯಮಂತ್ರಿ ದೇವರಾಜು ಅರಸು ಅವರ 107ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ, ತರಾತುರಿಯಲ್ಲಿ ಭಾಷಣ ಮುಗಿಸಿ ಮತ್ತೊಂದು ಕಾರ್ಯಕ್ರಮಕ್ಕೆ ವೇದಿಕೆಯಿಂದ ನಿರ್ಗಮಿಸಿದ ಜಿಲ್ಲಾ ಉಸ್ತುವಾರಿ ಸಚಿವರ ನಡೆ ಖಂಡನೀಯ ಎಂದು ಕಾಯಕ ಸಮಾಜಗಳ ಒಕ್ಕೂಟ, ಪ್ರವರ್ಗ–1ರ ಜಾತಿಗಳ ಒಕ್ಕೂಟ ಹಾಗೂ ಪ್ರಗತಿಪರ ಮತ್ತು ದಲಿತ ಸಂಘಟನೆಗಳ ಒಕ್ಕೂಟ ತಿಳಿಸಿವೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಶಾಸಕರಾದ ಎನ್.ಮಹೇಶ್, ನಿರಂಜನ್‌ಕುಮಾರ್, ಜಿಲ್ಲಾಧಿಕಾರಿ, ಜಿಪಂ ಸಿಇಒ ಹಾಗೂ ಎಸ್‌ಪಿ ಸಹ ಕಾರ್ಯಕ್ರಮದಲ್ಲಿ ಇರದೆ ಸಚಿವರನ್ನು ಹಿಂಬಾಲಿಸಿದರು. ಇದು ದೇವರಾಜ ಅರಸು ಅವರಿಗೆ ಮಾಡಿದ ಅಪಮಾನ.

ಶನಿವಾರ ಜಿಲ್ಲಾಡಳಿತ ನಾಮಕಾವಸ್ಥೆಗೆ ಕಾರ್ಯಕ್ರಮ ಮಾಡಿದೆ ಆಹ್ವಾನ ಪತ್ರಿಕೆಯನ್ನು ಸಮರ್ಪಕವಾಗಿ ವಿತರಿಸಿಲ್ಲ. ಕಾರ್ಯಕ್ರಮದಲ್ಲಿ ಶೇ.90ರಷ್ಟು ವಿದ್ಯಾರ್ಥಿಗಳಿದ್ದರು. ಉಸ್ತುವಾರಿ ಸಚಿವರ ತರಾತುರಿಯನ್ನು ಗಮನಿಸಿದರೆ ಅರಸು ಅವರ ಜನ್ಮ ದಿನಾಚರಣೆಗಾಗಿಯೇ ಸಚಿವರು ನಗರಕ್ಕೆ ಬಂದಿದ್ದರು ಎನಿಸುವುದಿಲ್ಲ. ಏಕೆಂದರೆ ಈ ಹಿಂದೆ ಬಸವ ಜಯಂತಿ, ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿ ಹಾಗೂ ಮಹರ್ಷಿ ಭಗೀರಥ ಜಯಂತಿ ಕಾರ್ಯಕ್ರಮಗಳಿಗೂ ಉಸ್ತುವಾರಿ ಸಚಿವರು ಗೈರಾಗಿದ್ದರು. ಇನ್ನು ಮುಂದಾದರೂ ಜನಪ್ರತಿನಿಧಿಗಳು ಅಧಿಕಾರಿಗಳು ಮಹನೀಯರ ಕಾರ್ಯಕ್ರಮಗಳಲ್ಲಿ ಕೊನೆಯವರೆಗೂ ಹಾಜರಿರಬೇಕು ಎಂದು ಕಾಯಕ ಸಮಾಜಗಳ ಒಕ್ಕೂಟದ ಜಯರಾಮಶೆಟ್ಟಿ, ಪ್ರವರ್ಗ–1ರ ಜಾತಿಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಾಗಳಿ ರೇವಣ್ಣ ಹಾಗೂ ಪ್ರಗತಿಪರ ಮತ್ತು ದಲಿತ ಸಂಘಟನೆಗಳ ಒಕ್ಕೂಟದ ಸಂಚಾಲಕ ಸಿ.ಎಂ.ಕೃಷ್ಣಮೂರ್ತಿ, ವಕೀಲ ದೊಡ್ಡಮೋಳೆ ಆರ್. ರಂಗಸ್ವಾಮಿ ಒತ್ತಾಯಿಸಿದ್ದು, ಇಲ್ಲದಿದ್ದಲ್ಲಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಇಂತಹ ನಡೆ ವಿರುದ್ಧ ಪ್ರತಿಭಟಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.



ಚಾಮರಾಜನಗರ ತಾಲೂಕಿನ ಬೆಂಡರವಾಡಿ ಬಳಿ ಪ್ರಾರಂಭವಾದ ನೂತನ ಬುರ್ಜ್ ಖಲೀಫ ರೆಸ್ಟೋರೆಂಟ್ ಅನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು. ಈ ವೇಳೆ ರೆಸ್ಟೋರೆಂಟ್ ಮಾಲೀಕ ಅಬ್ದುಲ್ ರಹೀಮ್, ವ್ಯವಸ್ಥಾಪಕ ಮಹಮ್ಮದ್ ನಿಹಾಲ್ ಇದ್ದರು.

ಒಂದನೇ ಪುಟದಿಂದ

ಹನಿಟ್ರ್ಯಾಪ್ ಮಾಡಿ 50 ಲಕ್ಷ ವಸೂಲಿ

ಡಾ.ಎಸ್.ಶ್ರೀನಿವಾಸ ಶೆಟ್ಟರ ಮೂಲಕ ರಾಜ್ಯಶ್ರೀ ಜ್ಯುವೆಲ್ಲರ್ಸ್ ಅವರಿಂದ 25 ಲಕ್ಷ ರೂ.ಗಳನ್ನು ತಂದು ಮೈಸೂರು ಮೃಗಾಲಯದ ಬಳಿ ಬ್ಲಾಕ್‌ಮೇಲರ್‌ಗಳಿಗೆ ನೀಡಿದ್ದಾರೆ. ನಂತರ ಮೈಸೂರಿನ ಅಶೋಕ ರಸ್ತೆಯಲ್ಲಿರುವ ಸೂರ್ಯ ಜುವೆಲ್ಲರ್ಸ್‌ನಿಂದ ಶೆಟ್ಟಿ ಅವರನ್ನು ಒತ್ತೆಯಾಗಿಟ್ಟುಕೊಂಡಿದ್ದ ವ್ಯಕ್ತಿ 23 ಲಕ್ಷ ರೂ. ಹಾಗೂ ಕಲ್ಪತರು ಸಿಲ್ವರ್ ಹೌಸ್‌ನಿಂದ 2 ಲಕ್ಷ ರೂ. ಸೇರಿದಂತೆ ಒಟ್ಟು 50 ಲಕ್ಷ ರೂ.ಗಳನ್ನು ಫೆಬ್ರವರಿ 27ರಂದು ಬೆಳಗ್ಗೆ ವಸೂಲಿ ಮಾಡಿದ ನಂತರ ಜಗನ್ನಾಥ್ ಎಸ್. ಶೆಟ್ಟಿಯವರನ್ನು ಬಿಡುಗಡೆಗೊಳಿಸಿದ್ದಾರೆ. ಈ ಸಂಬಂಧ ಜಗನ್ನಾಥ್ ಎಸ್.ಶೆಟ್ಟಿಯವರು ಆಗಸ್ಟ್ 19ರ ಬೆಳಗ್ಗೆ 11 ಗಂಟೆಯಲ್ಲಿ ಮಂಡ್ಯ ಪಶ್ಚಿಮ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನ್ನನ್ನು ಹನಿಟ್ರ್ಯಾಪ್ ಮಾಡಿದವರು ಜೀವ ಬೆದರಿಕೆ ಹಾಕಿದ್ದರಿಂದ ಹೆದರಿ ದೂರು ನೀಡಿರಲಿಲ್ಲ. ಆದರೆ, ಈ ವ್ಯಕ್ತಿಗಳು ಮತ್ತೆ ಹಣಕ್ಕೆ ಒತ್ತಾಯಿಸಿದ್ದರಿಂದ ತಡವಾಗಿ ದೂರು ನೀಡಿರುವುದಾಗಿ ಅವರು ತಿಳಿಸಿದ್ದಾರೆ. ದೂರು ದಾಖಲಿಸಿಕೊಂಡ ಪೊಲೀಸರು, ಮಂಡ್ಯದ ಸುಭಾಷ್‌ನಗರ 8ನೇ ಕ್ರಾಸ್ ನಿವಾಸಿ ಸಲ್ಮಾ ಭಾನುವನ್ನು ಇಂದು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ ನಂತರ ಹೆಚ್ಚಿನ ವಿಚಾರಣೆಗಾಗಿ 10 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆದಿದ್ದಾರೆ. ಅಲ್ಲದೇ, ಇನ್ನುಳಿದ ಆರೋಪಿಗಳಿಗಾಗಿ ಹುಡುಕಾಟ ನಡೆಸಿದ್ದಾರೆ.

ಅಧ್ಯಕ್ಷರ ನೇಮಕ?

ಮಾಜಿ ಹಣಕಾಸು ಸಚಿವ ಪಿ ಚಿದಂಬರಂ, ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರುಗಳು ಕೇಳಿಬರುತ್ತಿವೆ.

ಇನ್ನು ಪಕ್ಷದ ಕಿರಿಯರು ಕೂಡ ಉನ್ನತ ಹುದ್ದೆಗೆ ಏರುವ ಭರವಸೆಯಲ್ಲಿದ್ದಾರೆ. ಆದರೆ ಯುವ ನಾಯಕರಾದ ಜ್ಯೋತಿರಾದಿತ್ಯ ಸಿಂಧಿಯಾ, ಜಿತಿನ್ ಪ್ರಸಾದ, ಸುಶ್ಮಿತಾ ದೇಬ್, ಆರ್‌ಪಿಎನ್ ಸಿಂಗ್, ಕುಲದೀಪ್ ಬಿಷ್ಣೋಯ್, ಅಶೋಕ್ ತನ್ವರ್, ಅಶೋಕ್ ಚೌಧರಿ ಮುಂತಾದವರು ಪಕ್ಷ ತೊರೆದಿರುವುದು ಯುವ ನಾಯಕರ ಮೇಲೆ ವಿಶ್ವಾಸ ಕಳೆದುಕೊಳ್ಳುವಂತೆ ಮಾಡಿದೆ. ಕಾಂಗ್ರೆಸ್ ಪಕ್ಷದ ಬಂಡಾಯದ ಗುಂಪು ಎಂದೇ ಕರೆಯಲ್ಪಡುವ ಜಿ–23 ನಾಯಕರು ಸಹ ಅಧ್ಯಕ್ಷ ಮತ್ತು ಸಿಡಬ್ಲ್ಯೂಸಿ ಸದಸ್ಯರ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವ ಮೂಲಕ ಕಣಕ್ಕಿಳಿಯುವ ಸಾಧ್ಯತೆಯಿದೆ. ಚುನಾವಣೆಯ ಪ್ರಕ್ರಿಯೆಯು ಆಗಸ್ಟ್ 21ರಂದು ಪ್ರಾರಂಭವಾಗಲಿದ್ದು 2022ರ ಸೆಪ್ಟೆಂಬರ್ 20ರಂದು ಹೊಸ ಅಧ್ಯಕ್ಷರ ಆಯ್ಕೆಯೊಂದಿಗೆ ಮುಕ್ತಾಯಗೊಳ್ಳುತ್ತದೆ.

ಪ್ರಮುಖ ಸ್ಥಾನಗಳಲ್ಲಿ ಬದಲಾವಣೆ

ವ್ಯಕ್ತಿಗಳನ್ನು ಬದಲಾಯಿಸಿದೆ. ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಭವಿಷ್ಯದ ಬಗ್ಗೆಯೂ ಊಹಾಪೋಹಗಳಿವೆ. ಪ್ರತಿಪಕ್ಷ ಕಾಂಗ್ರೆಸ್ ಪ್ರಬಲ ಶಕ್ತಿಯಾಗಿರುವ ರಾಜ್ಯದಲ್ಲಿ ಅವರ ನಾಯಕತ್ವದ ಸಾಮರ್ಥ್ಯವನ್ನು ವಿಮರ್ಶಕರು ಪ್ರಶ್ನಿಸಿದ್ದಾರೆ ಆದರೆ ಬಿಜೆಪಿ ಇದುವರೆಗೆ ಯಾವುದೇ ಬದಲಾವಣೆಯನ್ನು ತಳ್ಳಿಹಾಕಿದೆ. ವಯಸ್ಸಾದ ಆದರೆ ಇನ್ನೂ ಶಕ್ತಿಯುತವಾದ ಲಿಂಗಾಯತ ನಾಯಕ ಬಿಎಸ್ ಯಡಿಯೂರಪ್ಪ ಅವರನ್ನು ಸಂಸದೀಯ ಮಂಡಳಿಯಲ್ಲಿ ಸೇರಿಸಿಕೊಳ್ಳುವ ಬಿಜೆಪಿ ನಿರ್ಧಾರ, ದಕ್ಷಿಣ ಭಾರತದ ಭದ್ರಕೋಟೆಯಲ್ಲಿ ತನ್ನ ಸಾಮಾಜಿಕ ಪ್ರಭಾವವನ್ನು ತೀಕ್ಷ್ಣಗೊಳಿಸುವ ನಿರಂತರ ಪ್ರಯತ್ನವನ್ನು ಎತ್ತಿ ತೋರಿಸುತ್ತದೆ. ಉತ್ತರ ಪ್ರದೇಶದಲ್ಲಿ ಅನೇಕ ವಿಷಯಗಳಲ್ಲಿ ಸುನೀಲ್ ಬನ್ಸಾಲ್ ಹಾಗೂ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನಡುವೆ ಅನೇಕ ಭಿನ್ನಾಭಿಪ್ರಾಯಗಳಿದ್ದರೂ ಸುನೀಲ್ ಬನ್ಸಾಲ್ ಅವರಿಗೆ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಂತಹ ಮಹತ್ವದ ಹೊಣೆಗಾರಿಕೆ ವಹಿಸಲಾಗಿದೆ.

ಕಪ್ಪು ಬಾವುಟ ಪ್ರದರ್ಶನ

ಪ್ರತಿಭಟನಾಕಾರರು ಅಲ್ಲಿಂದ ಪರಾರಿಯಾಗುತ್ತಿದ್ದ ಈ ವೇಳೆ ಪುರಸಭಾ ಮಾಜಿ ಅಧ್ಯಕ್ಷ ಸೋಮು, ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಅಮಾಸೆ ನಿಂಗರಾಜು ಹಾಗೂ ಬಾರ್ ಕುಮಾರ್ ಅವರನ್ನು ಬಂಧಿಸಿದರು. ಆದರೆ ಪೊಲೀಸರಿಗೆ ಸಿಗದೇ ಪಟ್ಟಣದ ಅಡುಗೆ ಮಂಜು ಅವರ ಮನೆಯಲ್ಲಿ ಅಡಗಿ ಕುಳಿತ್ತಿದ್ದ ಚೌಹಳ್ಳಿ ಮಲ್ಲೇಶ್, ವೆಂಕಿ, ಕಿರಗಸೂರು ಪುಟ್ಟರಾಜು ಅವರನ್ನು ಆನಂತರ ಬಂಧನಕ್ಕೊಳಪಡಿಸಲಾಯಿತು. ಬಳಿಕ ಸಂಜೆ ವೇಳೆ ಬಂಧಿತರನ್ನು ಪೊಲೀಸರು ಬಿಡುಗಡೆಗೊಳಿಸಿದರು.

ಕಪ್ಪು ಬಾವುಟ ಪ್ರದರ್ಶನಕ್ಕೆ ಸನ್ನದ್ಧ: ಇದಕ್ಕೂ ಮುನ್ನ ತಿ.ನರಸೀಪುರದ ರಾಷ್ಟ್ರೀಯ ಹೆದ್ದಾರಿ 212ರ ಗರ್ಗೇಶ್ವರಿ ಬಳಿ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಪುರಸಭಾಧ್ಯಕ್ಷ ಮದನ್ ರಾಜ್ ಹಾಗೂ ಸದಸ್ಯ ಅಹಮದ್ ಸಯ್ಯದ್ ನೇತೃತ್ವದಲ್ಲಿ ಸುಮಾರಿಗೆ ಕಪ್ಪು ಬಾವುಟ ಪ್ರದರ್ಶಿಸಲು ಕಾಂಗ್ರೆಸ್ ಕಾರ್ಯಕರ್ತರು ಸಜ್ಜಾಗಿದ್ದರು.

ಪ್ರತಿಭಟನೆ ತೀವ್ರತೆ ಅರಿತ ಹೆಚ್ಚುವರಿ ಪೊಲೀಸ್ ಅಧೀಕ್ಷಕ ನಂದಿನಿ, ಡಿವೈಎಸ್ಪಿ ಗೋವಿಂದರಾಜು, ಎಸ್‌ಐಗಳಾದ ಕೃಷ್ಣಪ್ಪ ಪ್ರತಿಭಟನಾನಿರತರ ಮನವೊಲಿಕೆಗೆ ಮುಂದಾದರೂ, ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶನ ಮಾಡೇ ತೀರುವುದಾಗಿ ಪಟ್ಟು ಹಿಡಿದರು. ಈ ಹಿನ್ನೆಲೆಯಲ್ಲಿ ಪೊಲೀಸರು ಮುಂಜಾಗ್ರತಾ ಕ್ರಮವಾಗಿ ಕಾಂಗ್ರೆಸ್ ಕಾರ್ಯಕರ್ತರನ್ನು ಬಂಧಿಸಿ ಖಾಸಗಿ ವಾಹನದಲ್ಲಿ ಕರೆದೊಯ್ದರು. ಬಂಧನಕ್ಕೊಳಗಾದ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮೇಲೆ ಬಿಜೆಪಿ ಕಾರ್ಯಕರ್ತರು ಮಾಡಿದ ಅಪಮಾನ ಖಂಡಿಸಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಲು ನಾವು ನಿರ್ಧರಿಸಿದ್ದೆವು. ಆದರೆ, ಸರ್ಕಾರ ಪೊಲೀಸರ ಮುಖಾಂತರ ನಮ್ಮನ್ನು ಬಂಧಿಸಿ ನಮ್ಮ ಹಕ್ಕನ್ನು ಕಸಿದುಕೊಳ್ಳುವ ಮುಖೇನ ಪ್ರಜಾಪ್ರಭುತ್ವಕ್ಕೆ ಅಪಮಾನ ಮಾಡುತ್ತಿದೆ ಎಂದು ಆರೋಪಿಸಿದರು.

ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಅಹಮದ್ ಸಯ್ಯದ್ ಮಾತನಾಡಿ, ಬಿಜೆಪಿ ಸರ್ಕಾರ ರಾಜ್ಯದಲ್ಲಿ ಮತೀಯವಾದ ಬೆಂಬಲಿಸುತ್ತಿದೆ. ಸಿದ್ದರಾಮಯ್ಯನವರ ಕಾರಿನ ಮೇಲೆ ಮೊಟ್ಟೆ ಎಸೆದು ಅಪಮಾನ ಮಾಡಲಾಗಿದೆ. ಸರ್ಕಾರ ವಿರೋಧ ಪಕ್ಷದ ನಾಯಕರ ಮೇಲೆ ಹಲ್ಲೆ ಮಾಡಲು ತಮ್ಮ ಕಾರ್ಯಕರ್ತರನ್ನು ಬಿಟ್ಟು ಮಗುವನ್ನು ಚಿವುಟಿ ಉಯ್ಯಾಲೆಯನ್ನು ತೂಗುವ ಇಬ್ಬಂದಿತನ ಪ್ರದರ್ಶಿಸುತ್ತಿದೆ. ಹಾಗಾಗಿ ಸರ್ಕಾರ ತಮ್ಮ ಭದ್ರತಾ ವೈಫಲ್ಯ ಒಪ್ಪಿಕೊಂಡು ಗೃಹ ಸಚಿವ ಅರಗ ಜ್ಞಾನೇಂದ್ರ ರಾಜೀನಾಮೆ ಪಡೆಯಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಪುರಸಭಾಧ್ಯಕ್ಷ ಮದನ್ ರಾಜ್, ಪಿಆರ್‌ಡಿ ಅಧ್ಯಕ್ಷ ಮಹದೇವಪ್ಪ, ಪುರಸಭೆ ಸದಸ್ಯ ಟಿ.ಎಂ. ನಂಜುಂಡಸ್ವಾಮಿ, ಬಾದಾಮಿ ಮಂಜು, ಸಿ.ಪ್ರಕಾಶ್, ಮೆಡಿಕಲ್ ನಾಗರಾಜು, ಬಣ್ಣ ಬಸವರಾಜು, ಕಿರಗಸೂರು ಕಾಂತರಾಜು, ಸಂತೃಪ್ತಿ ಕುಮಾರ್, ಮಾದೇಶ್, ತುಂಬಲ ಬಾಬು, ರಜತ್ ಸ್ವಾಮಿ, ಪಿ.ಸ್ವಾಮಿನಾಥ್ ಗೌಡ, ಅರುಣ್ ಕುಮಾರ್ ಗೌಡ, ರಮೇಶ್, ಸ್ವಾಮಿ, ಮಂಟೇಲಿಂಗಪ್ಪ, ಕೊತ್ತೇಗಾಲ ಬಸವರಾಜು ಮತ್ತಿತರರು ಭಾಗವಹಿಸಿದ್ದರು.

ಮಾಂಸಾಹಾರ ಸೇವಿಸಿ ದೇವಸ್ಥಾನ ಪ್ರವೇಶ

ಸಿದ್ದರಾಮಯ್ಯನವರಿಗೆ ರಾಜ್ಯಾಭಿಮಾನವೂ ಇಲ್ಲ. ಇಂತಹವರಿಂದ ಏನನ್ನು ನಿರೀಕ್ಷಿಸಲು ಸಾಧ್ಯ ಎಂದು ಅವರು ಪ್ರಶ್ನಿಸಿದ್ದಾರೆ. ಅಪ್ಪಚ್ಚು ರಂಜನ್ ಅವರ ಹೇಳಿಕೆ ಸಾಮಾಜಿಕ ಜಾಲ ತಾಣದಲ್ಲಿ ವೈರಲ್ ಆಗಿದ್ದು, ಸಿದ್ದರಾಮಯ್ಯ ವಿರುದ್ಧ ಟೀಕಾ ಪ್ರಹಾರಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ವೀಣಾ ಅಚ್ಚಯ್ಯ ಅವರು ಮಾಧ್ಯಮ ಪ್ರತಿನಿಧಿಗಳನ್ನು ಸಂಪರ್ಕಿಸಿ, ಸಿದ್ದರಾಮಯ್ಯ ಮಾಂಸ ಸೇವಿಸಿ ದೇವಸ್ಥಾನ ಪ್ರವೇಶಿಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ನಮ್ಮ ಮನೆಯಲ್ಲೇ ಅಡುಗೆ ಮಾಡಿ ಸುದರ್ಶನ ಅತಿಥಿ ಗೃಹಕ್ಕೆ ಕೊಂಡೊಯ್ದಿದ್ದೆ. ಸಿದ್ದರಾಮಯ್ಯನವರಿಗೆ ಇಷ್ಟವಾದದ್ದು ಎಂದು ನಾಟಿಕೋಳಿ ಸಾರು, ಮಾಂಸ ಹಾಗೂ ಕೊಡಗಿನ ಸಾಂಪ್ರದಾಯಿಕ ತಿನಿಸುಗಳನ್ನೂ ಕೂಡ ಕೊಂಡೊಯ್ದಿದ್ದೆ. ಆದರೆ ಅವರು ಮಾಂಸಾಹಾರ ಸೇವಿಸಿಲ್ಲ. ಅಕ್ಕಿ ರೊಟ್ಟಿ ಮತ್ತು ಕಾಳು ಪಲ್ಯ ಮಾತ್ರ ಸೇವಿಸಿದರು. ಅವರ ಜೊತೆ ಬಂದಿದ್ದ ಮೈಸೂರಿನ ಎಂ.ಲಕ್ಷ್ಮಣ್ ಅವರೂ ಕೂಡ ಅಕ್ಕಿ ರೊಟ್ಟಿ, ಅನ್ನ–ಸಾಂಬಾರ್ ಸೇವಿಸಿದ್ದಾರೆ. ಅವರಿಗೆ ನಾನೇ ಬಡಿಸಿದ್ದೇನೆ. ಸಿದ್ದರಾಮಯ್ಯ ಅವರನ್ನು ಟಾರ್ಗೆಟ್ ಮಾಡಿ ಬಿಜೆಪಿಯವರು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ವೀಣಾ ಅಚ್ಚಯ್ಯ ಕಿಡಿಕಾರಿದರು.

ಇಂತದ್ದೇ ತಿನ್ನಬೇಕು ಎಂದು ದೇವರು ಹೇಳಿದ್ದಾರಾ?

ದೇವಸ್ಥಾನದಲ್ಲಿ ಪೂಜೆ ಇಟ್ಟುಕೊಂಡಿದ್ದೇವೆ ಎಂದು ಕರೆದಿದ್ದರಿಂದ ಅಲ್ಲಿಗೆ ಹೋಗಿ ಪೂಜೆ ಸಲ್ಲಿಸಿ ಬಂದಿದ್ದೇನೆ ಎಂದ ಅವರು, ಮಧ್ಯಾಹ್ನ ಊಟ ಮಾಡಿ ಸಂಜೆ ದೇವಸ್ಥಾನಕ್ಕೆ ಹೋಗಬಾರದಾ? ರಾತ್ರಿ ಮಾಂಸಾಹಾರ ಊಟ ಮಾಡಿ ಬೆಳಗ್ಗೆ ಹೋಗಬಹುದಾ? ಎಂದು ಪ್ರಶ್ನಿಸಿದರಲ್ಲದೇ, ಬಿಜೆಪಿಯವರಿಗೆ ಮೊಸರಲ್ಲಿ ಕಲ್ಲು ಹುಡುಕುವುದೇ ಕೆಲಸ. ಚೆನ್ನಾಗಿರುವ ಜಾಗದಲ್ಲಿ ಬೆಂಕಿ ಹಚ್ಚುವುದು, ವಿಷ ಹಾಕುವುದನ್ನೇ ಕೆಲಸವಾಗಿ ಮಾಡಿಕೊಂಡಿದ್ದಾರೆ ಎಂದು ಕಿಡಿಕಾರಿದರು.

ನನ್ನ ಕಾರಿನ ಮೇಲೆ ಮೊಟ್ಟೆ ಎಸೆದ ಸಂಪತ್ ಪಕ್ಕಾ ಆರ್‌ಎಸ್‌ಎಸ್ ಕಾರ್ಯಕರ್ತ. ಅವನಿಂದ ಬಲವಂತವಾಗಿ ಕಾಂಗ್ರೆಸ್ ಕಾರ್ಯಕರ್ತ ಎಂದು ಹೇಳಿಸಿದ್ದಾರೆ. ಸಂಪತ್ ಯಾರು ಎಂದೇ ಗೊತ್ತಿಲ್ಲ ಎಂದು ಜೀವಿಜಯ ಹೇಳಿದ್ದಾರೆ. ಆದರೆ ಅವನು ಜೀವಿಜಯ ಜೊತೆ ಕಾಂಗ್ರೆಸ್‌ಗೆ ಬಂದೆ ಎಂದು ಸುಳ್ಳು ಹೇಳಿದ್ದಾನೆ ಎಂದರು.

ಟಿಪ್ಪುವನ್ನು ಈಗ ಬಿಜೆಪಿಯವರು ಬಹಳ ವಿರೋಧಿಸುತ್ತಿದ್ದಾರೆ. ಈ ಹಿಂದೆ ಯಡಿಯೂರಪ್ಪ ಟಿಪ್ಪು ಪೇಟ ಹಾಕ್ಕೊಂಡು, ಕತ್ತಿ ಹಿಡ್ಕೊಂಡು ಫೋಸ್ ಕೊಟ್ಟಿಲ್ಲವೇ? ಆಗ ಶೋಭಾ ಕರಂದ್ಲಾಜೆ ಅವರೂ ಕೂಡ ಜೊತೆಯಲ್ಲೇ ಇದ್ದರಲ್ಲಾ ಎಂದರು.

800 ಕೋಟಿ ರೂ. ಅನುದಾನ

ನ್ಯಾಯಾಂಗಕ್ಕೆ ಗೌರವ, ಅಧಿಕಾರ ಮತ್ತು ಜವಾಬ್ದಾರಿಯನ್ನು ನೀಡಲಾಗಿದೆ. ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆ ಮಾತ್ರವಲ್ಲ, ಲೋಕತಂತ್ರ, ಜನತಂತ್ರದ ಆಚರಣೆಯಾಗಿದೆ. ಈ ಲೋಕತಂತ್ರಕ್ಕೆ 75 ವರ್ಷ ಕಟ್ಟು ನಿಟ್ಟಾಗಿ ನಡೆದುಕೊಂಡು ಬಂದಿರುವುದರಲ್ಲಿ ನ್ಯಾಯಾಂಗದ ಪಾತ್ರ ದೊಡ್ಡದಿದೆ ಎಂದರು.

ಭಾರತದಲ್ಲಿ ಪ್ರಜಾಪ್ರಭುತ್ವದ ಬೇರು ಗಟ್ಟಿಯಾಗಿದ್ದು, ಅದರ ಆದರ್ಶಗಳು ಇಂದಿಗೂ ಜೀವಂತವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಸರಿಯಿಲ್ಲದಿದ್ದರೆ ಬದುಕಿಗೆ ಸಮಭಾವ ಸಿಗುವುದು ಕಷ್ಟವಾಗುತ್ತದೆ ಎಂದು ತಿಳಿಸಿದರು.

ದಸರಾ ಗಜಪಡೆ ಮೇಲೆ ಸಿಸಿ ಕ್ಯಾಮರಾ ಕಣ್ಗಾವಲು


● ಆನೆಗಳ ವರ್ತನೆ ಮೇಲೆ ನಿಗಾ ಇಡಲು ಕ್ರಮ ● ಅಪರಿಚಿತರು ಆನೆಗಳ ಬಳಿ ನುಸುಳದಂತೆ ಕಟ್ಟೆಚ್ಚರ ವಹಿಸಲು ಮುಂದಾದ ಇಲಾಖೆ ● 8 ಸಿಸಿ ಕ್ಯಾಮರಾ ಬಳಕೆ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಆ.21– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಿವಿಧ ಆನೆ ಶಿಬಿರಗಳಿಂದ ಆಗಮಿಸಿ ಅರಮನೆಯ ಆವರಣದಲ್ಲಿ ಬೀಡು ಬಿಟ್ಟಿರುವ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಗಜಪಡೆಯ ಮೇಲೆ ಸಿಸಿ ಕ್ಯಾಮರಾದ ಕಣ್ಗಾವಲು ಇಡಲಾಗಿದ್ದು, ಆನೆಗಳ ಚಲನವಲನದೊಂದಿಗೆ ಅಪರಿಚಿತರು ಆನೆಗಳ ಸಮೀಪ ಹೋಗದಂತೆ ಕಟ್ಟೆಚ್ಚರ ವಹಿಸಲಾಗಿದೆ.

ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯ ಕೇಂದ್ರ ಬಿಂದುವಾಗಿರುವ ಗಜಪಡೆಗೆ ಎಲ್ಲಿಲ್ಲದ ಮಹತ್ವವಿದ್ದು, ಅವುಗಳ ಪಾಲನೆ ಮತ್ತು ಪೋಷಣೆಗೆ ಹೆಚ್ಚಿನ ಗಮನ ನೀಡಲಾಗುತ್ತಿದೆ. ಅಲ್ಲದೆ ಆನೆಗಳ ರಕ್ಷಣೆಗೂ ಅರಣ್ಯ ಇಲಾಖೆ ಆದ್ಯತೆ ನೀಡಿದೆ. ಅರಮನೆಯ ಆವರಣದಲ್ಲಿ ಈಗಾಗಲೇ ಮೊದಲ ತಂಡದಲ್ಲಿ ಆಗಮಿಸಿರುವ ಅಭಿಮನ್ಯು ನೇತೃತ್ವದ 9 ಆನೆಗಳಿಗೆ ಪೌಷ್ಟಿಕ ಆಹಾರ ನೀಡುವ ಮೂಲಕ ಅವುಗಳ ಆರೈಕೆಗೆ ಕ್ರಮ ಕೈಗೊಳ್ಳಲಾಗಿದೆ. ಈ ನಡುವೆ ಅರಮನೆಗೆ ಆಗಮಿಸುವ ಪ್ರವಾಸಿಗರಲ್ಲಿ ಹಲವರು ದಸರಾ ಗಜಪಡೆಯನ್ನು ಕಣ್ತುಂಬಿಕೊಳ್ಳಲು ಬಯಸುವುದರಿಂದ ಆನೆಗಳ ಬಳಿ ನುಸುಳುವ ಸಾಧ್ಯತೆ ಇದೆ. ಹಾಗಾಗಿ ಆನೆಗಳ ಭದ್ರತೆಗಾಗಿ ಆಯಕಟ್ಟಿನ ಸ್ಥಳದಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿ ಅವುಗಳ ಚಲನ–ವಲನಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ.

ಪ್ರತಿವರ್ಷದಂತೆ ಚಿನ್ನದ ಅಂಬಾರಿ ಹೊರುವ ಆನೆಯನ್ನು ಪ್ರತ್ಯೇಕವಾಗಿ ಇರಿಸುವ ಪದ್ಧತಿ ಮುಂದುವರೆಸಲಾಗಿದ್ದು, ಅಂಬಾರಿ ಆನೆ ಅಭಿಮನ್ಯು ಹಾಗೂ ಕುಮ್ಕಿ ಆನೆ ಚೈತ್ರಳನ್ನು ಪ್ರತ್ಯೇಕವಾಗಿ ಶೆಡ್ ನಿರ್ಮಿಸಿ, ಅರಮನೆಯ ಆವರಣದಲ್ಲಿರುವ ಕೋಡಿ ಸೋಮೇಶ್ವರ ದೇವಾಲಯದ ಬಳಿ ಕಟ್ಟಿ ಹಾಕಲಾಗಿದೆ ಹಾಗಾಗಿ ಇವೆರಡು ಆನೆಗಳ ಮೇಲೆ ಎಲ್ಲಿಲ್ಲದ ಕಾಳಜಿ ವಹಿಸಲಾಗಿದೆ.



ಗಜಪಡೆಯ ಮೇಲೆ ಸೂಕ್ಷ್ಮ ಗ್ರಹಿಕೆಗಾಗಿ ಕ್ಯಾಮರಾ ಬಳಕೆ

“ದಸರಾ ಆನೆಗಳು ನಮ್ಮ ವಶದಲ್ಲಿರುವುದರಿಂದ ಅವುಗಳ ಭದ್ರತೆ ಮತ್ತು ಕಾಳಜಿ ವಹಿಸುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಅಪರಿಚಿತರು ಆನೆಗಳ ಬಳಿ ಹೋಗುವುದನ್ನು ಗಮನಿಸಲು ಹಾಗೂ ಆನೆಗಳ ವರ್ತನೆಯನ್ನು ದಿನದ 24 ಗಂಟೆಯೂ ಸೂಕ್ಷ್ಮವಾಗಿ ಅವಲೋಕಿಸಲು ಸಿಸಿ ಕ್ಯಾಮರಾ ನೆರವಾಗಲಿದೆ. ಈ ಬಾರಿ 8 ಕ್ಯಾಮರಾ ಅಳವಡಿಸಲಾಗಿದೆ. ಯಾವುದೇ ಕಾರಣಕ್ಕೂ ರೆಕಾರ್ಡಿಂಗ್ ಸ್ಥಗಿತಗೊಳ್ಳದಂತೆ ಹೆಚ್ಚುವರಿ ಬ್ಯಾಟರಿ ವ್ಯವಸ್ಥೆ ಮಾಡಲಾಗಿದೆ. ಮೊಬೈಲ್ ಮೂಲಕವೂ ಸಿಸಿ ಕ್ಯಾಮರಾ ದೃಶ್ಯಾವಳಿ ಗಮನಿಸುವ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಆನೆಗಳ ಭದ್ರತೆಗೆ ಸಿಬ್ಬಂದಿಗಳನ್ನು ನಿಯೋಜಿಸಿದ್ದರೂ, ಸಿಸಿ ಕ್ಯಾಮರಾ ಅಳವಡಿಸಿ ಹೆಚ್ಚಿನ ಗಮನ ಹರಿಸಲಾಗುತ್ತಿದೆ.

– ಡಾ.ವಿ.ಕರಿಕಾಳನ್, ಡಿಸಿಎಫ್

ದಸರಾ ಗಜಪಡೆಯ ಮೇಲಿನ ಭದ್ರತೆಗಾಗಿ ಈಗಾಗಲೇ ಅರಣ್ಯ ಸಿಬ್ಬಂದಿ ಹಾಗೂ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಆನೆಗಳ ಬಳಿ ನುಸುಳುವಿಕೆ ತಡೆಗೆ ಆನೆ ಕ್ಯಾಂಪ್ ಇರುವ ಸ್ಥಳಕ್ಕೆ ಹೋಗುವ ರಸ್ತೆಗೆ ಬ್ಯಾರಿಕೇಡ್ ಹಾಕಿ ಜನರು ಆನೆಗಳ ಬಳಿ ಹೋಗದಂತೆ ಕ್ರಮ ಕೈಗೊಳ್ಳಲಾಗಿದೆ. ಆದರೆ, ದಿನದ 24 ಗಂಟೆಯೂ ಹದ್ದಿನ ಕಣ್ಣಿಡಲು ಈಗ ಸಿಸಿ ಕ್ಯಾಮರಾಗಳ ಮೊರೆ ಹೋಗಲಾಗಿದೆ.

8 ಸಿಸಿ ಕ್ಯಾಮರಾ: ದಸರಾ ಗಜಪಡೆಯ ಮೇಲೆ ಸೂಕ್ಷ್ಮ ದೃಷ್ಟಿ ಹಾಯಿಸಲು 8 ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಪ್ರಮುಖವಾಗಿ ಗಜಪಡೆಗೆ ಪೌಷ್ಟಿಕ ಆಹಾರ ತಯಾರಿಸುವ ಸ್ಥಳ, ಆಹಾರ ನೀಡುವ ಸ್ಥಳ, ಅಂಬಾರಿ ಆನೆ ಇರುವ ಸ್ಥಳ, ಮಾವುತರ ಶೆಡ್ ಬಳಿ, ಒಣ ಹುಲ್ಲು ಸಂಗ್ರಹ ಘಟಕ ಹಾಗೂ ಎರಡು ಸ್ಥಳದಲ್ಲಿ ಬೀಡು ಬಿಟ್ಟಿರುವ ಎಲ್ಲಾ ಆನೆಗಳ ಚಿತ್ರಣವೂ ಕಾಣುವಂತೆ ಒಟ್ಟು 8 ಕ್ಯಾಮರಾಗಳನ್ನು ಅಳವಡಿಸಲಾಗಿದೆ.



ಡಿಆರ್‌ಎಫ್‌ಓ ಲಕ್ಷ್ಮೀದೇವಿ ಅವರು ಸಿಸಿ ಕ್ಯಾಮರಾ ದೃಶ್ಯಾವಳಿ ವೀಕ್ಷಿಸುತ್ತಿರುವುದು

ಒಂದು ತಿಂಗಳವರೆಗೂ ದಾಖಲೆ: ಗಜಪಡೆಯ ಮೇಲೆ ಇರುವ ಸಿಸಿ ಕ್ಯಾಮರಾಗಳ ಹದ್ದಿನ ಕಣ್ಣಿನಲ್ಲಿ ರೆಕಾರ್ಡ್ ಆಗುವ ದೃಶ್ಯಾವಳಿಯು ಒಂದು ತಿಂಗಳವರೆಗೂ ದಾಖಲಾಗುವ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ವಿದ್ಯುತ್ ಕಡಿತವಾದರೆ ರೆಕಾರ್ಡಿಂಗ್ ಸ್ಥಗಿತಗೊಳ್ಳಬಹುದೆಂಬ ಆತಂಕದಿಂದ ಪ್ರತ್ಯೇಕ ಬ್ಯಾಟರಿ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಆನೆಗಳ ಚಲನವಲನದ ದೃಶ್ಯಗಳು ಸಂಪೂರ್ಣವಾಗಿ ದಾಖಲೀಕರಿಸಲಾಗುತ್ತಿದೆ.

ಮೊಬೈಲ್‌ನಲ್ಲಿ ವೀಕ್ಷಣೆ: ಅರಮನೆ ಆವರಣದಲ್ಲಿರುವ ದಸರಾ ಗಜಪಡೆಯನ್ನು ಗಮನಿಸಲು ಅಳವಡಿಸಿರುವ ಸಿಸಿ ಕ್ಯಾಮರಾಗಳ ದೃಶ್ಯ ಆನೆ ಕ್ಯಾಂಪ್ ಬಳಿಯೇ ಪರದೆಯ ಮೇಲೆ ಬಿತ್ತರವಾಗುತ್ತಿದೆ. ಅದನ್ನು ವೀಕ್ಷಿಸಲು ಅರಣ್ಯ ಸಿಬ್ಬಂದಿಯೊಬ್ಬರನ್ನು ನಿಯೋಜಿಸಲಾಗಿದೆ. ಇದರ ಜೊತೆಗೆ ಡಿಸಿಎಫ್ ಡಾ.ವಿ.ಕರಿಕಾಳನ್ ಹಾಗೂ ಆರ್‌ಎಫ್‌ಓ ಸಂತೋಷ್ ಹೂಗಾರ್ ಅವರ ಮೊಬೈಲ್‌ನಲ್ಲಿಯೇ ಸಿಸಿ ಕ್ಯಾಮರಾ ದೃಶ್ಯಾವಳಿ ವೀಕ್ಷಿಸಬಹುದಾಗಿದೆ. ಇದರಿಂದ ಅಧಿಕಾರಿಗಳು ಅರಮನೆ ಆವರಣದಲ್ಲಿ ಇಲ್ಲದೇ ಇದ್ದರೂ ಆನೆಗಳ ಚಲನವಲನಗಳನ್ನು ತಾವಿರುವ ಸ್ಥಳದಿಂದಲೇ ವೀಕ್ಷಿಸಬಹುದಾಗಿದೆ.

ಮಾಜಿ ಸಿಎಂ ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆತ ವಿರೋಧಿಸಿ

ಅರಸು ಕಲ್ಲಹಳ್ಳಿ–ಮಡಿಕೇರಿವರೆಗೆ ಸೌಹಾರ್ದ ನಡಿಗೆ



ಮೈಸೂರು,ಆ.21(ಪಿಎಂ)– ಮಡಿಕೇರಿಯಲ್ಲಿ ಮಾಜಿ ಮುಖ್ಯಮಂತ್ರಿಗಳೂ ಆದ ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯನವರ ಕಾರಿನ ಮೇಲೆ ಮೊಟ್ಟೆ ಎಸೆದು, ಕಪ್ಪು ಬಾವುಟ ಪ್ರದರ್ಶಿಸಿದ್ದನ್ನು ಖಂಡಿಸಿ ಹಾಗೂ ಕೋಮು ಸಾಮರಸ್ಯಕ್ಕಾಗಿ 'ಸೌಹಾರ್ದ ನಡಿಗೆ' ಶೀರ್ಷಿಕೆಯಡಿ ಹುಣಸೂರಿನ ಅರಸು ಕಲ್ಲಹಳ್ಳಿಯಿಂದ ಮಡಿಕೇರಿವರೆಗೆ ಪಾದಯಾತ್ರೆ ಹಮ್ಮಿಕೊಂಡಿದ್ದು, ಆ.23ರಂದು ಪಾದಯಾತ್ರೆ ಆರಂಭಗೊಳ್ಳಲಿದೆ ಎಂದು ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಜಂಟಿ ಆಶ್ರಯದಲ್ಲಿ ಈ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಆ.23ರಂದು ಬೆಳಗ್ಗೆ 9ಕ್ಕೆ ಹುಣಸೂರಿನ ಅರಸು ಕಲ್ಲಹಳ್ಳಿಯ ಡಿ.ದೇವರಾಜ ಅರಸು ಸಮಾಧಿ ಸ್ಥಳದಿಂದ ಪಾದಯಾತ್ರೆ ಆರಂಭಗೊಳ್ಳಲಿದೆ. ಅಂದು ರಾತ್ರಿ ಪಿರಿಯಾಪಟ್ಟಣದಲ್ಲಿ ವಾಸ್ತವ್ಯ ಹೂಡಲಾಗುವುದು ಎಂದರು.

ಆ.24ರಂದು ಕುಶಾಲನಗರ ತಲುಪಿ, ರಾತ್ರಿ ವೇಳೆಗೆ ವಾಸ್ತವ್ಯ ಹೂಡಲಾಗುವುದು. ಆ.25ರಂದು ಕುಶಾಲನಗರದಿಂದ ಹೊರಟು ಮಡಿಕೇರಿ ತಲುಪಿ ಇಲ್ಲಿ ವಾಸ್ತವ್ಯ ಹೂಡುವುದರೊಂದಿಗೆ ನಡಿಗೆ ಮುಕ್ತಾಯಗೊಳ್ಳಲಿದೆ. ಸುಮಾರು 200 ಮಂದಿ ಈ ನಡಿಗೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಹೇಳಿದರು.

ನಡಿಗೆಯ ಚಾಲನೆ ಕಾರ್ಯಕ್ರಮದಲ್ಲಿ ಸಮಾಜವಾದಿ ಪ.ಮಲ್ಲೇಶ್, ಪ್ರಗತಿಪರ ಚಿಂತಕರಾದ ಜಯಪ್ರಕಾಶ್, ಪ್ರೊ.ಮಹೇಶ್ ಚಂದ್ರಗುರು, ಪ್ರೊ.ಕೆ.ಎಸ್.ಭಗವಾನ್, ಶಾಸಕರಾದ ಹೆಚ್.ಪಿ.ಮಂಜುನಾಥ್, ಡಾ.ಯತೀಂದ್ರ ಸಿದ್ದರಾಮಯ್ಯ, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಸದಸ್ಯ ಧರ್ಮಸೇನ, ಮಾಜಿ ಸಚಿವ ಕೆ.ವೆಂಕಟೇಶ್, ಜಿಪಂ ಮಾಜಿ ಅಧ್ಯಕ್ಷ ಕೆಮರೀಗೌಡ, ಕಾಂಗ್ರೆಸ್ ಮುಖಂಡ ಹರೀಶ್‌ಗೌಡ ಸೇರಿದಂತೆ ಮತ್ತಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ರಾಜ್ಯ ಬಿಜೆಪಿ ಸರ್ಕಾರ ಕೋಮುವಾದಿಗಳಿಗೆ ಕುಮ್ಮಕ್ಕು ನೀಡುತ್ತಿದೆ. ಇದರಿಂದ ರಾಜ್ಯದಲ್ಲಿ ಕೋಮು ಸಾಮರಸ್ಯಕ್ಕೆ ಧಕ್ಕೆ ಉಂಟಾಗುತ್ತಿದೆ. ಧರ್ಮ–ಧರ್ಮಗಳ ನಡುವೆ, ಜಾತಿ–ಜಾತಿಗಳ ನಡುವೆ ಕಂದಕ ಸೃಷ್ಟಿ ಮಾಡಲಾಗುತ್ತಿದೆ. ರಾಜ್ಯದ ಬೆಳವಣಿಗೆಗಳನ್ನು ನೋಡಿದರೆ ಆತಂಕ ಮೂಡುತ್ತದೆ. ಈ ಹಿನ್ನೆಲೆಯಲ್ಲಿ ಕೋಮುವಾದ ಅಳಿಯಲಿ, ಕರ್ನಾಟಕ ಬೆಳಗಲಿ ಎಂಬ ಆಶಯದೊಂದಿಗೆ ಸೌಹಾರ್ದತೆಯ ಸಂದೇಶ ಸಾರಲು ಈ ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಜಿಲ್ಲಾಧ್ಯಕ್ಷ ಡಿ.ನಾಗಭೂಷಣ್, ಜಿಲ್ಲಾ ಸವಿತ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಜಿಲ್ಲಾ ಕುಂಬಾರರ ಸಂಘದ ಅಧ್ಯಕ್ಷ ಹೆಚ್.ಎಸ್.ಪ್ರಕಾಶ್, ಹಿಂದುಳಿದ ವರ್ಗಗಳ ಮುಖಂಡ ಲೋಕೇಶ್ ಕುಮಾರ್ ಮಾದಮರ ಗೋಷ್ಠಿಯಲ್ಲಿದ್ದರು.

ಆ.26ರಂದು ಬನಾರಸ್ ಹಿಂದೂ ವಿವಿಯಲ್ಲಿ ಗಾಯನ, ಜಾನಪದ ಕಲೆಗಳ ಪ್ರದರ್ಶನ




ಮೈಸೂರು,ಆ.21(ಪಿಎಂ)– ಉತ್ತರ ಪ್ರದೇಶದ ವಾರಣಾಸಿಯ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ (ಬಿಹೆಚ್‌ಯು) ಆವರಣದಲ್ಲಿ ಆ.26ರಂದು ಒಕ್ಕಲಿಗರ ವಿಕಾಸ ವೇದಿಕೆಯ ಅಂಗಸಂಸ್ಥೆಯಾದ ವಿಶ್ವಮಾನವ ಸಂಗೀತ ಪ್ರತಿಷ್ಠಾನದ ವತಿಯಿಂದ ಗಾಯನ ಹಾಗೂ ಕರ್ನಾಟಕದ ವಿವಿಧ ಜಾನಪದ ಕಲೆಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷೆ ಹೆಚ್.ಎಲ್.ಯಮುನಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬನಾರಸ್ ಹಿಂದೂ ವಿವಿ ಸ್ಥಾಪನೆಗೆ ಸಹಕಾರ ನೀಡಿ ಸಹ ಸಂಸ್ಥಾಪಕರಾಗಿದ್ದಾರೆ. ಅವರ ಸ್ಮರಣಾರ್ಥ ಹಾಗೂ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಬನಾರಸ್ ಹಿಂದೂ ವಿವಿ ಪ್ರದರ್ಶಕ ಕಲೆಗಳ ವಿಭಾಗದ ಸಹಯೋಗದೊಂದಿಗೆ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಬಿಹೆಚ್‌ಯು ಆವರಣದ ಭಾರತ ರತ್ನ ಪಂಡಿತ್ ರವಿಶಂಕರ್ ಬಯಲು ರಂಗಮಂದಿರದಲ್ಲಿ 'ಕಾಶಿಯಲ್ಲಿ ಶಿವ–ಗಂಗಾ ಗಾನಯಾನ ; ನಾಲ್ವಡಿ ನಮನ, ನೂರು ದನಿಗಳ ಗಾಯನ' ಶೀರ್ಷಿಕೆಯಡಿ ಅಂದು ಮಧ್ಯಾಹ್ನ 3ರಿಂದ ಸಂಜೆ 6ರವರೆಗೆ ಗಾಯನ, ಜಾನಪದ ಕಲೆಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ವಾರಣಾಸಿಯ ಶ್ರೀ ಆದಿಚುಂಚನಗಿರಿ ಶಾಖಾ ಮಠದ ಶ್ರೀ ವಿಜಯೇಂದ್ರನಾಥ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದಾರೆ. ಉತ್ತರ ಪ್ರದೇಶದ ವಿಹಂಗಮ ಯೋಗದ ಮಹಿಳಾ ಘಟಕದ ಮುಖ್ಯಸ್ಥೆ ಸುನೀತಾ ಸಿಂಗ್, ಕರ್ನಾಟಕ ಖಾದಿ ಬೋರ್ಡ್‌ನ ಕಾರ್ಯಕಾರಿ ಸಮಿತಿ ಸದಸ್ಯ ಎಂ.ನರಸಿಂಹಮೂರ್ತಿ, ಕರ್ನಾಟಕ ಜಾನಪದ ಪರಿಷತ್‌ನ ಡಾ.ಎಸ್.ಬಾಲಾಜಿ, ಜಾನಪದ ವಿದ್ವಾಂಸ ಡಾ.ಹಾಯಿಯೂರು ಚಂದ್ರೇಗೌಡ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯೆ ಎಸ್.ಜಿ.ಲಕ್ಷ್ಮೀದೇವಮ್ಮ ಹಾಗೂ ಗಾಯಕ ಲಕ್ಷ್ಮೀರಾಮ್ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ. ಆ.23ರಂದು ರಾಜ್ಯದ 350 ಜಾನಪದ ಕಲಾವಿದರೊಂದಿಗೆ ವಾರಣಾಸಿಗೆ ಪ್ರಯಾಣ ಬೆಳೆಸಲಿದ್ದೇವೆ ಎಂದರು. ಗಾಯಕರಾದ ಲಕ್ಷ್ಮೀರಾಮ್, ಪದ್ಮಾ ಗೀತಾ ಗೋಷ್ಠಿಯಲ್ಲಿದ್ದರು.

ಮೈಸೂರಿನಲ್ಲಿ ಕಿಂಗ್ಸ್ ಕ್ಯೂ ಸ್ಪೋರ್ಟ್ಸ್ ಬಾರ್ ಪ್ರಾರಂಭ



ಮೈಸೂರಿನಲ್ಲಿ ಮೊಟ್ಟ ಮೊದಲ ಸ್ಪೋರ್ಟ್ಸ್ ಬಾರ್ 'ಕಿಂಗ್ಸ್ ಕ್ಯೂ ಲೆ ಸಿಜ್ಲರ್ಸ್ ಲಾಂಜ್' ಆ.15ರಂದು ಉದ್ಘಾಟನೆಗೊಂಡಿದೆ. ಈ ವೇಳೆ ಮಾಯಾಸ್ ಗ್ರೂಪ್ ಆಫ್ ಹೋಟೆಲ್‌ನ ಎಂಡಿ ವಾಸುದೇವ್ ಕಾಮತ್, ಚಿತ್ರನಟಿ ಪಾಯಲ್ ರಾಧಾಕೃಷ್ಣ ಮತ್ತಿತರರು ಉಪಸ್ಥಿತರಿದ್ದರು. ಕಿಂಗ್ಸ್ ಕೋರ್ಟ್ ಬೈ ಮಾಯಾಸ್‌ನಲ್ಲಿ, ಒಬ್ಬರು 100 ವಿಧದ ತಿನಿಸುಗಳನ್ನು ಸವಿಯಬಹುದು ಹಾಗೂ ದೊಡ್ಡ ಟಿವಿ ಪರದೆಯಲ್ಲಿ ನೆಚ್ಚಿನ ಕ್ರೀಡೆಗಳನ್ನು ನೇರ ಪ್ರಸಾರದಲ್ಲಿ ವೀಕ್ಷಿಸಿ, ಆನಂದಿಸಬಹುದಾಗಿದೆ.

ಆರೋಗ್ಯ ಕ್ಷೇತ್ರದಲ್ಲಿ ಡಿಜಿಟಲ್ ಮಾಧ್ಯಮ, ತಂತ್ರಜ್ಞಾನದ ಪಾತ್ರ ಮಹತ್ತರ

ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಹೇಮಾ ದಿವಾಕರ್ ಅಭಿಪ್ರಾಯ



ಮೈಸೂರು, ಆ.21– ಆರೋಗ್ಯ ಕ್ಷೇತ್ರವನ್ನು ಮುಂದಿನ ಹಂತಕ್ಕೆ ಇನ್ನೂ ಪರಿಣಾಮಕಾರಿಯಾಗಿ ಕೊಂಡೊಯ್ಯುವಲ್ಲಿ ಡಿಜಿಟಲ್ ಮಾಧ್ಯಮ ಮತ್ತು ತಂತ್ರಜ್ಞಾನಗಳು ಮಹತ್ತರ ಪಾತ್ರ ವಹಿಸಿವೆ ಎಂದು ಖ್ಯಾತ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಹೇಮಾ ದಿವಾಕರ್ ಅಭಿಪ್ರಾಯಪಟ್ಟರು.

ನಗರದ ಖಾಸಗಿ ಹೋಟೆಲ್‌ವೊಂದರಲ್ಲಿ ಭಾನುವಾರ ಡಾ.ಎಸ್.ಎನ್.ಕೌಲ್ಗುಡ್ ಸ್ಮರಣಾರ್ಥ ಮೈಸೂರು ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ ಸಮಾಜ ಹಮ್ಮಿಕೊಂಡಿದ್ದ ವೈದ್ಯಕೀಯ ವಿಚಾರಗಳ ಚಿಂತನ–ಮಂಥನದಲ್ಲಿ ಅವರು ಮಾತನಾಡಿದರು.

ಡಿಜಿಟಲ್ ಮಾಧ್ಯಮದ ಪರಿಣಾಮಕಾರಿ ಬಳಕೆ ವೈದ್ಯಕೀಯ ಕ್ಷೇತ್ರಕ್ಕೆ ಅನುಕೂಲಕರವಾಗಿದೆ. ಅರೆ ವೈದ್ಯಕೀಯ ಸಿಬ್ಬಂದಿ, ಮುಂಚೂಣಿ ಕೆಲಸಗಾರರಿಗೆ ಜಾಗೃತಿ ಅಥವಾ ವಿಷಯಗಳನ್ನು ಸೂಕ್ತರೀತಿಯಲ್ಲಿ ತಲುಪಿಸಲು ಹಾಗೂ ಕಲಿಕೆಯ ನಿಟ್ಟಿನಲ್ಲಿ ಡಿಜಿಟಲ್ ಸಂವಹನ ಸಹಕಾರಿಯಾಗುತ್ತದೆ. ಹಳ್ಳಿಯಿಂದ ದಿಲ್ಲಿಯವರೆಗೆ ಎಂಬಂತೆ ದೇಶದ ಮೂಲೆ ಮೂಲೆಗೂ ವೈದ್ಯಕೀಯ ಸೇವೆಯನ್ನು ತುರ್ತಾಗಿ ನೀಡುವಲ್ಲಿ ತಂತ್ರಜ್ಞಾನ ಪ್ರಮುಖ ಪಾತ್ರವಹಿಸುತ್ತದೆ ಎಂದರು.

ಡಿಜಿಟಲ್ ಮಾಧ್ಯಮ ಮತ್ತು ತಂತ್ರಜ್ಞಾನದ ಸಹಾಯದಿಂದ ಮುಂದಿನ ಕೆಲವೇ ವರ್ಷಗಳಲ್ಲಿ ಖಂಡಿತಾ ಇನ್ನೂ ಉತ್ಕೃಷ್ಟ ಆರೋಗ್ಯ ಸೇವೆಯನ್ನು ಒದಗಿಸಬಹುದು. ಕೋವಿಡ್ –19 ಸಂದರ್ಭದಲ್ಲಿ ಹೆಚ್ಚು ಪ್ರವರ್ಧಮಾನಕ್ಕೆ ಬಂದ ಪಲ್ಸ್ ಆಕ್ಸಿಮೀಟರ್ ಸಾಧನ ಬಳಕೆಯಂತೆ ರಕ್ತದೊತ್ತಡ, ಗರ್ಭದಲ್ಲಿರುವ ಮಗುವಿನ ಹೃದಯದ ಬಡಿತದ ಪರೀಕ್ಷಾ ಸಾಧನ ಸೇರಿದಂತೆ ಅನೇಕ ವೈದ್ಯಕೀಯ ಪ್ರಾಥಮಿಕ ಸಾಧನಗಳನ್ನು ಸುಲಭದಲ್ಲಿ ಪರಿಚಯಿಸುವ ಮತ್ತು ಬಳಕೆ ಮಾಡುವಂತೆ ಮಾಡುವ ಮೂಲಕ ಅತ್ಯುತ್ತಮ ಆರೋಗ್ಯ ಸೇವೆಯನ್ನು ನೀಡಬಹುದೆಂದರು.

ಡಾ.ಕೌಲ್ಗುಡು ಅವರನ್ನು, ಡಾ.ಹೇಮಾ ದಿವಾಕರ್ ಸ್ಮರಿಸಿದರು. ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ನೀಲ್‌ಗಾರ್, ಡಾ.ರೂಪಾ ಪ್ರಕಾಶ್, ಡಾ.ಪುಷ್ಪಲತಾ, ಡಾ.ಶ್ವೇತಾ ವಿ.ಪದಕಿ, ಡಾ.ವಿದ್ಯಾಭಟ್, ಡಾ.ಅಂಬರೀಶ ಭಂಡಿವಾಡ, ವಿದ್ಯಾ ತೋಬಿ ಮತ್ತಿತರರಿದ್ದರು.

ಭಾರ ಹೊತ್ತು ಅನಾಯಾಸವಾಗಿ ಸಾಗಿದ ಬಲ ಭೀಮ

ಮೈಸೂರು, ಆ.21(ಎಂಟಿವೈ)– ದಸರಾ ಮಹೋತ್ಸವದ ಭರವಸೆಯ ಆನೆಗಳಲ್ಲಿ ಒಂದೆನಿಸಿರುವ ಭೀಮ ಭಾನುವಾರು 450 ಕೆಜಿ ಭಾರ ಹೊತ್ತು ಸಾಗುವ ಮೂಲಕ ಗಮನ ಸೆಳೆದ.

ನಾಡಹಬ್ಬ ದಸರಾ ಮಹೋತ್ಸವದಲ್ಲಿ 2019ರಲ್ಲಿ ಮೊದಲ ಬಾರಿಗೆ ಪಾಲ್ಗೊಂಡಿದ್ದ ಮತ್ತಿಗೂಡು ಕ್ಯಾಂಪ್‌ನ ಭೀಮ(22) ಈ ಬಾರಿ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿದೆ. ಎರಡನೇ ಬಾರಿ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ಭೀಮ ಆನೆ ಇಂದು ಮೊಟ್ಟ ಮೊದಲ ಬಾರಿಗೆ ಭಾರ ಹೊರುವ ತಾಲೀಮಿನಲ್ಲಿ ಪಾಲ್ಗೊಂಡು ಗಮನ ಸೆಳೆಯಿತು. 200 ಕೆ.ಜಿ. ಮರಳಿನ ಮೂಟೆಯೊಂದಿಗೆ ಗಾದಿ, ನಮ್ದಾ ಸೇರಿದಂತೆ ಒಟ್ಟು 450 ಕೆಜಿ ತೂಕವನ್ನು ಹೊತ್ತು ಅರಮನೆ ಆವರಣದಿಂದ ಬನ್ನಿಮಂಟಪದವರೆಗೆ (5 ಕಿ.ಮೀ) ಯಶಸ್ವಿಯಾಗಿ ಹೆಜ್ಜೆ ಹಾಕಿ ಭರವಸೆ ಹೆಚ್ಚಿಸಿತು.

ಅರಮನೆ ಅಂಗಳದಿಂದ ಭಾರ ಹೊತ್ತು ತಾಲೀಮು ಆರಂಭಿಸಿದ ಭೀಮ ಕೆಆರ್.ವೃತ್ತ ಸಯ್ಯಾಜಿರಾವ್ ರಸ್ತೆ, ಬಂಬೂಬಜಾರ್, ಹೈವೇ ವೃತ್ತದ ಮೂಲಕ ಬನ್ನಿಮಂಟಪದ ಪಂಜಿನ ಕವಾಯತ್ ಮೈದಾನ ತಲುಪಿತು. 5 ಕಿಮಿ ಅಂತರವನ್ನು 1.20 ಗಂಟೆಯಲ್ಲೇ ತಲುಪುವ ಮೂಲಕ ತನ್ನ ಸಾಮರ್ಥ್ಯ ಸಾಬೀತುಪಡಿಸಿತು. ತಾಲೀಮಿನಲ್ಲಿ ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲಿ ಮಾಜಿ ನಾಯಕ ಅರ್ಜುನ, 'ಧನಂಜಯ, ಗೋಪಾಲಸ್ವಾಮಿ, ಮಹೇಂದ್ರ, ಕಾವೇರಿ, ಚೈತ್ರ ಹಾಗೂ ಲಕ್ಷ್ಮೀ ಆನೆಗಳು ರಾಜ ಗಾಂಭೀರ್ಯದಿಂದ ಹೆಜ್ಜೆ ಹಾಕಿದವು.



ಅಂಬಾರಿ ಆನೆ ತಯಾರಿಗಾಗಿ ಪ್ರಯೋಗ

ಮೊದಲ ತಂಡದ 6 ಗಂಡಾನೆಗಳಲ್ಲಿ ವಯಸ್ಸಿನ ಕಾರಣ ಅರ್ಜುನ ಆನೆಯನ್ನು ಹೊರತುಪಡಿಸಿ ಉಳಿದ 5 ಆನೆಗಳಿಗೆ ಭಾರ ಹೊರಿಸುವ ತಾಲೀಮು ನಡೆಸಲಾಗುತ್ತಿದೆ. ಈಗಾಗಲೇ ಗಜಪಡೆಯ ನಾಯಕ ಅಭಿಮನ್ಯು, ಗೋಪಾಲಸ್ವಾಮಿ, ಮಹೇಂದ್ರ ಹಾಗೂ ಭೀಮ ಆನೆಗೆ ಭಾರ ಹೊರಿಸುವ ತಾಲೀಮು ನಡೆಸಲಾಗಿದೆ. ಸೋಮವಾರ ಧನಂಜಯ ಆನೆಗೆ ಭಾರ ಹೊರಿಸಲಾಗುತ್ತದೆ. ಮುಂಬರುವ ವರ್ಷಗಳಲ್ಲಿ ಅಂಬಾರಿ ಹೊರುವ ಹೊಸ ಆನೆಯನ್ನು ಸಜ್ಜುಗೊಳಿಸಲು ಬೇರೆ ಬೇರೆ ಆನೆಗಳಿಗೆ ಭಾರ ಹೊರಿಸುವ ತಾಲೀಮು ನಡೆಸಲಾಗುತ್ತಿದೆ.

– ಡಾ.ವಿ.ಕರಿಕಾಳನ್, ಡಿಸಿಎಫ್

ವೈಷ್ಣೋದೇವಿ ಯಾತ್ರೆ ಮತ್ತೆ ಆರಂಭ

ಬೆಂಗಳೂರು, ಆ.21– ಭಾನುವಾರ(ಆ.21)ದಿಂದ ವೈಷ್ಣೋದೇವಿ ಯಾತ್ರೆ ಮತ್ತೆ ಆರಂಭವಾಗಿದೆ ನಿರಂತರ ಮಳೆ, ಪ್ರತಿಕೂಲ ಹವಾಮಾನದ ಹಿನ್ನೆಲೆಯಲ್ಲಿ ಸ್ಥಗಿತಗೊಂಡಿದ್ದ ವೈಷ್ಣೋದೇವಿ ಯಾತ್ರೆ ಪುನರಾರಂಭಗೊಂಡಿದೆ. ಹವಾಮಾನ ವೈಪರೀತ್ಯದಿಂದಾಗಿ ಹೆಲಿಕಾಪ್ಟರ್ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಯಾತ್ರೆಯನ್ನು ಆಗಸ್ಟ್ 21ರ ಬೆಳಗಿನ ಜಾವದವರೆಗೆ ಸ್ಥಗಿತಗೊಳಿಸಲಾಗಿತ್ತು. ಸ್ಥಳದಲ್ಲಿ ಯಾತ್ರಾರ್ಥಿಗಳ ಅನುಕೂಲಕ್ಕೆ ಪೊಲೀಸರು ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಸಿಬ್ಬಂದಿಯನ್ನು ಈಗಾಗಲೇ ನಿಯೋಜಿಸಲಾಗಿದೆ. ಪರಿಸ್ಥಿತಿ ಬಗ್ಗೆ ಮಂಡಳಿಯು ನಿಗಾ ವಹಿಸುತ್ತಿದೆ.

ಮೂಗೂರು ದೇವಾಲಯದಲ್ಲಿ ಕಳಸ ಪ್ರತಿಷ್ಠಾಪನೆ, ಪುಷ್ಕರಿಣಿ, ರಥ ಲೋಕಾರ್ಪಣೆ

ದೇಶ, ರಾಜ್ಯದ ಏಳಿಗೆಗೆ ವಿರೋಧ ಪಕ್ಷದ ಸಹಕಾರ ಮುಖ್ಯ

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಭಿಪ್ರಾಯ



ತಿ.ನರಸೀಪುರ, ಆ.21– ದೇಶ ಮತ್ತು ರಾಜ್ಯದ ಏಳಿಗೆಗೆ ಆಡಳಿತ ಪಕ್ಷದ ಜೊತೆ ವಿರೋಧ ಪಕ್ಷದ ಸಹಕಾರ ಕೂಡ ಬಹಳ ಮುಖ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲೂಕಿನ ಮೂಗೂರು ಗ್ರಾಮದ ಶ್ರೀ ತ್ರಿಪುರ ಸುಂದರಿ ತಿಬ್ಬಾದೇವಿ ಅಮ್ಮನವರ ದೇವಸ್ಥಾನದಲ್ಲಿ 5.13 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಕಳಸ ಪ್ರತಿಷ್ಠಾಪನೆ, 5 ಕೋಟಿ ವೆಚ್ಚದ ಪುಷ್ಕರಣಿ, 2 ಕೋಟಿ ವೆಚ್ಚದ ರಥ ಲೋಕಾರ್ಪಣೆ ಮತ್ತು 7.5 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಳ್ಳಬೇಕಿರುವ ವಸತಿ ಗೃಹ ನಿರ್ಮಾಣದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಸರ್ಕಾರ ನಡೆಸುವುದು ಮುಖ್ಯವಲ್ಲ. ಅಧಿಕಾರ ಪಡೆಯುವುದು ಮುಖ್ಯವಲ್ಲ. ಜನರ ಆಶೋತ್ತರಗಳಿಗೆ ಸ್ಪಂದಿಸಿ ಉತ್ತಮ ಕಾರ್ಯಕ್ರಮ ಜಾರಿಗೆ ತರುವುದು ಬಹಳ ಮುಖ್ಯ ಎಂದರು.

ದೇವಸ್ಥಾನ ಅಭಿವೃದ್ಧಿಯಲ್ಲಿ ನನ್ನದೇನು ಪಾತ್ರವಿಲ್ಲ. ಸ್ಥಳೀಯ ಶಾಸಕರ ಭಗೀರಥ ಪ್ರಯತ್ನ ದೇವಾಲಯದ ಅಭಿವೃದ್ಧಿಗೆ ಕಾರಣವಾಗಿದೆ. ಇವರು ಅತ್ಯಂತ ಶಾಂತ ಸ್ವಭಾವದ ವ್ಯಕ್ತಿ, ಉತ್ತಮ ಕೆಲಸಗಾರ. ನನ್ನ ಮತ್ತು ಅವರ ಪ್ರತಿ ಭೇಟಿ ಅವರ ಹೊಸದೊಂದು ಪ್ರಸ್ತಾವನೆಯೊಂದಿಗೆ ಪ್ರಾರಂಭವಾಗುತ್ತದೆ. ಉತ್ಸಾಹಿ ಶಾಸಕರಲ್ಲಿ ಅಭಿವೃದ್ಧಿಯ ತುಡಿತ ತುಂಬಾ ಇದೆ ಎಂದು ಶಾಸಕ ಅಶ್ವಿನ್‌ಕುಮಾರ್ ಅವರನ್ನು ಹೊಗಳಿದರು.

ಶಾಸಕ ಎಂ.ಅಶ್ವಿನ್‌ಕುಮಾರ್ ಮಾತನಾಡಿ, ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಕಳಸಾ, ಪುಷ್ಕರಿಣಿ ಮತ್ತು ರಥ ನಿರ್ಮಾಣಕ್ಕೆ ಆಗಿನ ಉಸ್ತುವಾರಿ ಸಚಿವ ಸಾ.ರಾ. ಮಹೇಶ್ ಮತ್ತು ನೀರಾವರಿ ಮಂತ್ರಿ ಪುಟ್ಟರಾಜು ಅನುದಾನ ಬಿಡುಗಡೆ ಮಾಡಿದ್ದರು. ವಸತಿಗೃಹ ನಿರ್ಮಾಣಕ್ಕೆ ಹಾಲಿ ಉಸ್ತುವಾರಿ ಸಚಿವರು 7.5 ಕೋಟಿಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಿಸಿದ್ದಾರೆ. ಹಾಗಾಗಿ ದೇವಸ್ಥಾನದ ಅಭಿವೃದ್ಧಿಗೆ ಸಹಕರಿಸಿದ ಅವರಿಗೆ ದೇವಾಲಯದ ಆಡಳಿತ ಮಂಡಳಿ ಪರವಾಗಿ ಧನ್ಯವಾದ ಅರ್ಪಿಸುವುದಾಗಿ ತಿಳಿಸಿದರು.

ಪತ್ರಕರ್ತರಿಗೆ ಆಸನದ ವ್ಯವಸ್ಥೆ ಇಲ್ಲ: ಜಿಲ್ಲಾ ಉಸ್ತುವಾರಿ ಸಚಿವರ ಕಾರ್ಯಕ್ರಮದಲ್ಲಿ ಪತ್ರಕರ್ತರಿಗೆ ಆಸನದ ವ್ಯವಸ್ಥೆ ಇರಲಿಲ್ಲ. ಜಿಲ್ಲಾ ಮತ್ತು ತಾಲೂಕಿನ ಹಲವು ಪತ್ರಕರ್ತರು ನಿಂತುಕೊಂಡೇ ವರದಿ ಮಾಡಿಕೊಂಡರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ರಾಜ್ಯ ಕಾಂಪೋಸ್ಟ್ ನಿಗಮದ ಅಧ್ಯಕ್ಷ ಮಹದೇವಯ್ಯ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳ ಸೋಮಶೇಖರ್, ಮೈಸೂರು ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಮಡವಾಡಿ ಮಹೇಶ್, ಮಾಜಿ ಜಿಪಂ ಸದಸ್ಯ ಸೋಮಣ್ಣ, ತಾಪಂ ಮಾಜಿ ಸದಸ್ಯ ಚಂದ್ರಶೇಖರ್, ಬಿಜೆಪಿ ಕ್ಷೇತ್ರಾಧ್ಯಕ್ಷ ಕೆ.ಸಿ. ಲೋಕೇಶ್ ನಾಯಕ್, ಪುರಸಭಾ ಸದಸ್ಯ ಕಿರಣ್, ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ, ಉಪಾಧ್ಯಕ್ಷೆ ಮೋಹನ್ ಕುಮಾರ್, ಸಾಮ್ರಾಟ್ ಸುಂದರೇಶನ್, ಜೆಡಿಎಸ್ ಕ್ಷೇತ್ರ ಅಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಉಪವಿಭಾಗಾಧಿಕಾರಿ ಕಮಲಾಬಾಯಿ, ತಹಶೀಲ್ದಾರ್ ಸಿ.ಜಿ.ಗೀತಾ, ತಾಪಂ ಕಾರ್ಯ ನಿರ್ವಹಣಾಧಿಕಾ ಕೃಷ್ಣ, ಆರ್‌ಐ ಸಿದ್ದರಾಜು, ಮೂಗೂರು ಸಿದ್ದರಾಜು, ಶಿವಮೂರ್ತಿ ಇತರರಿದ್ದರು.

> 6 ಅಮ್ಮನವರ ಭಕ್ತರು ರಾಜ್ಯ, ಅಂತರ ರಾಜ್ಯದಲ್ಲೂ ಇದ್ದಾರೆ. ದೇವಸ್ಥಾನದ ಅಚ್ಚುಕಟ್ಟು ನಿರ್ಮಾಣ ಅವರೆಲ್ಲರ ಆಶಯವಾಗಿತ್ತು. ಹಾಗಾಗಿ ಎಲ್ಲರ ಇಚ್ಛೆಯಂತೆ ಅಮ್ಮನವರ ದೇವಾಲಯದ ಕಳಸ, ಕಲ್ಯಾಣಿ ಮತ್ತು ರಥ ಇಂದು ಲೋಕಾರ್ಪಣೆಗೊಂಡಿದೆ. ಇದು ನನಗೆ ಅತ್ಯಂತ ಸಂತಸ ತಂದಿದೆ. ಮುಂದಿನ ದಿನಗಳಲ್ಲೂ ದೇವಸ್ಥಾನದ ಅಭಿವೃದ್ಧಿಗೆ ಶ್ರಮಿಸುವೆ.
> – **ಸಿ.ಎಸ್.ಪುಟ್ಟರಾಜು,** ಪಾಂಡವಪುರ ಶಾಸಕ

ಮಕ್ಕಳ ಪ್ರತಿಭೆ ಅನಾವರಣಕ್ಕೆ ಪ್ರತಿಭಾ ಕಾರಂಜಿ ಸಹಕಾರಿ



ಪ್ರತಿಭಾ ಕಾರಂಜಿಯಲ್ಲಿ 15 ಶಾಲೆಗಳ ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಪ್ರದರ್ಶಿಸಿದರು. ಛದ್ಮವೇಷ, ಭಾಷಣ ಸ್ಪರ್ಧೆ, ಅಭಿನಂದನಾ ಗೀತೆ, ಜಾನಪದ ಗೀತೆ, ಚಿತ್ರಕಲೆ, ಕನ್ನಡ ಮತ್ತು ಇಂಗ್ಲಿಷ್ ಕಂಠಪಾಠ, ಭಾವಗೀತೆ, ಲಘು ಸಂಗೀತ, ಮಣ್ಣಿನ ಮಾಡೆಲ್, ಧಾರ್ಮಿಕ ಪಠಣ, ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಮಕ್ಕಳು ತಾಲೂಕು ಮಟ್ಟದ ಪ್ರತಿಭಾ ಕಾರಂಜಿಗೆ ಆಯ್ಕೆಯಾಗಲಿದ್ದಾರೆ.

ನಂಜನಗೂಡು, ಆ.21– ಮಕ್ಕಳ ಪ್ರತಿಭೆ ಅನಾವಣಕ್ಕೆ ಪ್ರತಿಭಾ ಕಾರಂಜಿ ಕಾರ್ಯಕ್ರಮ ಸಹಕಾರಿಯಾಗಿದೆ ಎಂದು ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ತಿಳಿಸಿದರು.

ತಾಲೂಕಿನ ದೇಬೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದೇಬೂರು ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಶಿಕ್ಷಿತರಾಗಬೇಕು. ಆಗ ಮಾತ್ರ ದೇಶ ಮುಂದುವರಿಯಲು ಸಾಧ್ಯ. ನಾಡಿನ ಸಂಸ್ಕೃತಿ, ಕಲೆ ಉಳಿಸುವ ನಿಟ್ಟಿನಲ್ಲಿ ಪ್ರತಿಭಾ ಕಾರಂಜಿಯಂತಹ ಕಾರ್ಯಕ್ರಮಗಳನ್ನು ಶಿಕ್ಷಣ ಇಲಾಖೆ ಆಯೋಜಿಸಿಕೊಂಡು ಬರುತ್ತಿದೆ. ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಿಗಿಂತ ಯಾವುದೇ ವಿಷಯದಲ್ಲೂ ಕಡಿಮೆ ಇಲ್ಲ. ಮಕ್ಕಳಿಗೆ ಅವಕಾಶ ಕೊಟ್ಟರೆ ಅವರು ಸಾಧನೆ ಮಾಡುತ್ತಾರೆ. ಪೋಷಕರು ಮಕ್ಕಳಿಗೆ ಪ್ರೋತ್ಸಾಹ ನೀಡಬೇಕು ಎಂದರು.

ಈ ವೇಳೆ ಬಿಇಓ ಸಿ.ಎನ್.ರಾಜು, ಬಿಆರ್‌ಸಿ ಮಹೇಶ್, ಸಿಆರ್‌ಪಿ ಚೇತನ್ ಶರ್ಮಾ, ಮುಖ್ಯ ಶಿಕ್ಷಕಿ ನಾಗರತ್ನ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಕುಮಾರ್ ಸೇರಿದಂತೆ ಮಕ್ಕಳು ಹಾಜರಿದ್ದರು.



ಸಾಲಿಗ್ರಾಮ ಪಟ್ಟಣದ ಜೈನ ಸಮುದಾಯದ ಸ್ವಾತಂತ್ರ್ಯ ಹೋರಾಟಗಾರ ದಿ.ಎಸ್.ಜಿ.ವೃಷಭ ರಾಜಯ್ಯನವರ ಕುಟುಂಬಸ್ಥರು ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಸೋಮವಾರ ಮನೆ ತಾರಸಿಯಲ್ಲಿ ಧ್ವಜಾರೋಹಣ ನೆರವೇರಿಸಿದರು. ಕುಟುಂಬದ ಸದಸ್ಯ ಉದ್ಯಮಿ ಅಮರ್ ಜಿತ್ ಧ್ವಜಾರೋಹಣ ಮಾಡಿದರು.

ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳಿ: ಜವರೇಗೌಡ



ಪಿರಿಯಾಪಟ್ಟಣ, ಆ.21– ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳಬೇಕು ಎಂದು ಮಾಜಿ ರೋಟರಿ ಸಹಾಯಕ ರಾಜ್ಯಪಾಲ ಬಿ.ವಿ.ಜವರೇಗೌಡ ಕಿವಿಮಾತು ಹೇಳಿದರು.

ಪಟ್ಟಣದ ರೋಟರಿ ಭವನದಲ್ಲಿ ಪಿರಿಯಾಪಟ್ಟಣ ರೋಟರಿ ಮಿಡ್‌ಟೌನ್ ವತಿಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ತಾಲೂಕಿನ ಸರ್ಕಾರಿ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ದೇಶಭಕ್ತಿ ಗೀತೆ ಗಾಯನ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ರೋಟರಿ ವತಿಯಿಂದ ತಾಲೂಕಿನಾದ್ಯಂತ ಶಿಕ್ಷಣ, ಆರೋಗ್ಯ ಸೇರಿದಂತೆ ಹಲವು ಸಾಮಾಜಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ವಿದ್ಯಾರ್ಥಿಗಳಿಗೆ ದೇಶ ಪ್ರೇಮದ ಅರಿವು ಮೂಡಿಸಲು ದೇಶಭಕ್ತಿ ಗೀತೆ ಗಾಯನ ಸ್ಪರ್ಧೆ ಆಯೋಜಿಸಲಾಗಿದೆ ಎಂದರು. ರೋಟರಿ ಅಧ್ಯಕ್ಷ ಕೆ.ಎ.ಸತ್ಯನಾರಾಯಣ ಮಾತನಾಡಿದರು. ದೇಶಭಕ್ತಿ ಗೀತೆ ಗಾಯನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಚಿಕ್ಕ ನೇರಳೆ ಶಾಲೆಯ ಸಿಂಚನಾಗೆ 3 ಸಾವಿರ, ದ್ವಿತೀಯ ಸ್ಥಾನ ಪಡೆದ ಅತ್ತಿಗೋಡು ಶಾಲೆಯ ಗುರುಪ್ರಸಾದ್‌ಗೆ 2 ಸಾವಿರ, ತೃತೀಯ ಸ್ಥಾನ ಪಡೆದ ಕಂಪಲಾಪುರ ಶಾಲೆಯ ಸಂಜನಾಗೆ ಸಾವಿರ ರೂ. ಪ್ರೋತ್ಸಾಹ ಧನದ ಜೊತೆಗೆ ನೆನಪಿನ ಕಾಣಿಕೆ ನೀಡಲಾಯಿತು. ಅಲ್ಲದೇ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಿದ್ಯಾರ್ಥಿಗಳಿಗೆ ಸಮಾಧಾನ ಕರ ಬಹುಮಾನ ಮತ್ತು ಪ್ರಶಸ್ತಿ ಪತ್ರ ವಿತರಿಸಲಾಯಿತು. ತೀರ್ಪುಗಾರರಾಗಿ ಶಿಕ್ಷಕಿ ಜಯಂತಿ, ನಿವೃತ್ತ ಉಪನ್ಯಾಸಕ ಟಿ.ರಾಜು ಹಾಗೂ ರೋಟರಿ ಸಂಸ್ಥೆ ಮಾಜಿ ಅಧ್ಯಕ್ಷ ಬಸವೇಗೌಡ ಕಾರ್ಯ ನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ಬಿಇಓ ಬಸವರಾಜು, ರೋಟರಿ ಕಾರ್ಯದರ್ಶಿ ವಿನಯ್ ಶೇಖರ್, ಯುವಸೇವೆ ನಿರ್ದೇಶಕ ರಾಜೇಗೌಡ, ಮಾಜಿ ಅಧ್ಯಕ್ಷ ಅಣ್ಣಪ್ಪ, ರೊಟೆರಿಯನ್ ನಟರಾಜು ಮತ್ತಿತರಿದ್ದರು.

ಪ್ರವಾಹದಿಂದ ರಾಜ್ಯಾದ್ಯಂತ 600 ಕೋಟಿ ರೂ. ಹಾನಿ

ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಮಾಹಿತಿ



ಹೆಚ್.ಡಿ.ಕೋಟೆ, ಆ.21– ಪ್ರವಾಹದಿಂದ ರಾಜ್ಯಾದ್ಯಂತ 4 ಕಂದಾಯ ವಿಭಾಗಗಳ ವ್ಯಾಪ್ತಿಯ ಕೆರೆ, ಮನೆ, ಅಣೆಕಟ್ಟು, ರಸ್ತೆ, ಸೇತುವೆ ಸೇರಿದಂತೆ 600 ಕೋಟಿ ರೂ. ಹಾನಿಯಾಗಿದೆ. ಹೀಗಾಗಿ ತುರ್ತು ಕಾಮಗಾರಿ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ತಾಲೂಕಿನ ಕಬಿನಿ ಜಲಾಶಯಕ್ಕೆ ಭಾನುವಾರ ಭೇಟಿ ನೀಡಿ ಜಲಾಶಯ ಪರಿಶೀಲಿಸಿ ಮಾತನಾಡಿದ ಅವರು, ಈಗಾಗಲೇ ಹಾಸನ ಮತ್ತು ತುಮಕೂರು ಜಿಲ್ಲೆಗಳಲ್ಲಿ 50 ಕೋಟಿ ರೂ. ವೆಚ್ಚದಲ್ಲಿ ತುರ್ತು ಕಾಮಗಾರಿ ಕೈಗೊಳ್ಳಲು ಸೂಚಿಸಲಾಗಿದೆ. ಅದೇ ರೀತಿ ಮೈಸೂರು ವ್ಯಾಪ್ತಿಯಲ್ಲಿ 8.10 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲು ನೀರಾವರಿ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಪ್ರವಾಹದಿಂದಾಗಿ ಮನೆ ಸಂಪೂರ್ಣ ಹಾನಿಯಾದರೆ 5 ಲಕ್ಷ, ಬಿ.ಕೆಟಗಿರಿ ಮನೆ ಹಾನಿಗೆ 3 ಲಕ್ಷ ಹಾಗೂ ಸ್ವಲ್ಪ ಹಾನಿಯಾದ ಮನೆಗೆ 50 ಸಾವಿರ, ಪ್ರಾಣ ಹಾನಿ ಆದವರಿಗೆ 5 ಲಕ್ಷ ರೂ. ನೀಡುವಂತೆ ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಇದಕ್ಕಾಗಿ ಜಿಲ್ಲಾಧಿಕಾರಿಗಳ ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಖಾತೆಗಳಲ್ಲಿ 70ರಿಂದ 80 ಕೋಟಿ ಹಣ ಇದ್ದು ಖರ್ಚು ಮಾಡಲು ಆದೇಶಿಸಲಾಗಿದೆ ಎಂದರು.

ತಾರಕ ಏತ ನೀರಾವರಿ ಯೋಜನೆಯಡಿ ಕಬಿನಿ ಜಲಾಶಯದಿಂದ ತಾರಕ ಜಲಾಶಯಕ್ಕೆ ನೀರು ಎತ್ತಲು ಪಿಎಸ್ ಪೈಪ್ ಅಳವಡಿಸಿದ್ದು, ಆಗಿಂದಾಗ್ಗೆ ಸಮಸ್ಯೆ ಉಂಟಾಗಿ ಜಲಾಶಯಕ್ಕೆ ನೀರು ತುಂಬಿಸಲು ಸಾಧ್ಯವಾಗಿಲ್ಲ. ಹಾಗಾಗಿ ಎಂಎಸ್ ಪೈಪ್ ಅಳವಡಿಸಲು ರೈತರು ಈ ಹಿಂದೆ ಒತ್ತಾಯಿಸಿದ್ದರು. ನೀರಾವರಿ ಇಲಾಖೆ ಇದರ ಅಂದಾಜು ಪಟ್ಟಿ ತಯಾರಿಸಿದ್ದು, ಇನ್ನೂ ಕಾಮಗಾರಿ ಪ್ರಾರಂಭಿಸಿಲ್ಲ ಎಂದರು.

ಕಬಿನಿ ಜಲಾಶಯದ ಹಿನ್ನೀರಿನಲ್ಲಿ ಖಾಸಗಿ ರೆಸಾರ್ಟ್‌ನವರು ಇಲಾಖೆ ಅನುಮತಿ ಪಡೆಯದೆ ಬೋಟ್‌ಗಳಲ್ಲಿ ಪ್ರವಾಸಿಗರನ್ನು ಕರೆದೊಯ್ಯುತ್ತಿರುವ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾಂಗ್ರೆಸ್ ಬಗ್ಗೆ ವಾಗ್ದಾಳಿ ನಡೆಸಿದ ಸಚಿವರು ಅವರಿಗೆ ಆರೋಪ ಮಾಡುವುದು ಬಿಟ್ಟರೆ ಬೇರೆ ಕೆಲಸವಿಲ್ಲ. ಕಾಂಗ್ರೆಸ್ ಆಡಳಿತದಲ್ಲಿ ಜನತೆಗೆ ಯಾವ ಕೊಡುಗೆ ನೀಡಿದ್ದಾರೆ ಎಂದು ಪ್ರಶ್ನಿಸಿದ ಅವರು, ಕ್ಷೀರ ಭಾಗ್ಯ, ಅನ್ನಭಾಗ್ಯ ಬಿಜೆಪಿ ಸರ್ಕಾರದ ಭಾಗ್ಯಗಳು. ಕಾಂಗ್ರೆಸ್‌ನವರು ದೌರ್ಭಾಗ್ಯ ಮಾಡುವುದರಲ್ಲಿ ಮುಂದಿದ್ದಾರೆ ಎಂದರು. ಇದೇ ವೇಳೆ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಂಕರೇಗೌಡ, ಮುಖ್ಯ ಇಂಜಿನಿಯರ್ ಆರ್.ಎಲ್.ವೆಂಕಟೇಶ್, ಅಧೀಕ್ಷಕ ಇಂಜಿನಿಯರ್ ಶಿವಮಹದೇವಯ್ಯ, ಮೋಹನ್ ಕುಮಾರ್, ಕಬಿನಿ ಕಾರ್ಯಪಾಲಕ ಅಭಿಯಂತರದ ಚಂದ್ರಶೇಖರ್, ಸಹಾಯಕ ಕಾರ್ಯಪಾಲಕ ಅಭಿಯಂತರ ರಾಮೇಗೌಡ, ಉಷಾ, ಸಹಾಯಕ ಇಂಜಿನಿಯರ್‌ಗಳಾದ ರಮೇಶ್ ಬಾಬು, ವಿಶ್ವನಾಥ್, ನಟಶೇಖರ್, ಗೌಸಿಯಾ ತಾಜ್, ಗೇಜ್ ನಾಗರಾಜ್, ಇನ್ಸ್‌ಪೆಕ್ಟರ್ ಗಳಾದ ಬಸವರಾಜ್ ಆನಂದ್, ಎಸ್‌ಐಗಳಾದ ಜಯಪ್ರಕಾಶ್, ಶ್ರವಣ ರೆಡ್ಡಿ, ಹಾಜರಿದ್ದರು.

ಮೀನು ಹರಾಜು

ಬನ್ನೂರು, ಆ.21– ಇಲ್ಲಿನ ಮಲಿಯೂರು ಗ್ರಾಪಂ ವ್ಯಾಪ್ತಿಯ ಬಿ.ಬೆಟ್ಟಹಳ್ಳಿ ದೊಡ್ಡ ಕೆರೆ ಮೀನು ಪಾಶುವಾರು ಹಕ್ಕನ್ನು 5 ವರ್ಷದವರೆಗೆ ವಿಲೇವಾರಿ ಮಾಡಲು ಮಲಿಯೂರು ಗ್ರಾಪಂ ಕಚೇರಿ ಆವರಣದಲ್ಲಿ ಆ.26 ರಂದು ಬೆಳಗ್ಗೆ 11 ಗಂಟೆಗೆ ಹರಾಜು ಸಭೆ ಕರೆಯಲಾಗಿದೆ ಎಂದು ಪಿಡಿಓ ಅಶೋಕ್ ತಿಳಿಸಿದ್ದಾರೆ.

ಹನಗೋಡು ಗ್ರಾಪಂಗೆ ಜಯಲಕ್ಷ್ಮಿ ಅಧ್ಯಕ್ಷೆ



ಹನಗೋಡು, ಆ.21– ಹನಗೋಡು ಗ್ರಾಪಂ ಅಧ್ಯಕ್ಷೆಯಾಗಿ ಜಯಲಕ್ಷ್ಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದಿನ ಅಧ್ಯಕ್ಷೆ ನೂರ್ ಜಹಾನ್ ಅವರು ಅವಿಶ್ವಾಸ ಮಂಡನೆಯಲ್ಲಿ ಪದಚ್ಯುತಗೊಂಡ ಹಿನ್ನೆಲೆಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜಯಲಕ್ಷ್ಮಿ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಶ್ರೀಧರ್ ಘೋಷಿಸಿದರು.

ಈ ವೇಳೆ ಉಪಾಧ್ಯಕ್ಷ ಬೋರೇಗೌಡ, ಸದಸ್ಯರಾದ ಶಿವಣ್ಣ, ಸಂತೋಷ್, ಮಹದೇವ್, ಈಶ್ವರ್, ಚೆನ್ನಯ್ಯ, ಛಾಯ, ರತ್ನ, ಶಶಿಕಲಾ, ಪವಿತ್ರ ಹಾಜರಿದ್ದರು. ಎಎಸ್‌ಐ ಸುರೇಶ್, ಮುಖ್ಯ ಪೇದೆ ನಹೀಂ ಅಹಮ್ಮದ್ ಸೂಕ್ತ ಬಂದೋಬಸ್ತ್ ಏರ್ಪಡಿಸಿದ್ದರು.



ನಂಜನಗೂಡು ತಾಲೂಕಿನ ದೇವರಾಯಶೆಟ್ಟಿಪುರ ಗ್ರಾಪಂನಲ್ಲಿ 75ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಗ್ರಾಪಂ ಅಧ್ಯಕ್ಷ ಸಿದ್ದರಾಜು ಧ್ವಜಾರೋಹಣ ನೆರವೇರಿಸಿದರು. ಗ್ರಾಪಂ ಉಪಾಧ್ಯಕ್ಷೆ ವಿಶಾಲಕ್ಷಮ್ಮ, ಸದಸ್ಯರಾದ ಬಿ.ಟಿ.ಕುಮಾರ್, ಜಗದೀಶ್, ಚೆನ್ನಕೇಶವ, ಭಾನುಬೇಗಂ, ಶಾರದಮ್ಮ, ಪುಷ್ಪರಾಣಿ, ಪಾಂಡು, ಶಿಲ್ಪ, ಜವರೇಗೌಡ, ಪಿಡಿಓ ಮಹದೇವಸ್ವಾಮಿ ಇತರರಿದ್ದರು.

ಮಾಜಿ ಸಿಎಂ ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆತ ಖಂಡಿಸಿ

ತಿ.ನರಸೀಪುರ, ಹೆಚ್.ಡಿ.ಕೋಟೆಯಲ್ಲಿ ಪ್ರತಿಭಟನೆ





ತಿ.ನರಸೀಪುರ/ಹೆಚ್.ಡಿ.ಕೋಟೆ, ಆ.21– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಘಟನೆ ಖಂಡಿಸಿ ತಿ.ನರಸೀಪುರದಲ್ಲಿ ತಾಲೂಕು ಕುರುಬರ ಸಂಘ ಹಾಗೂ ಸಿದ್ದರಾಮಯ್ಯ ಅಭಿಮಾನಿಗಳು ಮತ್ತು ಹೆಚ್.ಡಿ. ಕೋಟೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ತಿ.ನರಸೀಪುರ: ಪಟ್ಟಣದ ಕುರುಬರ ಸಂಘದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ವಿದ್ಯೋದಯ ಕಾಲೇಜು ವೃತ್ತದಿಂದ ಖಾಸಗಿ ಬಸ್ ನಿಲ್ದಾಣದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಬಳಿಕ ಅಲ್ಲಿ ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆದು ಸರ್ಕಾರ, ಬಿಜೆಪಿ ಹಾಗೂ ಆರ್‌ಎಸ್‌ಎಸ್ ಕಾರ್ಯಕರ್ತರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ಅಧ್ಯಕ್ಷ ಪುರಸಭಾ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಮಾತನಾಡಿ, ವಿಪಕ್ಷ ನಾಯಕ ಸಿದ್ದರಾಮಯ್ಯನವರು ಕೊಡಗಿನಲ್ಲಿ ಅತಿವೃಷ್ಟಿಯಿಂದ ಹಾನಿಗೊಳಗಾದ ಪ್ರದೇಶದ ವೀಕ್ಷಣೆಗೆ ತೆರಳಿದ್ದ ವೇಳೆ ಅವರ ಕಾರಿನ ಮೇಲೆ ಮೊಟ್ಟೆ ಎಸೆಯುವ ಮೂಲಕ ಅಪಮಾನ ಮಾಡಲಾಗಿದೆ. ಘಟನೆ ಸಂಬಂಧ ಆರೋಪಿಗಳನ್ನು ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಕಾನೂನು ಸುವ್ಯವಸ್ಥೆ ವೈಫಲ್ಯ ಹೊಣೆ ಹೊತ್ತು ಗೃಹ ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಘಟನೆ ಕುರಿತು ಮಾಜಿ ಸಿಎಂಗಳಾದ ಯಡಿಯೂರಪ್ಪ ಹಾಗೂ ಕುಮಾರಸ್ವಾಮಿ ಅವರೇ ಖಂಡಿಸಿ, ತೀವ್ರ ವಿಷಾದ ವ್ಯಕ್ತಪಡಿಸಿರುವುದರಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡಲೇ ಘಟನೆ ಬಗ್ಗೆ ವಿವರಣೆ ಕೊಟ್ಟು ಕ್ಷಮೆಯಾಚಿಸಬೇಕು. ರಾಜ್ಯ ಸರ್ಕಾರ ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸದಿದ್ದಲ್ಲಿ ರಾಜ್ಯಾದ್ಯಂತ ಹೋರಾಟ ತೀವ್ರಗೊಳಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಅಧ್ಯಕ್ಷ ಟಿ.ಎಸ್. ಪ್ರಶಾಂತ್ ಬಾಬು, ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮಣ್ಣ, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಮಾಜಿ ಸದಸ್ಯ ಎಂ.ರಮೇಶ್, ಜಿಪಂ ಮಾಜಿ ಸದಸ್ಯ ಕೆ.ಮಹದೇವ, ಸಂಘದ ಕಾರ್ಯಾಧ್ಯಕ್ಷ ಪುಳ್ಳಾರಿ ಮಹದೇವ, ಪ್ರಧಾನ ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು, ಉಪಾಧ್ಯಕ್ಷ ಎಂ.ವೆಂಕಟೇಶ್, ಎಂ. ನಾಗೇಶ, ಖಜಾಂಚಿ ಮಲ್ಲೇಶ, ನಿರ್ದೇಶಕರಾದ ಲೋಹಿತ್, ಎಂ.ಬಿ.ಚಂದ್ರಶೇಖರ್, ಹೆಚ್.ಸಿ.ಅರುಣ್ ಕುಮಾರ, ಮಹೇಶ, ಎಲ್.ಗುರುಮೂರ್ತಿ, ಕೆ.ಅಶ್ವಿನ್ ಕುಮಾರ್, ಶಿವಶಂಕರ, ಗೋವರ್ಧನ, ಗೋಪಾಲ, ಗುತ್ತಿಗೆದಾರ ಮಾಧು, ಮುಖಂಡರಾದ ಹಾಳೆಗೌಡ, ಫೈನಾನ್ಸ್ ಕಾಂತರಾಜು, ಕೆ.ಎಂ.ಮಂಜು, ಸಂತೃಪ್ತಿ ಕುಮಾರ, ವಿಓ ಹುಂಡಿ ಬಸವರಾಜು, ಎಂ.ಕೆ.ಸಹದೇವ, ವಾಟಾಳು ನಾಗೇಶ, ಎಂಆರ್‌ಎಫ್ ರವಿ, ಎಸ್.ಕೆ.ನವೀನ ಇನ್ನಿತರರಿದ್ದರು.

ಹೆಚ್.ಡಿ.ಕೋಟೆ: ಪಟ್ಟಣದ ಕಾಂಗ್ರೆಸ್ ಕಚೇರಿ ಆವರಣದಲ್ಲಿ ಜಮಾಯಿಸಿದ ಕಾರ್ಯಕರ್ತರು, ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಬಾಪೂಜಿ ವೃತ್ತದಲ್ಲಿ ಬಿಜೆಪಿ ನಾಯಕರ ಪ್ರತಿಕೃತಿ ದಹಿಸಿ, ಟೈರ್‌ಗೆ ಬೆಂಕಿ ಹಚ್ಚಿ ಕೆಲಕಾಲ ರಸ್ತೆ ತಡೆ ನಡೆಸಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಪ್ರವಾಹ ಪೀಡಿತ ಪ್ರದೇಶ ವೀಕ್ಷಣೆಗೆ ತೆರಳಿದ್ದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೆ ರಕ್ಷಣೆ ನೀಡುವಲ್ಲಿ ಬಿಜೆಪಿ ಸರ್ಕಾರ ವಿಫಲವಾಗಿದೆ ಎಂದು ಅವರು ಇದೇ ವೇಳೆ ದೂರಿದರು.

ಆ.26 ರಂದು ನಡೆಯುವ 'ಮಡಿಕೇರಿ ಚಲೋ' ಕಾರ್ಯಕ್ರಮಕ್ಕೆ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸೋಣ ಎಂದರು. ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಮಾದಪ್ಪ, ಜಿಪಂ ಮಾಜಿ ಸದಸ್ಯರಾದ ಚಿಕ್ಕವೀರನಾಯಕ, ಹೆಚ್.ಸಿ.ಮಂಜುನಾಥ್, ಬಿ.ವಿ.ಬಸವರಾಜು, ಭಾಗ್ಯಲಕ್ಷ್ಮಿ, ಬೋವಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ.ಸೀತಾರಾಂ, ಪುರಸಭಾ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಎಚ್.ಸಿ. ನರಸಿಂಹಮೂರ್ತಿ, ಮೈಮುಲ್ ನಿರ್ದೇಶಕ ಈರೇಗೌಡ, ಯೂತ್ ಕಾಂಗ್ರೆಸ್ ಅಧ್ಯಕ್ಷ ಹೊಂಡಾ ನಯಾಜ್, ಶಿವರಾಜು, ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ಶಿವಪ್ಪ ಕೋಟೆ, ತಾಲೂಕು ಅಧ್ಯಕ್ಷ ಆನಂದ್, ಮುಖಂಡರಾದ ಸತೀಶ್‌ಗೌಡ, ಪ್ರದೀಪ್, ರಾಜು, ಐಡಿಯಾ ವೆಂಕಟೇಶ್, ಪ್ರೇಮ್‌ಸಾಗರ್, ಶೇಖರ್, ರವಿ, ಬಾಲಯ್ಯ, ಅಂಕನಾಯಕ, ಮಲ್ಲೇಶ, ರಾಜೇಗೌಡ, ರಮೇಶ್, ಚಾಮರಾಜ, ಶಿವರಾಜ್, ರಾಜಪ್ಪ ಚಿಕ್ಕಣ್ಣ ಇದ್ದರು.

'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿ

ಮೈಸೂರು ವಾರಿಯರ್ಸ್‌ಗೆ ವೀರೋಚಿತ ಸೋಲು



ಬೆಂಗಳೂರು, ಆ.21– ಶ್ರೇಯಸ್ ಗೋಪಾಲ್ ಆಲ್‌ರೌಂಡರ್ ಪ್ರದರ್ಶನದ ನಡುವೆಯೂ ಮೈಸೂರು ವಾರಿಯರ್ಸ್, ಗುಲ್ಬರ್ಗ ಮೈಸ್ಟಿಕ್ಸ್ ವಿರುದ್ಧ 7 ರನ್‌ಗಳ ವೀರೋಚಿತ ಸೋಲು ಅನುಭವಿಸಿತು.

ಇಂದಿನ ಪಂದ್ಯಗಳು
ಸಮಯ ಮಧ್ಯಾಹ್ನ 3ಕ್ಕೆ
ಗುಲ್ಬರ್ಗ ಮೈಸ್ಟಿಕ್ಸ್ / ಶಿವಮೊಗ್ಗ ಸ್ಟ್ರೈಕರ್ಸ್
ಸಮಯ ಸಂಜೆ 7ಕ್ಕೆ
ಮಂಗಳೂರು ಯುನೈಟೆಡ್ / ಹುಬ್ಬಳ್ಳಿ ಟೈಗರ್ಸ್

ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿಯ 27ನೇ ಪಂದ್ಯದಲ್ಲಿ ಕಾಡಿದ ಮಳೆಯಿಂದಾಗಿ ವಿಜೆಡಿ ನಿಯಮದನ್ವಯ 11 ಓವರ್‌ಗಳಲ್ಲಿ 110 ರನ್ ಗೆಲುವಿನ ಗುರಿ ಪಡೆದ ಮೈಸೂರು ವಾರಿಯರ್ಸ್ 7 ವಿಕೆಟ್ ನಷ್ಟಕ್ಕೆ 102 ರನ್ ಗಳಿಸಿ ಸೋಲೊಪ್ಪಿಕೊಂಡಿತು. ಬೌಲಿಂಗ್‌ನಲ್ಲಿ ಮಿಂಚಿದ್ದ ಶ್ರೇಯಸ್ ಗೋಪಾಲ್, ಬ್ಯಾಟಿಂಗ್‌ನಲ್ಲಿ 32 ರನ್ ಸಿಡಿಸಿದರೂ ಜಯ ಸಾಧ್ಯವಾಗಲಿಲ್ಲ. ಪವನ್ ದೇಶಪಾಂಡೆ 25 ರನ್ ಗಳಿಸಿ ನಿರಾಸೆ ಮೂಡಿಸಿದರು. ಗುಲ್ಬರ್ಗಾ ಪರ ಕೋದಂಡ ಅಜಿತ್ ಕಾರ್ತಿಕ್, ರಿತೇಶ್ ಭಟ್ಕಳ್ ತಲಾ 2 ವಿಕೆಟ್ ಪಡೆದು ಮಿಂಚಿದರು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ ಮೈಸ್ಟಿಕ್ಸ್‌ಗೆ ನಾಯಕ ಮನೀಶ್ ಪಾಂಡೆ ಆಸರೆಯಾದರು. ಕೇವಲ 27 ಎಸೆತಗಳಲ್ಲಿ 3 ಬೌಂಡರಿ, 4 ಸಿಕ್ಸರ್ ಸಹಿತ 57 ರನ್ ಸಿಡಿಸಿ ಅಜೇಯರಾಗುಳಿದರು. ಜೆಶ್ವತ್ ಆಚಾರ್ಯ 34 ಹಾಗೂ ಕೃಷ್ಣನ್ ಶ್ರೀಜಿತ್ 30ರನ್‌ಗಳ ಕಾಣಿಕೆ ನೀಡಿದರು. 17ನೇ ಓವರ್ ವೇಳೆ ಮಳೆ ಬಂದ ಕಾರಣ ಪಂದ್ಯವನ್ನು ಅಷ್ಟಕ್ಕೆ ಮೊಟಕುಗೊಳಿಸಲಾಯಿತು. ಅಂತಿಮವಾಗಿ ಗುಲ್ಬರ್ಗಾ ಮೈಸ್ಟಿಕ್ಸ್ 17.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 148 ರನ್ ಗಳಿಸಿತು. ಬಿರುಸಿನ ಅರ್ಧಶತಕ ದಾಖಲಿಸಿದ ಮನೀಶ್ ಪಾಂಡೆ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಬೆಂಗಳೂರು ಬ್ಲಾಸ್ಟರ್ಸ್‌ಗೆ ರೋಚಕ ಜಯ



ಹುಬ್ಬಳ್ಳಿ ಟೈಗರ್ಸ್ ಹಾಗೂ ಬೆಂಗಳೂರು ಬ್ಲಾಸ್ಟರ್ಸ್ ನಡುವಿನ ರೋಚಕ ಹಣಾಹಣಿಯಲ್ಲಿ ಬೆಂಗಳೂರು ಬ್ಲಾಸ್ಟರ್ಸ್ 2 ರನ್‌ಗಳ ಭರ್ಜರಿ ಜಯಗಳಿಸಿದೆ. ಸಂಜೆ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ಬ್ಲಾಸ್ಟರ್ಸ್ ತಂಡದ ಶಿವಕುಮಾರ್ ರಕ್ಷಿತ್ 50 ರನ್, ಅನಿರುದ್ಧ್ ಜೋಶಿ 33 ರನ್, ಕುಶ ಮರಾಠೆ 23 ರನ್‌ಗಳ ಕೊಡುಗೆ ನೀಡಿದರೆ ನಾಯಕ ಮಯಾಂಕ್ ಅಗರ್ವಾಲ್ ಸೇರಿದಂತೆ ಇತರೆ ಆಟಗಾರರಿಂದ ಉತ್ತಮ ಪ್ರದರ್ಶನ ಮೂಡಿಬರಲಿಲ್ಲ. ಅಂತಿಮವಾಗಿ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 171 ರನ್‌ಗಳಿಸಿತು. ಹುಬ್ಬಳ್ಳಿ ಪರ ಶರಣ್ ಗೌಡ್ 3, ಬಿಯು ಶಿವಕುಮಾರ್ 2 ವಿಕೆಟ್ ಪಡೆದರು.

172 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಹುಬ್ಬಳ್ಳಿ ಟೈಗರ್ಸ್ ಪರ ಮೊಹಮ್ಮದ್ ತಾಹಾ ಸ್ಫೋಟಕ ಬ್ಯಾಟಿಂಗ್ ನಡೆಸಿದರೂ ಜಯ ಸಾಧಿಸುವಲ್ಲಿ ವಿಫಲರಾದರು. ಕೇವಲ 45 ಎಸೆಗಳನ್ನು ಎದುರಿಸಿದ ಮೊಹಮ್ಮದ್ ತಾಹಾ 5 ಬೌಂಡರಿ, 5 ಸಿಕ್ಸರ್ ಸಹಿತ 71 ರನ್ ಬಾರಿಸಿದರು. ಕಡೆಯ ಹಂತದಲ್ಲಿ ತುಷಾರ್ ಸಿಂಗ್(25), ಅಭಿಮನ್ಯು ಮಿಥುನ್(15) ಗೆಲುವಿಗೆ ಪ್ರಯತ್ನಿಸಿದರೂ ಸಫಲರಾಗಲಿಲ್ಲ. ಅಂತಿಮವಾಗಿ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 169 ರನ್‌ಗಳಷ್ಟೇ ಶಕ್ತವಾಯಿತು. ಬೆಂಗಳೂರು ಪರ ಜಗದೀಶ್ ಸುಚಿತ್ 3, ಸಂತೋಕ್ ಸಿಂಗ್ 2 ವಿಕೆಟ್ ಪಡೆದು ಗಮನ ಸೆಳೆದರು.

ಗೂಗಲ್ ಕ್ರೋಮ್ ಬಳಕೆದಾರರೇ ಎಚ್ಚರ!

ಹ್ಯಾಕರ್‌ಗಳು ಸುಲಭವಾಗಿ ಹ್ಯಾಕ್ ಮಾಡುವ ಸಾಧ್ಯತೆ: ಕೇಂದ್ರ ಸರ್ಕಾರ

ನವದೆಹಲಿ, ಆ.21– ಗೂಗಲ್ ಕ್ರೋಮ್ ಬಳಕೆದಾರರಿಗೆ ಭಾರತ ಸರ್ಕಾರ ಎಚ್ಚರಿಕೆ ನೀಡಿದೆ. ಗೂಗಲ್ ಕ್ರೋಮ್‌ನಲ್ಲಿ ಕೆಲವು ನ್ಯೂನತೆಗಳು ಕಂಡುಬಂದಿವೆ. ಇದರಿಂದಾಗಿ ಹ್ಯಾಕರ್‌ಗಳು ಅದರ ಲಾಭ ಪಡೆದು ಕಂಪ್ಯೂಟರ್ ಅನ್ನು ಸುಲಭವಾಗಿ ಹ್ಯಾಕ್ ಮಾಡುವ ಸಾಧ್ಯತೆಯಿದೆ ಎಂದು ಐಟಿ ಸಚಿವಾಲಯದ ಭಾರತೀಯ ಕಂಪ್ಯೂಟರ್ ತುರ್ತು ಪ್ರತಿಕ್ರಿಯೆ ತಂಡ (SERT-in) ಡೆಸ್ಕ್ ಟಾಪ್ ಬಳಕೆದಾರರಿಗೆ ಎಚ್ಚರಿಕೆ ನೀಡಿದೆ. SERT-in ಈ ಹಿಂದೆ Apple iOS, Apple Ipad ಮತ್ತು Macosನಲ್ಲಿನ ದೋಷಗಳ ಬಗ್ಗೆಯೂ ಎಚ್ಚರಿಕೆ ನೀಡಿತ್ತು.

SERT-in ನೀಡಿರುವ ಮಾಹಿತಿ ಪ್ರಕಾರ, ಗೂಗಲ್ ಕ್ರೋಮ್‌ನಲ್ಲಿ ಹಲವು ನ್ಯೂನತೆಗಳಿವೆ. ಈ ನ್ಯೂನತೆಗಳ ಲಾಭ ಪಡೆದುಕೊಂಡು ಹ್ಯಾಕರ್‌ಗಳು ನಿಮ್ಮ ಸಿಸ್ಟಮ್‌ಗೆ ರಚಿಸಲಾದ ಕಾರ್ಪಟೆಡ್ ರಿಕ್ವೆಸ್ಟ್ ಕಳುಹಿಸುವ ಮೂಲಕ ಆರ್ಬಿಟರಿ ಕೋಡ್‌ಅನ್ನು ಕಾರ್ಯಗತಗೊಳಿಸಬಹುದು. ಈ ಕೋಡ್ ನಿಮ್ಮ ಕಂಪ್ಯೂಟರ್‌ನ ಆ್ಯಂಟಿ ವೈರಸ್ ನ್ನು ಬೈಪಾಸ್ ಮಾಡಿ ಸಂಪೂರ್ಣವಾಗಿ ಹ್ಯಾಕ್ ಮಾಡಬಹುದಾಗಿದೆ.

ಹ್ಯಾಕಿಂಗ್ ತಪ್ಪಿಸಲು ಬಳಕೆದಾರರು ಮೊದಲು ತಮ್ಮ ಗೂಗಲ್ ಕ್ರೋಮ್ ಅನ್ನು ಇತ್ತೀಚಿನ ಆವೃತ್ತಿಗೆ ನವೀಕರಿಸಬೇಕಾಗುತ್ತದೆ. ಅಲ್ಲದೇ, ಬಳಕೆದಾರರು ಅಪರಿಚಿತ ಲಿಂಕ್‌ಗಳನ್ನು ಕ್ಲಿಕ್ ಮಾಡುವುದನ್ನು ಮತ್ತು ಅಪರಿಚಿತ ವೆಬ್‌ಸೈಟ್‌ಗಳಿಗೆ ಭೇಟಿ ನೀಡುವುದನ್ನು ತಪ್ಪಿಸಬೇಕು. ಇದರಿಂದ ನಿಮ್ಮ ಕಂಪ್ಯೂಟರ್ ಸುರಕ್ಷಿತವಾಗಿರಲಿದೆ.

ಅನಾಮಧೇಯ ವಿಡಿಯೋ ಕಾಲ್ ರಿಸೀವ್ ಮಾಡಿ ಪೇಚಿಗೆ ಸಿಲುಕಿದ ಪತ್ರಕರ್ತ

ಮೈಸೂರು, ಆ.21– ಅನಾಮಧೇಯ ವಿಡಿಯೋ ಕಾಲ್ ರಿಸೀವ್ ಮಾಡಿದ ಖಾಸಗಿ ಚಾನಲ್ ವರದಿಗಾರ ಪೇಚಿಗೆ ಸಿಲುಕಿರುವ ಘಟನೆ ಮೈಸೂರಿನಲ್ಲಿ ವರದಿಯಾಗಿದೆ.

ವಿಡಿಯೋ ಕಾಲ್ ನಂತರ ವಾಟ್ಸಾಪ್‌ಗೆ ಅಶ್ಲೀಲ ವಿಡಿಯೋ ಕಳುಹಿಸಿ ಹಣ ನೀಡುವಂತೆ ಬ್ಲಾಕ್‌ಮೇಲ್ ಮಾಡುತ್ತಿರುವುದಾಗಿ ಹುಣಸೂರು ತಾಲೂಕು ಕೊಳಗಟ್ಟ ಗ್ರಾಮದ ನಿವಾಸಿ ಖಾಸಗಿ ಚಾನಲ್‌ವೊಂದರ ವರದಿಗಾರ ವಾಸು ಅಲಿಯಾಸ್ ವಿಶಾಲ್, ಸೈಬರ್ ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ.

ಅನಾಮಧೇಯ ಇಂದು ಬೆಳಗ್ಗೆ 9 ಗಂಟೆಗೆ ವಾಟ್ಸಾಪ್ ವಿಡಿಯೋ ಕಾಲ್ ಮಾಡಿದ. ರಿಸೀವ್ ಮಾಡಿದಾಗ ಯುವತಿ ಕಾಣಿಸಿಕೊಂಡಳು. ನಂತರ ಆಕೆ ನಗ್ನವಾಗುತ್ತಿದ್ದ ಕಾರಣ ನಾನು ವಿಡಿಯೋ ಕಾಲ್ ಸ್ಥಗಿತಗೊಳಿಸಿದೆ. ಆದರೂ ಸುಮ್ಮನಿರದೆ ಪದೇ ಪದೆ ವಿಡಿಯೋ ಕಾಲ್ ಮಾಡುತ್ತಿದ್ದ ಕಾರಣ ರಿಸೀವ್ ಮಾಡಿದೆ. ಆಗ ವಿಡಿಯೋ ಕಾಲ್ ರೆಕಾರ್ಡ್ ಮಾಡಿಕೊಂಡು ಅದರೊಂದಿಗೆ ಅಶ್ಲೀಲ ವಿಡಿಯೋ ಎಡಿಟ್ ಮಾಡಿ ನಿಮ್ಮ ಫೇಸ್‌ಬುಕ್ ಸ್ನೇಹಿತರಿಗೆ ಕಳುಹಿಸುವುದಾಗಿ ಬೆದರಿಕೆ ಹಾಕಿದರು. ನನ್ನ ಫೇಸ್‌ಬುಕ್ ಸ್ನೇಹಿತರ ಖಾತೆಗಳಿರುವ ಸ್ಕ್ರೀನ್ ಶಾಟ್ ಕಳುಹಿಸಿ, ಹಣ ನೀಡುವಂತೆ ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ ಎಂದು ಆತ ಸೈಬರ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಅಶ್ಲೀಲ ವಿಡಿಯೋ ಶೇರ್ ಮಾಡುವುದಾಗಿ ಹೆದರಿಸಿ ಹಣಕ್ಕಾಗಿ ಬ್ಲಾಕ್‌ಮೇಲ್ ಮಾಡುತ್ತಿರುವ ಆರೋಪಿಗಳ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ರಾಧಾ–ಕೃಷ್ಣ ವೇಷ ತೊಟ್ಟು ಗಮನ ಸೆಳೆದ ಮಕ್ಕಳು






ಮೈಸೂರು, ಆ.21(ಎಸ್‌ಪಿಎನ್)– ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಶ್ರೀ ಕೃಷ್ಣ ಜನ್ಮಾಷ್ಟಮಿಯ ಅಂಗವಾಗಿ ಬಾಲ ರಾಧಾ–ಕೃಷ್ಣ ವೇಷ ಭೂಷಣ ಸ್ಪರ್ಧೆ ಏರ್ಪಡಿಸಲಾಗಿತ್ತು. 6 ವರ್ಷದೊಳಗಿನ ಮಕ್ಕಳಿಗೆ ಏರ್ಪಡಿಸಲಾಗಿದ್ದ ಬಾಲ ರಾಧಾಕೃಷ್ಣ ವೇಷಭೂಷಣ ಸ್ಪರ್ಧೆಯಲ್ಲಿ 250ಕ್ಕೂ ಹೆಚ್ಚು ಮಕ್ಕಳು ಕೃಷ್ಣ ಮತ್ತು ರಾಧೆಯ ವೇಷತೊಟ್ಟು ಎಲ್ಲರ ಗಮನ ಸೆಳೆದರು.

ಈ ಸ್ಪರ್ಧೆಯಲ್ಲಿ ಹೆಬ್ಬಾಳ ನಿವಾಸಿ ಪ್ರದೀಪ್ ಬಾಬು ಮತ್ತು ರಂಜಿತಾ ದಂಪತಿ ಪುತ್ರ ಜೀವಿತ್ 2,222 ರೂ., ಪ್ರಥಮ ನಗದು ಬಹುಮಾನ ಪಡೆದರು. ಪಡುವಾರಹಳ್ಳಿ ನಿವಾಸಿ ವಿನೋದರಾಜ್ ಮತ್ತು ಲಾವಣ್ಯ ದಂಪತಿ ಪುತ್ರ ಶೌರ್ಯ ವಿ.ರಾಜ್ 1,111 ರೂ., ದ್ವಿತೀಯ ನಗದು ಬಹುಮಾನ ಪಡೆದರು. ಕನಕಗಿರಿ ನಿವಾಸಿ ಶಿವು ಅವರ ಪುತ್ರಿ ಎಸ್.ದಿಶಾ ಅವರಿಗೆ 555ರೂ., ತೃತೀಯ ನಗದು ಬಹುಮಾನ ಪಡೆದುಕೊಂಡರು. ಅಲ್ಲದೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಲ್ಲಾ ಮಕ್ಕಳಿಗೂ ಸಮಾಧಾನಕರ ಬಹುಮಾನ ನೀಡಿ, ಪ್ರೋತ್ಸಾಹಿಸಲಾಯಿತು.

ಈ ವೇಳೆ ಬಿಜೆಪಿ ನಗರ ಅಧ್ಯಕ್ಷ ಟಿ.ಎಸ್.ಶ್ರೀವತ್ಸ, ಸುಜೀವ್ ಫೌಂಡೇಶನ್ ಅಧ್ಯಕ್ಷ ರಾಜಾರಾಂ, ಉದ್ಯಮಿ ಪುರಾಣಿಕ್, ಮಹರ್ಷಿ ವಿದ್ಯಾಸಂಸ್ಥೆಯ ತೇಜಸ್ ಶಂಕರ್, ಜೀವಧಾರ ರಕ್ತನಿಧಿಯ ಗಿರೀಶ್, ಜಯಶ್ರೀ, ಸವಿತಾ, ಅಪೂರ್ವ ಸುರೇಶ್ , ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ವಿನಯ್ ಕಣಗಾಲ್, ರಾಕೇಶ್ ಕುಂಚಿಟಿಗ, ಸುಚೇಂದ್ರ, ಚಕ್ರಪಾಣಿ ಇದ್ದರು.

ನಟರಾಜ ಪ್ರಾಥಮಿಕ ಶಾಲೆ: ನಟರಾಜ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಕೃಷ್ಣಜನ್ಮಾಷ್ಟಮಿಯ ಪ್ರಯುಕ್ತ ಪ್ರೀ ಕೆಜಿ, ಎಲ್‌ಕೆಜಿ ಮತ್ತು ಯುಕೆಜಿ ಮಕ್ಕಳಿಗೆ ಕೃಷ್ಣ ಮತ್ತು ರಾಧೆಯ ವೇಷಭೂಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ವೇಳೆ ತೀರ್ಪುಗಾರರಾಗಿ ವೀಣಾ ಉದಯ್, ರಮಾ ಜಯರಾಮ್ ಹಾಗೂ ಶಾಲೆಯ ಮುಖ್ಯೋಪಾಧ್ಯಾಯಿನಿ ಕೆ.ಪದ್ಮ ಮತ್ತು ಸಹ ಶಿಕ್ಷಕಿಯರು ಭಾಗವಹಿಸಿದ್ದರು.

ಡೆಂಗ್ಯೂ, ಚಿಕೂನ್‌ಗುನ್ಯ ಸೇರಿ ಸಾಂಕ್ರಾಮಿಕ ರೋಗ ತಡೆಗೆ ಕಾರ್ಯಾಚರಣೆ



ಮೈಸೂರು, ಆ.21(ಎಸ್‌ಪಿಎನ್)– ಮೈಸೂರು ಸೇರಿದಂತೆ ರಾಜ್ಯಾದ್ಯಂತ ಡೆಂಗ್ಯೂ ಜ್ವರ, ಚಿಕೂನ್‌ಗುನ್ಯ ಮತ್ತು ಇತರೆ ಸಾಂಕ್ರಾಮಿಕ ರೋಗಗಳು ಹರಡದಂತೆ ತಡೆಗಟ್ಟಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆ ಜಂಟಿ ಕಾರ್ಯಾಚರಣೆಗೆ ಮುಂದಾಗಿವೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಿಪರೀತ ಮಳೆ ಹಾಗೂ ವಾತಾವರಣ ಬದಲಾವಣೆಯಿಂದ ಈಡಿಸ್ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗಿದ್ದು, ಇದರಿಂದ ಡೆಂಗ್ಯೂ ಜ್ವರವು ಪ್ರಮುಖ ಆರೋಗ್ಯ ಸಮಸ್ಯೆಯಾಗಿ ಕಾಣಿಸಿಕೊಳ್ಳುತ್ತಿದೆ. ಈ ರೋಗಗಳ ಹತೋಟಿಗೆ ಆರೋಗ್ಯ ಇಲಾಖೆ ಸಿಬ್ಬಂದಿ ಸಮರೋಪಾದಿ ಕ್ರಮ ಕೈಗೊಳ್ಳಬೇಕು ಎಂದು ಎರಡೂ ಇಲಾಖೆಯ ಆಯುಕ್ತರು ಎಲ್ಲಾ ಜಿಲ್ಲಾ ಹಂತದ ಅಧಿಕಾರಿಗಳಿಗೆ ಸೂಚಿಸಿದ್ದಾರೆ.


ಡೆಂಗ್ಯೂ ಹಾಗೂ ಚಿಕೂನ್‌ಗುನ್ಯ ರೋಗವು ಈಡಿಸ್ ಸೊಳ್ಳೆಯಿಂದ ಹರಡುತ್ತದೆ ಮತ್ತು ಈ ವೈರಸ್ ಕಾಯಿಲೆಗೆ ನಿರ್ದಿಷ್ಟ ಲಸಿಕೆ, ಚಿಕಿತ್ಸೆ ಲಭ್ಯವಿಲ್ಲ. ಹಾಗಾಗಿ ರೋಗ ನಿಯಂತ್ರಣಕ್ಕಾಗಿ ಈಡಿಸ್ ಸೊಳ್ಳೆಗಳ ನಿಯಂತ್ರಣಕ್ಕೆ ಪ್ರಾಮುಖ್ಯತೆ ನೀಡಬೇಕು. ಈ ಸೊಳ್ಳೆಗಳು, ಮನೆ, ಹೋಟೆಲ್‌ಗಳು, ಅಂಗಡಿ–ಮುಂಗಟ್ಟು, ವಾಣಿಜ್ಯ ಸಂಕೀರ್ಣಗಳು, ನಿರ್ಮಾಣ ಹಂತದ ಕಟ್ಟಡ ಕಾಮಗಾರಿ ಪ್ರದೇಶದಲ್ಲಿನ ನೀರಿನ ಶೇಖರಣೆ ಜಾಗ ಹಾಗೂ ಘನತ್ಯಾಜ್ಯ ವಸ್ತುಗಳಲ್ಲಿ ಸಂಗ್ರಹವಾಗುವ ಮಳೆ ನೀರಿನಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುವುದರಿಂದ ಇವುಗಳ ನಿಯಂತ್ರಣಕ್ಕೆ ಹೆಚ್ಚಿನ ಗಮನ ಹರಿಸಬೇಕು.


ಸಾರ್ವಜನಿಕರಲ್ಲಿ ಜಾಗೃತಿ: ಸಮರ್ಪಕ ಕುಡಿಯುವ ನೀರಿನ ಸರಬರಾಜು ಮತ್ತು ನಿರ್ವಹಣೆ, ನಿರುಪ್ರಯುಕ್ತ ಹಾಗೂ ಘನತ್ಯಾಜ್ಯ ವಸ್ತುಗಳ ಶೀಘ್ರ ವಿಲೇವಾರಿ, ಖಾಲಿ ನಿವೇಶನಗಳಲ್ಲಿ ತ್ಯಾಜ್ಯ ವಸ್ತುಗಳನ್ನು ಸಂಗ್ರಹವಾಗದಂತೆ ನೋಡಿಕೊಳ್ಳುವುದು. ಸೊಳ್ಳೆಗಳ ಉತ್ಪತ್ತಿ ತಡೆಗಟ್ಟಲು ನಾಗರಿಕರ ನೀತಿ ಸಂಹಿತೆ ಜಾರಿಗೊಳಿಸಬೇಕು. ಸೊಳ್ಳೆ ಉತ್ಪತ್ತಿ ತಾಣಗಳ ಸಮೀಕ್ಷೆ ಮತ್ತು ನಿರ್ಮೂಲನಾ ಕಾರ್ಯವನ್ನು ಆಯಾ ನಗರ ಸಭೆ ಹಾಗೂ ನಗರ ಪಾಲಿಕೆ ವತಿಯಿಂದ ಕ್ರಮ ಕೈಗೊಳ್ಳಬೇಕು. ತುರ್ತು ಸಂದರ್ಭಗಳಲ್ಲಿ ಮಾತ್ರವೇ ಭಾರತ ಸರ್ಕಾರದಿಂದ ಅನುಮೋದಿತ ಧೂಮೀಕರಣ ರಾಸಾಯನಿಕ ಬಳಸಿ ಒಳಾಂಗಣ ಧೂಮೀಕರಣಗೊಳಿಸಬೇಕು. ಮನೆ ಸುತ್ತಮುತ್ತಲಿನ ಪರಿಸರ ಹಾಗೂ ರಾಸಾಯನಿಕ ಮತ್ತು ಸರ್ಕಾರಿ ಕಟ್ಟಡಗಳು, ವಾಣಿಜ್ಯ ಸಂಕೀರ್ಣಗಳು, ಶಾಲೆ, ಆಸ್ಪತ್ರೆ ಆವರಣ, ಸಿನಿಮಾ ಮಂದಿರ, ಕೈಗಾರಿಕೆ ಪ್ರದೇಶಗಳಲ್ಲಿ ಸೊಳ್ಳೆ ಉತ್ಪತ್ತಿ ತಡೆಗಟ್ಟಲು ಕ್ರಮ ಕೈಗೊಳ್ಳುವುದು ಸೇರಿದಂತೆ ಒಟ್ಟು 10 ಅಂಶಗಳ ಪಟ್ಟಿಯನ್ನು ಪಾಲಿಸುವಂತೆ ಎಲ್ಲಾ ಸಿಬ್ಬಂದಿಗೆ ಸೂಚಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಒಟ್ಟಾರೆ ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ರೋಗವಾಹಕ ಆಶ್ರಿತ ರೋಗಗಳ ಮುಂಜಾಗ್ರತಾ ಹಾಗೂ ನಿಯಂತ್ರಣ ಕ್ರಮಗಳನ್ನು ಜಿಲ್ಲಾ ಹಂತದಲ್ಲಿ ಅನುಷ್ಠಾನಗೊಳಿಸುವಂತೆ ಆರೋಗ್ಯ ಇಲಾಖೆಯೊಂದಿಗೆ ಸಹಕರಿಸುವ ಮೂಲಕ ಇತರೆ ಸಾಂಕ್ರಾಮಿಕ ರೋಗಗಳು ಉಲ್ಬಣವಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ನಗರಾಭಿವೃದ್ಧಿ ಮತ್ತು ಆರೋಗ್ಯ ಇಲಾಖೆಯ ಆಯುಕ್ತರು ಜಂಟಿ ಸುತ್ತೋಲೆ ಹೊರಡಿಸಿದ್ದು, ಈಗಾಗಲೇ ಈ ಕುರಿತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇದರ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ಮನಸೂರೆಗೊಂಡ ಅಲ್ಲಮರ ಕಥಕ್ ಶೈಲಿಯ ನೃತ್ಯ ರೂಪಕ

ಅಲ್ಲಮ ಪ್ರಭು ಅವರನ್ನು ಜಗತ್ತಿಗೆ ಪರಿಚಯಿಸುವಲ್ಲಿ ವಿಫಲ





ಮೈಸೂರು, ಆ.21(ಎಸ್‌ಪಿಎನ್)– ರಾಮಕೃಷ್ಣನಗರದ ರಮಾ ಗೋವಿಂದ ಕಲಾಮಂದಿರದಲ್ಲಿ ಆರ್ಟಿಕ್ಯುಲೇಟ್ ಟ್ರಸ್ಟ್ ಫಾರ್ ಆರ್ಟ್ಸ್ ಕಲಾವಿದರು ಒಂದೂವರೆ ಗಂಟೆ ಪ್ರಸ್ತುತ ಪಡಿಸಿದ 'ಅಲ್ಲಮರ ಕಥಕ್ ಶೈಲಿಯ' ನೃತ್ಯರೂಪಕ ಎಲ್ಲರ ಮನಸೂರೆಗೊಂಡಿತು.

ಆರ್ಟಿಕ್ಯುಲೇಟ್ ಟ್ರಸ್ಟ್ ಫಾರ್ ಆರ್ಟ್ಸ್ ವತಿಯಿಂದ ಆಯೋಜಿಸಿದ್ದ ಕಥಕ್ ಶೈಲಿಯ ಅಲ್ಲಮ ನೃತ್ಯರೂಪಕದಲ್ಲಿ ಭಾಗವಹಿಸಿದ್ದ ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮೀಜಿ ಮಾತನಾಡಿ, ತತ್ವಜ್ಞಾನಿ ಅಲ್ಲಮ ಪ್ರಭು ಅವರನ್ನು ಜಗತ್ತಿಗೆ ಪರಿಚಯಿಸುವಲ್ಲಿ ಇಂದಿನ ಸಂಶೋಧಕರು ಮತ್ತು ಚಿಂತಕರು ವಿಫಲರಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಜಗತ್ತಿನಲ್ಲಿ ನೂರಾರು ತತ್ವಜ್ಞಾನಿಗಳಿದ್ದಾರೆ. ಅವರ ತತ್ವಗಳನ್ನು ಅಧ್ಯಯನ ನಡೆಸಿ ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು. ಆದರೆ, ಅಲ್ಲಮರ ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಠಿಣವಾದ ಕೆಲಸ. ಹಾಗಾಗಿ ಅಲ್ಲಮ ಜಗತ್ತಿನ ತತ್ವಜ್ಞಾನಿಗಳ ಪೈಕಿ ವಿಶಿಷ್ಟ ಸ್ಥಾನದಲ್ಲಿ ನಿಲ್ಲುತ್ತಾರೆ. ಅಂತೆಯೇ ಆರ್ಟಿಕ್ಯುಲೇಟ್ ಟ್ರಸ್ಟ್ ಫಾರ್ ಆರ್ಟ್ಸ್ ಕಲಾವಿದರು ಒಂದೂವರೆ ಗಂಟೆಯಲ್ಲಿ ಪ್ರಸ್ತುತ ಪಡಿಸಿದ ಅಲ್ಲಮರ ಕಥಕ್ ಶೈಲಿಯ ನೃತ್ಯ ರೂಪಕ ಉತ್ತಮವಾಗಿ ಮೂಡಿಬಂದಿತು ಎಂದು ತಿಳಿಸಿದರು.

ಪ್ರಸ್ತುತ ದಿನಗಳಲ್ಲಿ ಅಲ್ಲಮರ ತತ್ವ ಮತ್ತು ವ್ಯಕ್ತಿತ್ವವನ್ನು ಕರ್ನಾಟಕ ಗಡಿ ದಾಟಿಸುವಲ್ಲಿ ನಾವು ವಿಫಲರಾಗಿದ್ದೇವೆ. ಈ ತಪ್ಪು ನಮ್ಮ ಕಾಲದಲ್ಲಿ ಆಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಅಲ್ಲಮ ಪ್ರಭು 12ನೇ ಶಿವಶರಣರಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ.ಅಲ್ಲಮ ಊರೂರು ಸುತ್ತಿ ಆಧ್ಯಾತ್ಮ ಸಾಧಕರಾದರು ಎಂದು ಹೇಳಲಾಗುತ್ತಿದೆ. ಬಸವಣ್ಣನ ಕಲ್ಯಾಣಕ್ಕೆ ಆಗಮಿಸಿ ಅನುಭವ ಮಂಟಪದಲ್ಲಿ ಶೂನ್ಯ ಸಿಂಹಾಸನದ ಅಧ್ಯಕ್ಷ ಪಟ್ಟ ಅಲಂಕರಿಸಿದ ಪ್ರಸಂಗವನ್ನು ವಿವರಿಸಿದರು.

ಅಲ್ಲಮರ ವಚನಗಳು 'ಗುಹೇಶ್ವರ' ಎಂಬ ಅಂಕಿತ ನಾಮದಿಂದ ರಚಿತವಾಗಿದೆ. ಅಲ್ಲಮನ ವಚನಗಳಲ್ಲಿ ಆಧ್ಯಾತ್ಮ ಹಾಗೂ ತಾತ್ವಿಕ ವಿಚಾರಗಳಿವೆ. ಅಲ್ಲಮರ ಜೀವನ ಚರಿತ್ರೆ ಕುರಿತು ನಿಖರವಾಗಿ ನಿರೂಪಿಸಲು ಸಾಧ್ಯವಿಲ್ಲದಿದ್ದರೂ, ಅಲ್ಲಮನ ಬಗ್ಗೆ 13ನೇ ಶತಮಾನದಲ್ಲಿ ಹರಿಹರ ಕವಿಯೂ ಪ್ರಭುದೇವರ ರಗಳೆಯಲ್ಲಿ ಸಾಕಷ್ಟು ವಿವರಣೆಗಳನ್ನು ನೀಡಲು ಪ್ರಯತ್ನಿಸಿದ್ದಾರೆ ಎಂದರು.

ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರನ್ನು ಸನ್ಮಾನಿಸಲಾಯಿತು. ಸಾಲೂರು ಮಠದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ನೀಲಕಂಠ ಸ್ವಾಮಿ ಮಠದ ಶ್ರೀ ಸಿದ್ದಮಲ್ಲ ಸ್ವಾಮೀಜಿ, ಮುಡಿಗುಂಡ ಮಠದ ಶ್ರೀ ಶ್ರೀಕಂಠಸ್ವಾಮೀಜಿ, ಪರಶಿವಮೂರ್ತಿ ಸ್ವಾಮೀಜಿ ಉಪಸ್ಥಿತರಿದ್ದರು.

ದಿನೇಶ್ ಕೋಚಿಂಗ್ ಸೆಂಟರ್‌ನಿಂದ ಕನ್ನಡ ಚರ್ಚಾಸ್ಪರ್ಧೆ

ರಾಜಕೀಯ ಪಕ್ಷಗಳ ಉಚಿತ ಭಾಗ್ಯಗಳು ದೇಶದ ಅಭಿವೃದ್ಧಿಗೆ ಮಾರಕ ವಿಷಯ ಕುರಿತು ಪರ–ವಿರೋಧ ವಾದ ಮಂಡನೆ



ಮೈಸೂರು, ಆ.21(ಎಸ್‌ಬಿಡಿ)– ಮೈಸೂರಿನ 'ದಿನೇಶ್ ಕೋಚಿಂಗ್ ಸೆಂಟರ್' ವತಿಯಿಂದ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಕನ್ನಡ ಚರ್ಚಾಸ್ಪರ್ಧೆ ಏರ್ಪಡಿಸಲಾಗಿತ್ತು.

ಮೈಸೂರಿನ ಸರಸ್ವತಿಪುರಂ ರೋಟರಿ ಪಶ್ಚಿಮ ಶಾಲೆ ಸಭಾಂಗಣದಲ್ಲಿ ಭಾನುವಾರ ನಡೆದ ಜಿಲ್ಲಾ ಮಟ್ಟದ ಅಂತರ ಪ್ರೌಢಶಾಲಾ ಕನ್ನಡ ಚರ್ಚಾಸ್ಪರ್ಧೆಗೆ ಚಾಲನೆ ನೀಡಿದ ಉದ್ಯಮಿ ಕೆ.ವಿ.ಅನಂತಶಯನ ಮಾತನಾಡಿ, ಸ್ವಾತಂತ್ರ್ಯ ಭಾರತದ ಅಮೃತ ಮಹೋತ್ಸವ ಸಂಭ್ರಮಕ್ಕೆ ಸಾಕ್ಷಿಯಾಗಿರುವ ನಾವೆಲ್ಲಾ ಪುಣ್ಯವಂತರು. ವಿದ್ಯಾರ್ಥಿಗಳು ಮುಖ್ಯವಾಗಿ ಆತ್ಮಸ್ಥೈರ್ಯ ಹೆಚ್ಚಿಸಿಕೊಳ್ಳಬೇಕು. ಪ್ರತಿ ಅವಕಾಶಗಳನ್ನೂ ಸದುಪಯೋಗ ಮಾಡಿಕೊಳ್ಳಬೇಕು. ಸಾಧನೆಯ ಹಾದಿಯಲ್ಲಿ ಮುನ್ನುಗ್ಗಬೇಕು ಎಂದು ಕಿವಿಮಾತು ಹೇಳಿದರಲ್ಲದೆ, ಚರ್ಚಾ ಸ್ಪರ್ಧೆಯ ಮಹತ್ವವನ್ನು ಮನದಟ್ಟು ಮಾಡಿದರು. ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿದ್ದ 25ಕ್ಕೂ ಹೆಚ್ಚು ಶಾಲೆಗಳ ವಿದ್ಯಾರ್ಥಿಗಳು 'ಚುನಾವಣಾ ಸಮಯದಲ್ಲಿ ರಾಜಕೀಯ ಪಕ್ಷಗಳು ಘೋಷಿಸುವ ಉಚಿತ ಭಾಗ್ಯಗಳು ದೇಶದ ಅಭಿವೃದ್ಧಿಗೆ ಮಾರಕ' ಕುರಿತು ಪರ ಮತ್ತು ವಿರೋಧವಾಗಿ ತಮ್ಮ ವಾದ ಮಂಡಿಸಿದರು.

ಸ್ಪರ್ಧೆಯಲ್ಲಿ ಶಾರದಾ ಪಬ್ಲಿಕ್ ಶಾಲೆಯ ತಾನ್ಯಾ ಎಲ್.ಭಟ್ ಪ್ರಥಮ, ವಿಜಯ ವಿಠ್ಠಲ ವಿದ್ಯಾಶಾಲೆಯ ಸುಪ್ರಜ್ಞ ಜೈನ್ ದ್ವಿತೀಯ ಹಾಗೂ ಭಾರತೀಯ ವಿದ್ಯಾಭವನದ ಕಿರಣ್ ಕುಮಾರ್ ತೃತೀಯ ಸ್ಥಾನ ಪಡೆದರು. ಇವರಿಗೆ ಕ್ರಮವಾಗಿ 3 ಸಾವಿರ ರೂ., 2 ಸಾವಿರ ಹಾಗೂ 1 ಸಾವಿರ ರೂ. ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು. ಇವರೊಂದಿಗೆ ಭಾರತೀಯ ವಿದ್ಯಾ ಭವನದ ಪ್ರದ್ಯುಮ್ನ ಭಟ್ ಹಾಗೂ ಶಾರದಾ ಪಬ್ಲಿಕ್ ಶಾಲೆಯ ವೈ.ಡಿ.ಚೈತ್ರಗೆ ಸಮಾಧಾನಕರ ಬಹುಮಾನ ನೀಡಲಾಯಿತು. ಶಾರದಾ ಪಬ್ಲಿಕ್ ಶಾಲೆ ಸಮಗ್ರ ಪಾರಿತೋಷಕಕ್ಕೆ ಭಾಜನವಾಯಿತು.

ಕಾರ್ಯಕ್ರಮದಲ್ಲಿ ದಿನೇಶ್ ಕೋಚಿಂಗ್ ಸೆಂಟರ್‌ನ ಮುಖ್ಯಸ್ಥ ಎನ್.ವಿ.ದಿನೇಶ್, ಸೌಮ್ಯ ದಿನೇಶ್, ಪ್ರಶಾಂತ್ ರಾಜ್, ತೀರ್ಪುಗಾರರಾದ ಎ.ವಿಶ್ವನಾಥ್, ಸಿ.ವಿಶ್ವನಾಥ್, ಸತ್ಯಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.